Legislature. I request the hon'ble Minister to send orders to the Special D.C. stating that whichever lands that have come to the people i.e., lands vested with the people under the Land Reforms Act should not come under the purview of the Urban Land Ceiling Act. Let these poor people spend no money and time with offices and let them not be under the mercy of the officials. I am sure the Hon'ble Minister will heed to my request. Now, finally I come to the Act itself the Municipal Act and the Corporation Act, they are without teeth and I should say they have no jaws. The Mayors of City Corporations have actually no powers at all; they are there at the mercy of the Commissioner. I would like to request the Minister who is also the Law Minister to see that the Act is amended suitably to give more powers to Mayors of City Corporations. He had also promised on different occasions and on different platforms in this regard. I hope the Minister will see to it that more powers are given to local self-Governments. Now we are talking about decentralisation of powers through Zilla Parishads, and mandals. But, Here, I would like to say that there should not be an interference from the Government side in the working of the municipalities or Corporations. And so also due to non-action on the part of the Government the Mangalore City Corporation is losing Rs. 60,000 every month, the market has been stopped and in this regard to which I have already spoken to the Minister. I need not explain because Sri A Lakshmisagar know about it. I am sure that the Hon'ble Minister will see that the problem is solved I am not going to speak much more. Now I come to the administration of justice. The Minister is wellversed in legal Department and I would only request him to sanction another Civil Court to South Kanara District because the work load is too much on the already existing 3 civil courts. With these few words I thank the speaker and I conclude my speech. I also request the Government to give proper weightage to our suggestions.

SRI MOHAMMAD MOEINUDDIN (Chamarajpet) — Mr. Speaker Sir, I thank you very much for the opportunity provided to me to participate in the Demands for Urban Development. I wholeheartedly support the demands before the House. The Annual report of the Department is a routine one. What has been done has not been properly high lighted. I do not know why the Hon'ble Minister should feel shy to high light them. Much has been done :

(1) Elections to all local bodies ;

(2) Constitution of local finance commission–Setting up of the Directorate of Municipalities which within 10 months has collected 25 crores–all time high:

(3) Awards to best municipalities;

(4) Charles Corea Committee etc.

Importance of local institutions in the economy of a country needs no elaboration. Their working should be watched carefully by the Government, as they are directly connected with the people. What father of the nation, Mahatma Gandhi observed in 1920s or so at Madurai.

"It is high time that municipal councillors understand the responsibility attached to the office. They must not be used as stepping-stones to fame or reknown. In the course of having to advise different friends in different parts of India, it has been my painful duty to study the working of the many municipal councils, and I have discovered that much of their time is wasted in mutual recriminations and wranglings. I have noticed that in many municipalities corruption is rampant during election time, whereas every municipal councillor should consider himself a trustee and custodian of public morals". This state of affairs, even after a lapse of 66 years is very true.

Pandit Jawaharlal Nehru was elected chairman in the year 1923 of Allahabad municipality. The importance Panditji attached to these local bodies after he became Prime Minister, defining the place of municipal bodies Panditji said :

"Presumably, in spite of their bigness, the City fathers do come in intimate touch with the people of the city and their problems. And nothing is more interesting and fascinating than dealing directly with this human problem, and the problem of a great city. In a sense, I rather envy people at times".

The administration Report is silent about the urban poor, and gives to the reader an impression that poverty does not exist in urban areas Even to this day the exact number of urban poor is not known. The yard-stick and criteria are also not properly defined. Based on NSS survey of 1961–62 and taking into account the consumer price index 40% of 1.02 crores of people are below the poverty line in the urban areas. This works out to a little over 40 lakhs of people. No imaginative welfare schemes/proposals exist.

Elevation of rural poverty programme has attracted the maximum attention of the Government so much so Rs. 10 crores

have been spent on schemes like IRDP, Antyodaya, Trysem and DWCRA excluding several centrally sponsored schemes. But in the Budget only two schemes No. 16 and 23 on page 24 and 26 relates to urban poor. It looks as if poverty does not exist in urban areas. I would like to point out that 40% of the urban population are poor. Because of the neglect of the urban poor and the poverty the urban prime rate is alarmingly on the increase and this cannot be controlled by the police force alone. This is only a palati measure. Government should go to the root of the problem, identify the problems which are more of socio economic nature which are responsible for urban poverty. This will not only help us to create an atmosphere of social justice but also generates wealth Otherwise, if we continue to neglect this aspect i.e., urban poverty the cities like Bangalore will start decaying like Calcutta and it will be too late for any Government to arrest such a tendency of decay which will overtake all measures government intend to adopt at a late hour within no time.

It is also necessary to remember that the urban rich will not be able to enjoy the comforts if they are surrounded by too many urban poor. This is particularly so from the point of quality of life, security and urban ecology. It appears as though the urban economy needs the poor for its own prosperity. In the process the urban poor are being exploited by the urban rich which is a serious socio-economic injustice for which the Government directly or indirectly wilfully or otherwise encouraging being in the euphoria that there is no poverty in the urban areas.

Urban Development :—

Urban Development is very haphazard. There is no semblance of any order. Urban development should take into account the intrinsic and deep rooted socio-economic structure existing in its scheme of urban expansion which factor is completely ignored by urban planners as there is no urban planning at all. Urban development Boards, what they are trying to super-impose the latest trends in urban developments without taking note of the above factors.

Check on urban growth of expanding cities like Bangalore Mysore, Hubli, Dharwar is very essential. Otherwise, the haphazard unsystematic and unplanned manner growth will affect the coming generation. For this establishment of satellite towns around city centres is a must.

The working of important agencies like Bangalore City Corporation is geared predominently to commercial interests like hotels,

shopping complexes, cinemas etc. Civic aspects of life and urban welfare aspects of the people totally lost sight of. This trend should be reversed with iron will by the Government. The municipal corporation should have the assistance of the body of experts like social scientists, architects and urban planners were totally left out to the detriment of the higher aspects of life.

Typical examples of absence of planning by previous government creating chaotic and unmanageable conditions in Bangalore City.

Bangalore City performs several levels of functions. The first is traditional function. Bangalore was an important township of the old Mysore area and this traditional function was confined to inner part of the City like Chamarajpet, Chickpet, Malleswaram, Basavanagudi, areas.

But after the shifting of the capital from Mysore to Bangalore it has been performing the function of a state capital. This function was super-imposed on the traditional function without planing. In the late 60's Bangalore also become southern centre of national, political and economic activities. So it started performing the national function. Even at the time of planning was done for this purpose.

Suddenly in the late 70's Bangalore also started functioning as an international centre. This was the last straw on the camel's back. The result is Bangalore is shivering with traditional, national and international functions without administrative urban-infra structure and appropriate socioeconomic structure to bear all the burdens. It is a matter of great pity that past government has miserably failed to realise this naked truth and this failure is the root of urban poverty. I appeal to our Government that it should not also become indifferent to these hidden realities of the urban poverty and to take up immediately the haphazard growth and plan out counter measures to reduce the urban poverty by checking the haphazard urban growth. I hope the newly constituted metropolitan authority will take note of these factors and formulate appropriate policies and programmes, There is another peculiar trend in urban development which is emerging in Karnataka that is majority of our once historically flourishing towns are on the way to extinction like Srirangapatna, Ganjam, Kolar, Sira, Madugiri, Mulbagal, Hagarebommanahalli, Basavakalyam, Melkote and the list is never ending. I appeal to the Government to take up immediate appropriate survey of such towns and devise appropriate policies and programmes to prevent these historic and other

small towns from disappearing from the urban map of Karnataka Their development is a must. Not only to retain our historical past but also it relieves the population pressure on the neighbouring districts and regional headquarters. I conclude this by supporting the demand of the department and pleading to provide more to implement the following suggestion to relieve urban poverty and promote systematic urban development.

1. Undertake detail survey of urban poverty, identify the factors responsible for this phonomens.

2. Prepare a master-plan to elevate the urban poor on the lines of anti-poverty programmes of the rural poor and Implement them without any bias and interference.

3. To take up Immediate survey of declining, dieing towns, identify the reasons and take immediate remedial measures for orderly development.

4. Slum-clearance programme has become a dismal failure. Instead of construction of houses funds may be diverted, meant for construction to change the cology of the slum areas by providing sanitation facilities, piped water, street lights and basic health and educational facilities in addition to recreation facilities for children who are at present playing in the gutters and drains.

5. Conduct a survey of boys and girls between ages of 16 and 30. Train them on the lines of trysem. Identify these sulms-dwellers and provide them loans for improving the existing and pursuing their occupations like washing clothes, etc,

6. Expand and extend Industries, and business activities programme in the urban poor areas by providing loans to only urban poor so that the urban poverty can be eliminated. Ministries and secretariats concerned at large with the masses like revenue, rural development etc. may be shifted to a place centrally located like Chitaradurga, Davanagere so that the pressure in Bangalore is relieved, distress caused financially to the mass who come to Bangalore for salvation of their problems is reduced. This may be relevant in the context of zilla Parishat and district Governments.

Government must also see that the local bodies also prepare five year perspective plans which could get ini grated with the State Five Year Plan. If this happens funding of various projects and proposals will not be a problem. Karnataka must become the first state to take up this exercise. Karnataka, by doing so will

be become the first State in the whole of the country to set a tread in that direction.

The recommendations of the local Finance Commission must be implemented immediately. Already there is a considerable delay. We should be proud of it and implement it so that Karnataka can become a good example to all other states in the field of local bodies administration.

Madam, I conclude with the above suggestions and through you Madam, I would like to appeal to the municipal civic employees all over the State not to resort to any strike on 6-3-86. Strike by them will put the common man with great difficulties. Long pending demands since 20 years have received urgent and immediate attention by our Government. In such a situation they should not go on strike. I thank the Chair for giving me an opportunity to speak and I wholeheartedly support the demand. Thank you.

† ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಸನ್ಮಾನ್ಯ ಅಧ್ಯಕ್ಷಿಣಿ ಅವರೇ, ನಾನು ನಗರಾಭಿವೃದ್ಧಿ ಬಗ್ಗೆ ಮಾತ್ರ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಆರೋಗ್ಯ ಇಲಾಖೆ ಬಗ್ಗೆ ನನ್ನ ಸ್ನೇಹಿತರಾದಂಥ ಪಂಪಾವತಿ ಅವರು ಮಾತನಾಡುತ್ತಾರೆಂದು ನಂಬುತ್ತೇನೆ. ಇವೊತ್ತಿನ ದಿವಸದ ಬೇಡಿಕೆಗಳಲ್ಲಿ ಅನೇಕ ಇಲಾಖೆಗಳು ಇವೆ. ಇದರಲ್ಲಿ ಶಾಸಕಾಂಗ, ನ್ಯಾಯಾಂಗ ಎಲ್ಲವೂ ಸೇರಿದೆ. ಇದರಿಂದ ಯಾವುದರ ಮೇಲೆ ಮಾತನಾಡಬೇಕೆಂಬುದೇ ನನಗೆ ತಿಳಿಯುತ್ತಿಲ್ಲ. ಶಾಸಕಾಂಗದ ಬಗ್ಗೆ ಒಂದು ವಿಷಯವನ್ನು ಮೊದಲು ತಮ್ಮ ಗಮನಕ್ಕೆ ತಂದು ನಂತರ ಬೇರೆ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ತಮಗೆಲ್ಲಾ ತಿಳಿದಿರುವಂತೆ ಕಳೆದ ತಿಂಗಳ ೨೭ ಮತ್ತು ೨೮ ರಂದು ಈ ಶಾಸಕಾಂಗದಲ್ಲಿ ಕೆಲಸ ಮಾಡುತ್ತಿರುವ ವರದಿಗಾರರೆಲ್ಲರೂ ಮುಷ್ಕರ ಹೂಡಿದ್ದರು. ಅವರು ಎರಡು ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮುಷ್ಕರ ಹೂಡಿದ್ದರು. ಅವರ ಎರಡು ಬೇಡಿಕೆಗಳು ಈ ರೀತಿ ಇದೆ.—

೧) ವರದಿಗಾರರ ಹುದ್ದೆಯನ್ನು ಎರಡನೇ ದರ್ಜೆ ಗೆಜೆಟೆಡ್ ಹುದ್ದೆಗೆ ('ಬಿ' ವರ್ಗ) ಮೇಲ್ದರ್ಜೆಗೇರಿಸಬೇಕು. (ವೇತನ ಶ್ರೇಣಿ ರೂ. ೧೦೫೦-೧೯೫೦)

೨) ಅಭಿಲೇಖನಾಧಿಕಾರಿಗಳು ಮತ್ತು ವರದಿಗಾರರಿಗೆ ರೂ. ೧೦೦ ವಿಶೇಷ ವೇತನ ನೀಡಬೇಕು.

ಇದರ ಮೇಲೆ ಆಗ ಇಲ್ಲಿ ಚರ್ಚೆ ನಡೆಯಿತು. ನಾನು ಸಹ ಆಗ ಮಾತನಾಡಿದ್ದೇನೆ. ಈ ಹಿಂದೆ ಸಹ ಇವರ ವಿಚಾರದಲ್ಲಿ ಅನೇಕ ಸಲ ಚರ್ಚೆ ಮಾಡಿದ್ದೇವೆ. ಈ ವರದಿಗಾರರು ತಮ್ಮ ಬೇಡಿಕೆಗಳ ಈಡೇರಿಕೆ ಸಂಬಂಧದಲ್ಲಿ ಮಾನ್ಯ ಮಂತ್ರಿಗಳನ್ನು ಸಹ ಕಂಡು ಮಾತನಾಡಿದ್ದಾರೆ. ಅಧ್ಯಕ್ಷರನ್ನು ಮತ್ತು ಮೇಲ್ಮನೆಯ ಸಭಾಪತಿಯವರನ್ನು ಕಂಡು ಮಾತನಾಡಿದ್ದಾರೆ. ಇವರ ವಿಚಾರದಲ್ಲಿ ಇಲ್ಲಿ ಚರ್ಚೆ ನಡೆದಾಗ ಮಾನ್ಯ ಅಧ್ಯಕ್ಷರು ಎಲ್ಲ ವಿರೋಧಪಕ್ಷದ ಶಾಸಕರನ್ನು ಕರೆಸಿ ಮಾತನಾಡುವುದಾಗಿ ಇಲ್ಲಿ ಭರವಸೆ ಕೊಟ್ಟಿದ್ದರು. ಆದರೆ ಅದರಂತೆ ನಮ್ಮನ್ನು ಕರೆದು ಮಾತನಾಡಲಿಲ್ಲ. ಅವರು ಕೊಟ್ಟ ಭರವಸೆ ಭರವಸೆ ಆಗಿಯೇ ಉಳಿದಿದೆ. ಈ ಸಂದರ್ಭದಲ್ಲಿ ತಮ್ಮ ಮೂಲಕ ಅಧ್ಯಕ್ಷರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ಈ ಪ್ರಶ್ನೆಯನ್ನು ಕೂಡಲೇ ಇತ್ಯರ್ಥ ಮಾಡಬೇಕು. ಒಂದು ಸಮಂಜಸವಾದಂಥ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಅವರು ಕಳೆದ ತಿಂಗಳ ೨೭ ಮತ್ತು ೨೮ ರಂದು ಮುಷ್ಕರ ನಡೆಸಿದ ಸಂದರ್ಭದಲ್ಲಿ ಇಲ್ಲಿ ಸಾಕಷ್ಟು ರದ್ಧಾಂತ ನಡೆಯಿತು. ಟೇಪ್-ರೆಕಾರ್ಡ್

---

† ಈ ಚಿಹ್ನೆಯೂ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮೂಲಕವೇ ಸಭೆ ನಡೆಸಬಹುದೆಂದು ಸಹ ತಿಳಿಸಿದರು. ಆದರೆ ಆ ಎರಡು ದಿವಸಗಳಲ್ಲಿ ಟೇಪ್–ರೆಕಾರ್ಡ್‌ನಲ್ಲಿ ರೆಕಾರ್ಡ್ ಆದಂಥ ನಡವಳಿಕೆಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಂಡು ಲಿಪ್ಯಂತರ ಗೊಳಿಸಲು ಬೇರೆ ಯಾರ ಕೈಯಲ್ಲಿಯೂ ಸಾಧ್ಯವಾಗದ ಕಾರಣ, ಶಾಸಕಾಂಗದ ವರದಿಗಾರರೇ ಆ ಕೆಲಸ ಮಾಡಬೇಕೆಂದು ಮೆಮೋ ಸಹ ನೀಡಿದ್ದಾರೆ. ವರದಿಗಾರರೇ ಆ ಕೆಲಸ ಮಾಡಬೇಕೆಂದು ಕರೆದು ಹೇಳಿದ್ದಾರೆ. ಅವರಿಗೆ ಅಡ್ಡ ಬಿದ್ದಿದ್ದಾರೆ ಅಂದರೆ ಅವರೇ ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಈ ಎಲ್ಲ ಕಾರಣಗಳಿಂದ ಅವರ ಬೇಡಿಕೆಗಳಿಗೆ ಮಾನ್ಯತೆ ಕೊಡುವುದು ಒಳ್ಳೆಯದು ಈ ವಿಚಾರದಲ್ಲಿ ಸರ್ಕಾರದವರು ಅದರಲ್ಲಿಯೂ ಮುಖ್ಯವಾಗಿ ಶಾಸಕಾಂಗದ ಮುಖ್ಯಸ್ಥರಾದಂಥ ಅಧ್ಯಕ್ಷರು ಈ ಮೊದಲೇ ಇಲ್ಲಿ ಕೊಟ್ಟ ಭರವಸೆಯಂತೆ ವಿರೋಧಪಕ್ಷದ ಶಾಸಕರುಗಳನ್ನು ಕರೆದು ಚರ್ಚೆ ಮಾಡಬೇಕು. ಒಟ್ಟಿನಲ್ಲಿ ಅವರಿಗೆ ನ್ಯಾಯ ದೊರಕಿಸಿಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ನ್ಯಾಯಾಂಗ ಇಲಾಖೆ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಶಿವಮೊಗ್ಗದಲ್ಲಿ ಡಿಸೆಂಬರ್ ಅಥವಾ ಜನವರಿ ತಿಂಗಳಲ್ಲಿ ಕರ್ನಾಟಕ ವಕೀಲರ ಒಂದು ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಮಾನ್ಯ ಲಕ್ಷ್ಮೀಸಾಗರ್ ಅವರು ಹಾಜರಿದ್ದರು. ಆ ಸಂದರ್ಭದಲ್ಲಿ ಅನೇಕ ವಿಷಯಗಳನ್ನು ಅಲ್ಲಿ ಸೇರಿದ್ದ ಲಾಯರ್‌ಗಳು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಅವುಗಳಲ್ಲಿ ಮುಖ್ಯವಾದ ವಿಷಯಗಳೆಂದರೆ, ಕೋರ್ಟ್ ಫೀ ರದ್ದು ಮಾಡಬೇಕು, ಪ್ರಾಪರ್ಟಿ ವ್ಯಾಲ್ಯೂ ನಿಗದಿ ಮಾಡುವಾಗ ಕೆಲವು ತೊಂದರೆಗಳು ಬರುವುದರಿಂದ, ಅದಕ್ಕೆ ಒಂದು ಸಮಿತಿ ರಚನೆ ಮಾಡಬೇಕು ಎಂದು ಕೇಳಿಕೊಂಡಿದ್ದಾರೆ. ಅದೇರೀತಿ ಈಗ ಹೈಕೋರ್ಟ್‌ನ ಮುಂದೆ ಸುಮಾರು ೮೭ ಸಾವಿರ ಅರ್ಜಿಗಳು ಬಾಕಿ ಇರುವುದರಿಂದ ಇವುಗಳನ್ನು ಜಾಗ್ರತೆ ಇತ್ಯರ್ಥ ಮಾಡಲು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳಿದ್ದಾರೆ. ಭೂಸುಧಾರಣೆ ಕಾನೂನಿಗೆ ತಿದ್ದುಪಡಿ ಮಾಡಿದ ಮೇಲೆ ಈ ಕೇಸ್‌ಗಳ ಸಂಖ್ಯೆ ೩೭ ಸಾವಿರಕ್ಕೆ ಇಳಿದರೂ ಸಹ, ಅವು ಜಾಗ್ರತೆ ಇತ್ಯರ್ಥ ಆಗಬೇಕೆಂದು ಸೂಚನೆ ಕೊಟ್ಟಿದ್ದಾರೆ. "Justice delayed is Justice denied" ಎಂಬ ಮಾತನ್ನು ಸಹ ಹೇಳಿದ್ದಾರೆ. ಹೀಗೆ ಅವರು ತಮ್ಮ ಗಮನಕ್ಕೆ ತಂದ ಅನೇಕ ವಿಷಯಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು. ಮುಖ್ಯವಾಗಿ ಅವರಿಗೆ ಅನುಕೂಲವಾಗುವಂತಹ ನಿರ್ಧಾರವನ್ನು ಜಾಗ್ರತೆ ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಈ ರಾಜ್ಯದಲ್ಲಿ ಕಾನೂನು ಮಂಡಲಿ ಸ್ಥಾಪನೆ ಬಗ್ಗೆ ಮಾನ್ಯ ಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಇದು ಒಳ್ಳೆಯ ವಿಚಾರ ಎಂದು ಜಸ್ಟೀಸ್ ವೆಂಕಟರಾಮಯ್ಯ ನವರು ಮತ್ತು ಶ್ರೀ ಕಡಿದಾಳ್ ಮಂಜಪ್ಪನವರು ಅಭಿಪ್ರಾಯ ಪಟ್ಟಿದ್ದಾರೆ. ಆದ್ದರಿಂದ ಈ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರೆಂಬುದನ್ನು ಸಹ ತಾವು ಹೇಳಿದರೆ ಒಳ್ಳೆಯದು. ತಮ್ಮ ಇಲಾಖೆಯ ಬಗ್ಗೆ ಪರ್‌ಫಾರ್ಮೆನ್ಸ್ ಬಜೆಟ್ ಕೊಟ್ಟಿಲ್ಲ ಎಂದು ಮಾನ್ಯ ಧರ್ಮಸಿಂಗ್ ಅವರು ಹೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಅದಕ್ಕೆ ಸೂಕ್ತ ಕಾರಣವನ್ನು ಕೊಟ್ಟಿದ್ದಾರೆ. ಇದ್ದುದನ್ನು ಇದ್ದಂತೆ ಅವರು ಹೇಳಿದರೂ ಸಹ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳಬೇಕು. ಮುನಿಸಿಪಾಲಿಟಿಗಳ ಬಗ್ಗೆ ಮತ್ತು ಕಾರ್ಪೊರೇಷನ್‌ಗಳ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ.

೩–೩೦ ಪಿ. ಎಂ.

ಈ ವರದಿಯಲ್ಲಿ ನಮಗೆ ಎದ್ದು ಕಾಣುವಂತಹ ಮುಖ್ಯವಾದಂಥ ಅಂಶವೇನೆಂದರೆ ಮುನಿಸಿಪಾಲಿಟಿಗಳಿಗೆ ಹಾಗೂ ನಗರಸಭೆಗಳಿಗೆ ಹಾಗೂ ಮಹಾನಗರಪಾಲಿಕೆಗಳಿಗೆ ಇರತಕ್ಕಂಥ ಕೊರತೆ ಎಂದರೆ ಹಣ. ಇದು ಬಹಳ ಮುಖ್ಯವಾದಂಥ ಕೊರತೆ. ನಮಗೆಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಲ್ಲಿ ಏನಾಗಿದೆ ಎಂದರೆ ೧೯೭೭ನೇ ಇಸವಿ ಏಪ್ರಿಲ್ ತಿಂಗಳಿನಿಂದ ಮುನಿಸಿಪಾಲಿಟಿಗಳಿಗೆ ಬರುತ್ತಿದ್ದಂತಹ ಆಕ್ಟ್ರಾಯ್ ರದ್ದಾಯಿತು. ಸರ್ಕಾರದವರು ಈ ಮುನಿಸಿಪಾಲಿಟಿಗಳಿಗೆ ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟನ್ನು ಕೊಡುತ್ತಿಲ್ಲ. ತಾವು ಕೊಟ್ಟಿರುವ ಒಂದು ವರದಿಯ ಪ್ರಕಾರ ೧೯.೫೧ ಕೋಟಿ ರೂಪಾಯಿಗಳನ್ನು ಮಾತ್ರ ಈ ಮುನಿಸಿಪಾಲಿಟಿಗಳಿಗೆ ಕೊಟ್ಟಿದ್ದೀರಿ. ಆಕ್ಟ್ರಾಯ್ ಅನ್ನು ಕಾಂಪೆನ್‌ಸೇಟ್ ಮಾಡುವ ಸಲುವಾಗಿ ಸರ್ಕಾರ ಕೊಡಬೇಕಾದಂಥ ಹಣ ಸರಿಯಾಗಿ ಕೊಡುತ್ತಿಲ್ಲವೆಂದು ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಇದರಲ್ಲಿ ಎರಡು ಇನ್‌ಸ್ಟಾಲ್‌ಮೆಂಟ್ಸ್ ಅನ್ನು ಆಕ್ಟ್ರಾಯ್

ಕಾಂಪನ್‌ಸಿಟೇವ್‌ಗೆ ಕೊಟ್ಟಿದ್ದರೆ ಇನ್ನು ಒಂದು ಇನ್‌ಸ್ಟಾಲ್‌ಮೆಂಟ್ ಡೆವಲಪ್‌ಮೆಂಟ್ಸ್‌ಗೆ ಕೊಟ್ಟಿದ್ದೀರಿ. ಇದು ಬಹಳ ಕಡಿಮೆ ಆಯಿತು. ಇದೇ ರೀತಿ ಹಣವನ್ನು ತಾವು ಕೊಡುತ್ತಾ ಹೋದರೆ ನಗರಗಳು ಯಾವ ರೀತಿಯಲ್ಲಿ ಅಭಿವೃದ್ಧಿ ಆಗುತ್ತವೆ? ಮೊನ್ನೆಯ ದಿವಸ ಮಾನ್ಯ ಮಂತ್ರಿಗಳು ಮಂಗಳೂರು ನಗರ ಕಾರ್ಪೊರೇಷನ್‌ಗೆ ಅವರು ತೆರಿಗೆಗಳನ್ನು ಚೆನ್ನಾಗಿ ವಸೂಲು ಮಾಡಿದ್ದಾರೆಂದು ಬಹುಮಾನ ಕೊಟಿದ್ದಾರೆ. ಈ ಸಮಾಜದಲ್ಲಿ ಬಂಡವಾಳ ಶಾಹಿಗಳನ್ನು ಬಿಟ್ಟರೆ ಬೇರೆಯವರಿಗೆ ತೆರಿಗೆಗಳನ್ನು ಕೊಡುವ ಶಕ್ತಿ ಇಲ್ಲ ಈ ಬಗ್ಗೆ ನಾವು ಕೂಡ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ. ಮುಖ್ಯವಾಗಿ ಆಕ್ಟ್ರಾಯ್ ಕಾಂಪನ್‌ಸಿಟೇವ್ ಕೊಡಬೇಕಾಗುತ್ತದೆ. ಆ ಕಾಂಪನ್‌ಸಿಟೇವ್ ಕೊಡದೆ ಇದ್ದರೆ ನಗರದ ಜನತೆಗೆ ತಾವು ವಂಚನೆ ಮಾಡಿದಂತೆ ಆಗುತ್ತದೆ. ಮಾನ್ಯ ಅಧ್ಯಕ್ಷಿಣೀಯವರೆ ಇವತ್ತಿನ ದಿವಸ ಈ ತೆರಿಗೆಗಳನ್ನು ಕೊಡುವಂತಹ ಜನ ಒಂದು ವಿಶ್ಲೇಷಣೆಯನ್ನು ಮಾಡುತ್ತಿದ್ದಾರೆ. ಅದೇನೆಂದರೆ ನಗರದ ಜೊತೆ ಕೊಡುವಂತಹ ತೆರಿಗೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಇರುವಂತಹ ಜನ ಕೊಡುವಂತಹ ತೆರಿಗೆಯನ್ನು ಹೋಲಿಕೆ ಮಾಡಿ ನೋಡಿದಾಗ ನಗರ ಪ್ರದೇಶಗಳಲ್ಲಿ ವಾಸ ಮಾಡುವಂತಹ ಜನ ಶೇಕಡ ೫೦ ಪರ್ಸೆಂಟ್‌ನಷ್ಟು ಜಾಸ್ತಿ ತೆರಿಗೆಯನ್ನು ಕೊಡುತ್ತಿದ್ದಾರೆ. ನಗರದ ಜನತೆಯಿಂದ ಹೆಚ್ಚು ತೆರಿಗೆಯನ್ನು ವಸೂಲಿ ಮಾಡಿ ಅವರಿಗೆ ಬೇಕಾದಂಥ ಅನುಕೂಲಗಳನ್ನು ಸರ್ಕಾರ ಮಾಡಿಕೊಂಡಿದ್ದರೆ ಹೇಗೆ? ಅವರಿಗೆ ಬೇಕಾದಂಥ ಅನುಕೂಲಗಳನ್ನು ಮಾಡಿಕೊಡದಿದ್ದರೆ ಮಹಾ ಅಪರಾಧವಾಗುತ್ತದೆ. ಇದು ಸರಿಯಾದುದು ಅಲ್ಲವೆಂದು ನಾನು ಹೇಳಬೇಕಾಗುತ್ತದೆ. ಆದ್ದರಿಂದ ಮಹಾನಗರಪಾಲಿಕೆಗಳಿಗೆ ಮತ್ತು ನಗರಸಭೆಗಳಿಗೆ ಸರ್ಕಾರದ ವರು ಫುಲ್ ಕಾಂಪೆನ್‌ಸೇಷನ್ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನಗರಗಳಲ್ಲಿ ವಾಸ ಮಾಡುವಂತಹ ಜನ ಮೋಟಾರ್ ವೆಹಿಕಲ್ ಟ್ಯಾಕ್ಸ್ ಎಂದು ಎಷ್ಟು ಕೊಡುತ್ತಿದ್ದಾರೆ? ನನಗೆ ತಿಳಿದ ಮಟ್ಟಿಗೆ ಸುಮಾರು ೮-೧೦ ವರ್ಷಗಳ ಹಿಂದೆ ಬೆಂಗಳೂರು ನಗರದ ಜನ ಮೋಟಾರ್ ವಾಹನಗಳ ಟ್ಯಾಕ್ಸ್ ಅನ್ನು ಸುಮಾರು ನಾಲ್ಕುವರೆ ಕೋಟಿ ರೂಪಾಯಿಗಳು ಕೊಡುತ್ತಿದ್ದಾರೆಂದು ಮಾನ್ಯ ಮಂತ್ರಿಗಳೇ ಹಿಂದೆ ಇದ್ದಂಥವರು ಹೇಳಿದ್ದು ನೆನಪು ಇದೆ. ಆದರೆ ಈಗ ನಾವು ಲೆಕ್ಕಾಚಾರ ಹಾಕಿಕೊಂಡರೆ ಅದು ಇನ್ನು ಎಷ್ಟೋ ಕೋಟಿ ರೂಪಾಯಿಗಳು ಆಗಬಹುದು. ಇವತ್ತು ಬೆಂಗಳೂರು ನಗರದ ಮಧ್ಯದಲ್ಲಿ ಸಿಕ್ಕಾಪಟ್ಟೆ ವಾಹನಗಳು ಓಡಾಡುತ್ತಿವೆ ಆದ್ದರಿಂದ ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಿ ಈ ಮೋಟಾರು ವಾಹನಗಳಿಂದ ಬರುವಂತಹ ಎಲ್ಲಾ ತೆರಿಗೆಗಳನ್ನು ಈ ಮಹಾನಗರಗಳಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದು ಬೆಂಗಳೂರು ಮಹಾನಗರ ಪಾಲಿಕೆಗೆ ಮಾತ್ರ ಸೀಮಿತವಾಗಿಲ್ಲ. ಎಲ್ಲಾ ಕಡೆಗಳಿಗೆ ಇದನ್ನು ವಿಸ್ತರಿಸಬೇಕು. ಈಗ ನಮ್ಮ ಮುಂದೆ ಬೆಂಗಳೂರು ನಗರ ಪಾಲಿಕೆಯ ವರದಿ ಇದೆ. ಒಂದು ಕಡೆ ಹೇಳುತ್ತೀರಿ ಮಹಾನಗರಪಾಲಿಕೆಗಳಿಗೆ ಹಣ ಕೊಡಬೇಕೆಂದು, ಮತ್ತೊಂದು ಕಡೆ ಹೇಳುತ್ತೀರಿ ಮಹಾನಗರಸಭೆಯವರೇ ಹಣವನ್ನು ವಸೂಲಿ ಮಾಡಿಕೊಳ್ಳಬೇಕೆಂದು ಇದು ಯಾವ ನ್ಯಾಯ? ಅವರು ವಸೂಲು ಮಾಡಿಕೊಳ್ಳುತ್ತಾರೆ, ಅದು ಬೇರೆ ವಿಚಾರ. ನಾನು ಮೊದಲೇ ಹೇಳಿದ ರೀತಿಯಲ್ಲಿ ಮಂಗಳೂರು ನಗರಸಭೆಯವರು ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಅವರಿಗೆ ಪ್ರಥಮ ಬಹುಮಾನ ಕೊಟ್ಟಿದ್ದೀರಿ, ಕೊಡಿ ನಾನು ಬೇಡವೆಂದು ಹೇಳುವುದಿಲ್ಲ. ಅದೇ ರೀತಿ ಗದಗ ಬೆಟಗೇರಿ ಮಹಾನಗರಸಭೆಗೂ ಸಹ ದ್ವಿತೀಯ ಬಹುಮಾನಕೊಟ್ಟಿದ್ದೀರಿ ಒಂಥರ ಇದೊಂದು ಒಳ್ಳೆಯ ಯೋಜನೆ. ಇದರಿಂದ ತಾವು ಪುರಸಭೆ ಮತ್ತು ನಗರಸಭೆಗಳಿಗೆ ಉತ್ತೇಜನ ಕೊಟ್ಟಂತೆ ಆಗುತ್ತದೆ ಆದರೆ ಈ ತೆರಿಗೆಗಳ ವಸೂಲಿಯಲ್ಲಿ ಶೇಕಡ ೫೦ ಪರ್ಸೆಂಟ್‌ನಷ್ಟು ಸೋರುತ್ತಿದೆ. ಇದನ್ನು ತಡೆಗಟ್ಟತಕ್ಕಂಥ ಜವಾಬ್ದಾರಿ ತಮ್ಮ ಮೇಲೆ ಇದೆ. ಫೈನಾನ್ಸ್ ಕಮೀಷನ್‌ರವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಅದನ್ನು ತಾವು ಆಧಾರವಾಗಿಟ್ಟುಕೊಂಡು ಜಾರಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರು ಮಹಾನಗರ ಪಾಲಿಕೆಯ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಬೆಂಗಳೂರು ನಗರಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳು ಬಂದ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಆಡಳಿತಾಧಿಕಾರಿ ಇರುವುದಕ್ಕಿಂತ ಈ ಚುನಾಯಿತ ಸದಸ್ಯರು ಇದ್ದರೆ ಒಳ್ಳೆಯದು. ಇದರಲ್ಲಿ ನನಗೆ ಒಂದು ಸಂಶಯ ಬಂದಿದೆ ಅದೇನೆಂದರೆ ಬೆಂಗಳೂರು ನಗರ ಪಾಲಿಕೆ ಕಲೆಕ್ಷನ್ ಬಹಳ ಕಡಿಮೆ ಪ್ರಮಾಣದಲ್ಲಿ ಕಲೆಕ್ಟ್ ಮಾಡಿದೆ ಆದ್ದರಿಂದ ಈ ಬಗ್ಗೆ ಹೆಚ್ಚು ಗಮನ ಕೊಡಬೇಕು. ತಾವು ಕೊಟ್ಟಿರತಕ್ಕಂಥ ವರದಿಯಲ್ಲಿಯೇ ಇದೆ. ಇದರಲ್ಲಿ ಪ್ರಾಪರಿಟಿ ಟ್ಯಾಕ್ಸ್ ಇನ್ನಿತರೆ ಎಲ್ಲಾ ಟ್ಯಾಕ್ಸ್‌ಗಳು ಬಹಳ ಕಡಿಮೆ ವಸೂಲಿಯಾಗಿದೆ. ಇದನ್ನು ನೋಡಿದಾಗ ಸುಮಾರು ೫೦ ಪರ್ಸೆಂಟ್‌ನಷ್ಟು ಕೂಡ ವಸೂಲಿಯಾಗಿಲ್ಲ. ಆದರೆ ಈ ಜವಾಬ್ದಾರಿ ಮಾತ್ರ ತಮ್ಮ ಮೇಲೆ ಬಿದ್ದಿದೆ. ಇನ್ನು ಪೌರಕಾರ್ಮಿಕರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ಪೌರಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆಂದು ತಾವೇ ಹೇಳಿದ್ದೀರಿ. ಈಗ ಸ್ವಲ್ಪ ಮನೆಗಳನ್ನು ಕಟ್ಟಿಸಿಕೊಟ್ಟಿರ

ಬಹುದು. ಆದರೂ ಸಹ ಇನ್ನು ಅನೇಕ ಜನ ಪೌರಕಾರ್ಮಿಕರಿಗೆ ಬೆಂಗಳೂರು ನಗರದಲ್ಲಿ ಮನೆಗಳು ಇಲ್ಲ. ಪಾಪ ಆ ಕಾರ್ಮಿಕರೆಲ್ಲ ಬಹಳ ಹಿಂದುಳಿದ ವರ್ಗಕ್ಕೆ ಸೇರಿದ ಜನ. ಅಂತಹ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುವ ಜವಾಬ್ದಾರಿ ನಿಮ್ಮ ಮೇಲಿದೆ. ಆದ್ದರಿಂದ ಆದಷ್ಟು ಬೇಗ ಅವರಿಗೆ ಮನೆಗಳನ್ನು ಕಟ್ಟಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಬೆಂಗಳೂರು ನಗರಸಭೆಯವರು ನಾನಾ ಕಡೆಗಳಲ್ಲಿ ಮಾರ್ಕೆಟಿಂಗ್ ಕಾಂಪ್ಲೆಕ್ಸ್‌ಗಳನ್ನು ಕಟ್ಟಿಸಿದ್ದಾರೆ. ಇಂತಹ ಮಾರ್ಕೆಟಿಂಗ್ ಕಾಂಪ್ಲೆಕ್ಸ್‌ಗಳನ್ನು ರಾಜಾಜಿ ನಗರದಲ್ಲಿ ಸುಬ್ರಮಣ್ಯೇಶ್ವರ ನಗರದಲ್ಲಿ ಹಾಗೂ ಶ್ರೀರಾಮಪುರದಲ್ಲಿ ಮತ್ತು ಯಶವಂತಪುರದಲ್ಲಿ ಕಟ್ಟಿಸಿದ್ದೀರಿ. ಈ ಮಾರ್ಕೆಟ್‌ಗಳನ್ನು ಕಟ್ಟಿಸಲು ತಾವು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ ಆ ಮಾರ್ಕೆಟ್‌ಗಳು ಸಹ ಬಹಳ ಚೆನ್ನಾಗಿವೆ. ಆ ಬಗ್ಗೆ ನಮ್ಮದೇನೂ ದೂರುಗಳು ಇಲ್ಲ. ಆದರೆ ನನಗೆ ತಿಳಿದ ಮಟ್ಟಿಗೆ ರಾಜಾಜಿನಗರದ ಮಾರ್ಕೆಟ್ ಪೂರ್ತಿ ಖಾಲಿಯಾಗಿ ಇದೆ ಆ ಅಂಗಡಿಗಳನ್ನು ಯಾರಿಗೂ ಬಾಡಿಗೆ ಕೊಟ್ಟಿಲ್ಲ. ಶ್ರೀರಾಮಪುರದಲ್ಲಿರತಕ್ಕಂಥ ಮಾರ್ಕೆಟ್‌ನ ಬಗ್ಗೆ ಹಿಂದೆ ಒಂದು ಸಲ ನಾನು ಈ ಸದನದಲ್ಲಿ ಇದೇ ರೀತಿಯ ಒಂದು ಆರೋಪ ಮಾಡಿದ್ದೆ. ಆದರೆ ಆ ಬಗ್ಗೆ ಇದುವರೆವಿಗೂ ಯಾವುದೇ ರೀತಿಯ ಕ್ರಮ ತಾವು ತೆಗೆದುಕೊಂಡಿಲ್ಲ. ಅಲ್ಲಿರತಕ್ಕಂಥ ಅಧಿಕಾರಿಗಳು ತಮ್ಮ ಹೆಸರು ಹೇಳಿಕೊಂಡು ದುರುಪಯೋಗ ಮಾಡುತ್ತಿದ್ದಾರೆ. ಅಲ್ಲಿ ಕೆಲವರಿಗೆ ತಮಗಿಷ್ಟ ಬಂದ ರೀತಿಯಲ್ಲಿ ಅಂಗಡಿಗಳನ್ನು ಅಲ್ಲಿನ ಅಧಿಕಾರಿಗಳು ಕೊಟ್ಟಿದ್ದಾರೆ ಅದನ್ನು ತಾವು ಈಗ ಬೇಕಾದರೂ ಪರಿಶೀಲನೆ ಮಾಡಿ ನೋಡಿ ಅದು ಸರಿಯಿಲ್ಲವೆಂದು ಹೇಳುವುದಾದರೆ ನಾನು ರಾಜೀನಾಮೆಯನ್ನು ಬೇಕಾದರೂ ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ತಾವು ಈ ಸವಾಲನ್ನು ಸ್ವೀಕಾರ ಮಾಡುವುದಾದರೆ ನಾನು ರೆಡಿಯಾಗಿದ್ದೇನೆ. ಆದ್ದರಿಂದ ಈ ಬಗ್ಗೆ ತಾವು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಶ್ರೀರಾಮಪುರದ ಮಾರ್ಕೆಟ್‌ನಲ್ಲಿ ಇನ್ನು ಕೆಲವು ಅಂಗಡಿಗಳು ಖಾಲಿ ಇವೆ. ಸುಬ್ರಹ್ಮಣ್ಯೇಶ್ವರ ನಗರದಲ್ಲಿ ಅಂಗಡಿಗಳು ಖಾಲಿ ಇವೆ. ಯಶವಂತಪುರದಲ್ಲಿ ಸಹ ಅಂಗಡಿಗಳು ಖಾಲಿ ಇವೆ. ಈ ಬಗ್ಗೆ ತಾವು ಯೋಚನೆ ಮಾಡಿ ಒಂದು ನಿರ್ಧಾರ ತೆಗೆದುಕೊಳ್ಳಿ. ತಾವು ಹೇಳಬಹುದು ಹೆಚ್ಚು ಬಾಡಿಗೆ ಕೊಡವುದಕ್ಕೆ ಯಾರೂ ತಯಾರಾಗಿಲ್ಲವೆಂದು. ಅದಕ್ಕೆ ತಾವು ಸಣ್ಣ ಸಣ್ಣ ಅಂಗಡಿಗಳವರಿಗೆ ಕಡಿಮೆ ಮಾಡಿ ರಿಯಾಯಿತಿ ಕೊಡಿ. ದೊಡ್ಡ ದೊಡ್ಡ ಅಂಗಡಿಗಳಿಗೆ ಆರ್.ಟಿ.ಓ. ಮತ್ತು ಕೆ.ಇ.ಬಿ. ಇಲಾಖೆಯವರಿಗೆ ಹೆಚ್ಚಿಗೆ ಬಾಡಿಗೆಯಲ್ಲಿ ಕೊಡಿ ಈಗ ಕೆ.ಇ.ಬಿ. ಇಲಾಖೆಯವರಿಗೆ ಎಷ್ಟೋ ಕಡೆ ಸರಿಯಾಗಿ ಕಛೇರಿಗಳೇ ಇಲ್ಲ, ಅವರಿಗೆ ಕೊಟ್ಟು ಅವರಿಂದ ಬೇಕಾದರೆ ತಾವು ಹೆಚ್ಚಿಗೆ ಬಾಡಿಗೆಯನ್ನು ವಸೂಲಿ ಮಾಡಿ. ಎಷ್ಟು ದಿವಸಗಳಾದರೂ ಸಹ ಬಾಡಿಗೆಗೆ ಕೊಡದೆ ಅವುಗಳನ್ನು ಹಾಗೆಯೇ ಬಿಟ್ಟುಕೊಂಡು ಹೋದರೆ ನಷ್ಟವಾಗುವುದಿಲ್ಲವೇ? ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಯೋಜನೆ ಮಾಡಿ ಒಂದು ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ರಾಜಾಜಿನಗರದಲ್ಲಿ ಒಂದು ವೆಟರ್ನರಿ ಆಸ್ಪತ್ರೆಯ ಕೆಲಸ ನಡೆಯುತ್ತಿದೆ. ಆ ಕೆಲಸ ಇನ್ನು ಪೂರ್ತಿಯಾಗಿಲ್ಲ ಆ ಕೆಲಸವನ್ನು ಪ್ರಾರಂಭ ಮಾಡಿ ಸುಮಾರು ಒಂದು ವರ್ಷವಾಯಿತು. ಇನ್ನು ಶುರುವಾಗಲೇ ಇಲ್ಲ. ನಾನು ಸಹ ಅಲ್ಲಿಗೆ ಹೋಗಿ ಪದೇ ಪದೇ ಕೇಳಿಕೊಂಡು ಬರುತ್ತಿದ್ದೇನೆ. ಅಲ್ಲಿ ಕೆಲಸವೇನೋ ನಡೆಯುತ್ತಿದೆ ಬೇಗ ಮುಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಮುನಿಸಿಪಲ್ ಡೈರೆಕ್ಟರೇಟ್ ಒಂದನ್ನು ಮಾಡಿದ್ದೀರಿ ಆ ಬಗ್ಗೆ ದೂರುಗಳು ಇವೆ. ಮೂಲಭೂತವಾಗಿ ಅವುಗಳನ್ನು ಎದುರಿಸತಕ್ಕಂಥ ಪರಿಸ್ಥಿತಿ ಇಲ್ಲ. ಇನ್ನು ಒಂದು ಮುಖ್ಯವಾದಂಥ ವಿಷಯವೆಂದರೆ ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ಬಹಳ ಇದೆ. ಇದು ಒಂದು ದೊಡ್ಡ ಕೊರತೆಯಾಗಿದೆ,

ನೀರಿನ ಕೊರತೆ ಬೆಂಗಳೂರಿನಲ್ಲಿ ಬಹಳ ಇದೆ ಗುಲ್ಬರ್ಗದಲ್ಲೂ ಸಹಾ ನೀರಿನ ಕೊರತೆ ಇದೆಯೆಂದು ನಮ್ಮ ಸ್ನೇಹಿತರು ಹೇಳುತ್ತಾ ಇದ್ದರು. ಮಳೆ ಬಾರದೆ ಇರುವುದರಿಂದ ನೀರಿಲ್ಲ. ಗುಲ್ಬರ್ಗಾದಲ್ಲಿ ಬೆಣ್ಣೆ ತೊರೆಯಂತಹ ಒಂದು ಪ್ರಾಜೆಕ್ಟ್ ಇದೆ. ಈಗ ಅದನ್ನು ಕಟ್ಟುತ್ತಾ ಇದ್ದಾರೆ, ಅಲ್ಲಿ ನೀರೆ ಇಲ್ಲ ಪ್ರಾಜೆಕ್ಟ್ ಕಟ್ಟುವುದು ಏನು ಬಂತು ? ಗುಲ್ಬರ್ಗಾದಲ್ಲೂ ಸಹ ನೀರನ್ನು ಒದಗಿಸುವುದಕ್ಕೆ ಬಹಳ ತೊಂದರೆ ಬಂದಿದೆ. ಕುಡಿಯುವ ನೀರನ್ನು ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆ ? ಮಳೆ ಬರಲಿಯೆಂದು ಮೋಡದ ಕಡೆಗೆ ಆಕಾಶದ ಕಡೆಗೆ ನೋಡುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಅದಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು. ಮಾನ್ಯ ಅಧ್ಯಕ್ಷಣೀಯವರೇ ತಮಗೆ ರಾಜಾಜಿನಗರದ ಪರಿಚಯವಿದೆ. ನಾವು ನೀವು ನೀರಿನ ಬಗ್ಗೆ ಕಾಳಜಿ ಇರತಕ್ಕವರು. ಈಗ ಅಲ್ಲಿ ಏನಾಗಿದೆಯೆಂದರೆ ಇವತ್ತಿನ ದಿವಸ ನೀರು ಅಲ್ಲಿ

ಇಲ್ಲ, ದಿನ ರಾತ್ರಿ ಹೆಣ್ಣು ಮಕ್ಕಳು ನೀರನ್ನು ಹೊತ್ತುಕೊಂಡು ಬರುತ್ತಿದ್ದಾರೆ. ಅವರ ಗೋಳನ್ನು ನೋಡುವುದಕ್ಕೂ, ಹೇಳುವುದಕ್ಕೂ ಆಗುವುದಿಲ್ಲ. ರಾಜಾಜಿನಗರ ಪ್ರದೇಶ, ಅದರಲ್ಲೂ ರಾಜಾಜಿನಗರ ಅಸೆಂಬ್ಲಿ ಕ್ಷೇತ್ರವಾಗಿದ್ದರೂ ಸಹ ಕಳೆದ ಒಂದು ವರ್ಷದಿಂದಲೂ ದಿನ ಬಿಟ್ಟು ದಿನ ನೀರು ಬಿಡುತ್ತಿದ್ದಾರೆ. ನನ್ನ ಕ್ಷೇತ್ರವೇ ಅಲ್ಲ ನಾರಾಯಣ್ ಕುಮಾರ್‌ರವರ ಬಿನ್ನಿ ಪೇಟೆ ಕ್ಷೇತ್ರದಲ್ಲೂ, ಗಾಂಧಿನಗರದ ಕ್ಷೇತ್ರದಲ್ಲೂ ಪರಿಸ್ಥಿತಿ ತೀರಾ ಹದಗೆಟ್ಟಿದೆ. ರಾತ್ರಿ ಹೊತ್ತು ಆ ಹೆಣ್ಣು ಮಕ್ಕಳು ನೀರನ್ನು ಹೊತ್ತುಕೊಂಡು ಬರುವುದನ್ನು ನಾನು ೧೨ ಗಂಟೆಗೆ ಹೋಗಿ ನೋಡಿದ್ದೇನೆ. ೨ ಗಂಟೆಗೆ ಹೋಗಿ ನೋಡಿದ್ದೇನೆ, ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ, ಬಹಳ ಕಷ್ಟದಿಂದ ಕೂಡಿದೆ. ಆ ಹೆಣ್ಣು ಮಕ್ಕಳ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಮಲ್ಲೇಶ್ವರದಲ್ಲಿ ಸ್ವಲ್ಪ ಪರವಾಗಿಲ್ಲ, ಅಲ್ಲಿ ಅಷ್ಟೊಂದು ಹೀನವಾದ ಪರಿಸ್ಥಿತಿ ಇಲ್ಲ. ನಾನು ಅಲ್ಲಿಯೇ ವಾಸವಾಗಿದ್ದೇನೆ, ಈಗಲೂ ನಮ್ಮ ಮನೆಯಲ್ಲಿ ದಿನ ಬಿಟ್ಟು ದಿನ ನೀರು ಬರುತ್ತಿದೆ. ಇದಲ್ಲ ಪ್ರಶ್ನೆ. ರಾಜಾಜಿನಗರದಲ್ಲಿ ತೀರಾ ಹದಗೆಟ್ಟಿರತಕ್ಕಂಥ ಪರಿಸ್ಥಿತಿ ಬೇರೆ ಕಡೆ ಎಲ್ಲೂ ಇಲ್ಲ. ಅದನ್ನು ಕಣ್ಣಲ್ಲಿ ನೋಡುವುದಕ್ಕಾಗುವುದಿಲ್ಲ. ನೀವು ಕೂಡ ಬೆಳಿಗ್ಗೆ ಐದು ಗಂಟೆಗೆ ಬಂದಿದ್ದರಂತೆ ಶ್ರೀ ವಿ. ಎಸ್. ಕೃಷ್ಣ ಅಯ್ಯರ್ ಕೂಡ ಬಂದಿದ್ದರಂತೆ, ಅಧಿಕಾರಿಗಳು ಕೂಡ ಬಂದಿದ್ದರಂತೆ, ಚೀಫ್ ಇಂಜಿನಿಯರ್ ಬಂದಿದ್ದರಂತೆ. ಅಲ್ಲಿಗೆ ಬಂದಿದ್ದೇ ಬಂದಿದ್ದು, ನೋಡಿದ್ದೇ ನೋಡಿದ್ದು, ಸುತ್ತಾಡಿದ್ದೇ ಸುತ್ತಾಡಿದ್ದು, ಕೈಮುಗಿದದ್ದೇ ಕೈಮುಗಿದಿದ್ದು. ಆದರೆ ನೀರು ಮಾತ್ರ ಅಷ್ಟು ದೂರ ಬರಲಿಲ್ಲ. ಓಟು ಕೇಳುವಾಗ ಬಾಗಿಲು ತಟ್ಟಿ ಕೇಳಿದಹಾಗೆ, ಬಾಗಿಲು ತಟ್ಟಿ ನೀರು ಬರುತ್ತಿದೆಯೋ ಎಂದು ಕೇಳುತ್ತೀರಾ ? ಬೆಂಗಳೂರು ನಗರಕ್ಕೆ ಬೇಕಾದ ರಿಕ್ವೈರ್‌ಮೆಂಟ್ಸ್ ನೋಡಿದಾಗ, ಇವತ್ತು ೧೦ ಲಕ್ಷ ಜನ ಬೆಂಗಳೂರಿನಲ್ಲಿ ಇದ್ದಾರೆ. ಇದು ಬರೀ ಬೆಂಗಳೂರಿನ ಜನಸಂಖ್ಯೆ. ಬೆಂಗಳೂರು ಫಾಸ್ಟ್ ಗ್ರೋಯಿಂಗ್ ಸಿಟಿ ಅಂತ ಒಬ್ಬರು ಬರೆದಿದ್ದಾರೆ. ಬೆಂಗಳೂರು ಜನಸಂಖ್ಯೆ ೪೦ ಲಕ್ಷ ಆಗಬಹುದು, ೫೦ ಲಕ್ಷ ಆಗಬಹುದು. ನಾವು ಇನ್ನೂ ಏನೂ ಯೋಚಿಸಬೇಕಾಗಿಲ್ಲ. ೨೦೦೦ನೇ ಶತಮಾನದ ಹೊತ್ತಿಗೆ ೭೦ ಲಕ್ಷ ಆಗಬಹುದೆಂದು ನನಗನ್ನಿಸುತ್ತದೆ. ಮೊದಲಿನಿಂದಲೂ ಪ್ಲಾನ್ ತಪ್ಪುತ್ತಾ ಇದೆ. ಈಗಲೂ ತಪ್ಪುತ್ತಾ ಇದೆಯೆಂದು ನನ್ನ ಭಾವನೆ. ಈಗ ೬೮೦ ದಶಲಕ್ಷ ಲೀಟರ್ ನೀರು ನಮಗೆ ಬೇಕಾಗಿದೆ. ಅಧಿಕಾರಿಗಳು ಹೇಳಿರುವುದನ್ನೇ ತೆಗೆದುಕೊಳ್ಳೋಣ. ನಮ್ಮ ಸಾಮಾನ್ಯ ಪರಿಸ್ಥಿತಿಯಲ್ಲಿ ಬೆಂಗಳೂರು ನಗರಕ್ಕೆ ಸಿಗುತ್ತಿರುವುದು ೪೨೫ ದಶಲಕ್ಷ ಲೀಟರ್, ಅದರಲ್ಲಿ ಹೆಸರುಘಟ್ಟದಿಂದ ೧೫ ದಶಲಕ್ಷ ತಿಪ್ಪಗೊಂಡನಹಳ್ಳಿಯಿಂದ ೧೪೦ ದಶಲಕ್ಷ ಕಾವೇರಿಯಿಂದ ೨೭೦ ದಶಲಕ್ಷ ಲೀಟರ್ ನೀರು ಸಿಗುತ್ತಿತ್ತು. ಈಗ ಎಷ್ಟು ನೀರು ನಮಗೆ ಸಿಗುತ್ತಾ ಇದೆಯೋ ಎಂದು ಚಿಂತನೆ ಮಾಡಿದ್ದೀರಾ ? ಈಗ ತಿಪ್ಪಗೊಂಡನಹಳ್ಳಿಯಲ್ಲಿ ನೀರು ಬತ್ತಿ ಹೋಗಿದೆ. ತಿಪ್ಪಗೊಂಡನಹಳ್ಳಿಯಲ್ಲಿ ನೀರು ಸ್ವಲ್ಪವೂ ಇಲ್ಲ. ಇವತ್ತು ಏನಾಗಿದೆಯೆಂದರೆ ಹೆಸರುಘಟ್ಟದಲ್ಲೂ ಇಲ್ಲ ಎಲ್ಲೂ ಇಲ್ಲ ತಿಪ್ಪಗೊಂಡನಹಳ್ಳಿಯಲ್ಲಿ ೧೪೦ ದಶಲಕ್ಷ ನೀರು ಹೊರಟುಹೋಗಿದೆ. ಈವಾಗ ಕೇವಲ ೨೭೦ ದಶಲಕ್ಷ ಕಾವೇರಿ ನೀರಿನ ಮೇಲೆ ಹೊಂದಿಕೊಳ್ಳಬೇಕಾಗಿದೆ. ಮಳೆ ಬಾರದೆ ಇರುವುದರಿಂದ ಇದು ಕೂಡ ಕಡಿಮೆಯಾಗಿದೆ. ಇಂತಹ ಒಂದು ಪರಿಸ್ಥಿತಿ ಬೆಂಗಳೂರಿಗೆ ಬಂದಿರಬೇಕಾದರೆ, ಯಾರೂ ಮೊದಲು ಯೋಚನೆಯನ್ನು ಮಾಡಲಿಲ್ಲವೇ ? ಬೆಂಗಳೂರು ರಾಜಧಾನಿ, ನೀವು ಬೆಂಗಳೂರಿನಲ್ಲಿದ್ದೀರಿ ಎಂಬುದನ್ನು ಯೋಚನೆ ಮಾಡಿ. ಯಾವಾಗಲೂ ಬೆಂಗಳೂರು ಬೆಂಗಳೂರು ಅಂತಾ ಹೇಳುತ್ತಾ ಇರುತ್ತೀರಿ ತಾವೆಲ್ಲರು ಇಲ್ಲಿಯೇ ಇರುತ್ತೀರಿ. ಈ ತರಹ ಪರಿಸ್ಥಿತಿ ಬಂದರೆ ಹೇಗೆ ಎಂಬುದನ್ನು ಮೊದಲೇ ಯೋಚಿಸಬೇಕಾಗಿತ್ತಲ್ಲವೇ ? ಕಾವೇರಿ ಮೊದಲನೇ ಹಂತ ಕಾವೇರಿ ಎರಡನೇ ಹಂತ ಮತ್ತು ಈಗ ಮೂರನೆ ಹಂತದ ಬಗ್ಗೆ ಯೋಚನೆ ಮಾಡುತ್ತಿದ್ದೀರಿ. ಇದು ಇನ್ನೂ ಮಂದಗತಿಯಿಂದ ನಡೆಯುತ್ತಾ ಇದೆ. ನಾಲ್ಕನೇ ಯೋಜನೆಯ ಬಗ್ಗೆ ಯೋಚನೆ ಮಾಡಿಲ್ಲ. ನಾವು ಕೇಳಿದಾಗಲೆಲ್ಲಾ ಅಧಿಕಾರಿಗಳು ಹೇಳುತ್ತಾರೆ. ಅಧಿಕಾರಿಗಳ ಬಗ್ಗೆ ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಬಹಳ ಚತುರರು, ಏಕೆಂದರೆ ನಾವು ಕೇಳಿದಾಗಲೆಲ್ಲಾ ಯೋಚನೆ ಮಾಡುತ್ತಿದ್ದೇವೆಂದು ಹೇಳುತ್ತಾರೆ. ಈಗಲೂ ಯೋಚನೆ ಮಾಡುತ್ತಿದ್ದೀರಾ ಹೇಗೆ ? ಎಷ್ಟು ದೂರ ಬಂದಿದ್ದೀರಿ ? ಎಂಬುದನ್ನು ಹೇಳಿ ಮೂರನೇ ಯೋಜನೆಯ ಬಗ್ಗೆ ಹೆಚ್ಚು ಕಾಳಜಿ, ಆಸಕ್ತಿ ವಹಿಸಿ ಅದನ್ನು ಜಾರಿಗೆ ತರದೆ ಇರುವಾಗ ಇನ್ನು ಕಾವೇರಿ ೪ನೇ ಯೋಜನೆಯ ಬಗ್ಗೆ ಏತಕ್ಕೆ ತಾವು ಯೋಚನೆ ಮಾಡುತ್ತೀರಿ ? ೪ನೇ ಯೋಜನೆ ಬಂದರೆ ಅದು ಆಗುತ್ತದೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ಅದು ಆಗದೆ ಹೋದರೆ ಖಂಡಿತವಾಗಿ ನಮ್ಮ ಬೆಂಗಳೂರು ನಗರದ ಜನತೆಗೆ ಖಂಡಿತವಾಗಿ ನೀರು ಸಿಗುವುದಿಲ್ಲವೆಂದು ಹೇಳಬೇಕಾಗುತ್ತದೆ. ಇನ್ನೂ ಹೆಚ್ಚಿನ ತೊಂದರೆಗೆ ಸಿಕ್ಕಿ ಹಾಕಿಕೊಳ್ಳುತ್ತೇವೆ. ಈಗಾಗಲೇ ಪರಿಸ್ಥಿತಿ

ಏನಾಗಿದೆ ? ಇದನ್ನು ಯಾವ ರೀತಿ ಎದುರಿಸಬೇಕು ಎಂಬುದರ ಬಗ್ಗೆ ಯೋಚನೆ ಮಾಡಿದ್ದೀರಾ ಎಂಬುದನ್ನು ತಿಳಿಸಬೇಕು. ಅದಕ್ಕೆ ಬೇಕಾದ ಕೋಟ್ಯಾಂತರ ರೂಪಾಯಿಗಳನ್ನು ಜಾಗತಿಕ ಬ್ಯಾಂಕಿನಿಂದ ಮತ್ತು ಇತರ ಕಡೆಗಳಿಂದ ಕೇಳುತ್ತೀರಾ ? ಈ ಪದ್ಧತಿಯನ್ನು ಯಾವ ರೀತಿ ಎದುರಿಸುತ್ತಾ ಇದ್ದೀರಿ ? ನನಗೆ ತಿಳಿದ ಮಟ್ಟಿಗೆ ಎರಡು ರೀತಿಯಲ್ಲಿ ಎದುರಿಸುತ್ತಾ ಇದ್ದೀರಿ ಅದೇನೆಂದರೆ ಬೆಂಗಳೂರು ನಗರವನ್ನು ಎರಡು ಭಾಗ ಮಾಡಿದ್ದೀರಿ ಒಂದು ಭಾಗದಲ್ಲಿ ದಿನ ಬಿಟ್ಟು ದಿನ ನೀರು ಸಿಗುತ್ತದೆ, ಇನ್ನೊಂದು ಭಾಗವನ್ನು ಎರಡು ಭಾಗ ಮಾಡಿದ್ದೀರಿ. ಅದು ಎ ಮತ್ತು ಬಿ ಜೋನ್ ಎಂದು ಮಾಡಿದ್ದೀರಿ. ಎ ಜೋನ್‌ನಲ್ಲಿ ರಾಜಾಜಿನಗರ ಮತ್ತು ಅದಕ್ಕೆ ಹೊಂದಿಕೊಂಡ ಸ್ಥಳಗಳು ಬರುತ್ತವೆ. ಬಿ ಜೋನ್‌ನಲ್ಲಿ ಬಿನ್ನಿಪೇಟೆ, ಗಾಂಧಿನಗರ ಕ್ಷೇತ್ರಗಳು ಬರುತ್ತವೆ. ಎ ಜೋನ್‌ನಲ್ಲಿ ದಿನ ಬಿಟ್ಟು ದಿನ ನೀರು ಕೊಡುತ್ತಾರೆ. ಬಿ ಜೋನ್‌ನಲ್ಲಿ ದಿನ ಬಿಟ್ಟು ದಿನ ನೀರು ಕೊಡುತ್ತಾರೆ. ಒಂದು ದಿನ ಈ ಕ್ಷೇತ್ರಕ್ಕೆ ಕೊಟ್ಟರೇ ಇನ್ನೊಂದು ದಿನ ಆ ಕ್ಷೇತ್ರಕ್ಕೆ ಕೊಡುತ್ತಿದ್ದಾರೆ. ಎರಡು ದಿವಸಗಳಿಗೆ ಒಂದು ಸಾರಿ ನೀರು ಕೊಡುತ್ತಿದ್ದಾರಂತೆ. ಅದನ್ನು ನಮಗೆ ಬರೆದುಕೊಟ್ಟಿದ್ದಾರೆ. ನಾವು ಒಂದನೇ ತಾರೀಖಿನಿಂದ ಅನಿರ್ದಿಷ್ಟಗಳ ಕಾಲ ಉಪವಾಸ ಮಾಡಬೇಕೆಂದು ಇದ್ದೆವು ಆದರೆ ಮಾನ್ಯ ಮಂತ್ರಿಗಳು ನಮ್ಮ ಹಳೆಯ ಸ್ನೇಹಿತರು, ಆದುದರಿಂದ ಈ ವಿಷಯದ ಬಗ್ಗೆ ನಾವು ಕುಳಿತು ಮಾತನಾಡೋಣವೆಂದು . ಹೇಳಿದರು ಮತ್ತು ಅಧಿಕಾರಿಗಳು ಸಹಾ ಹೇಳಿದರು. ಆ ಪ್ರದೇಶದ ಜನಗಳಿಗೆ ಅನುಕೂಲ ಮಾಡಿಕೊಡುವಂತೆ ಹೇಳಿದ್ದೇವೆ ಎಂದರು. ಜೊತೆಗೆ ಒಂದು ಮಿನಿಟ್‌ನ್ನು ಬರೆದುಕೊಟ್ಟರು.

ಶ್ರೀ ಎನ್. ಎಮ್. ಆಡ್ಯಂತಾಯ.—ಸ್ವಾಮಿ ಈಗ ಯಾಗ ಯಜ್ಞ ಮಾಡಿಯಾಯಿತು ಇನ್ನು ಮೇಘ ಮಲ್ಹಾರ್ ಅಂತ ಒಂದು ಹಾಡು ಹೇಳಲಿಕ್ಕೆ ಮಂತ್ರಿಗಳಿಗೆ ಹೇಳಿ.

ಶ್ರೀ ಎಮ್. ಎಸ್. ಕೃಷ್ಣನ್,—ಅದರ ಬಗ್ಗೆ ಈಗಾಗಲೇ ಮಾತನಾಡಿದ್ದೇವೆ. ಯಾಗ ಅಲ್ಲ, ಸ್ವಾಮಿಗಳನ್ನು ಕರೆದುಕೊಂಡು ಬಂದರು. ನನಗೆ ಹಾಡು ಗೊತ್ತಿಲ್ಲ ನೀವೇ ಹಾಡಿ ತೋರಿಸಿ ಬಿಡಿ.

ಒಬ್ಬ ಮಾನ್ಯ ಸದಸ್ಯರು.—ಶ್ರೀ ಮಲ್ಲಾರಗೌಡರಿಗೆ ಮೇಘಮಲ್ಹಾರ್ ಹಾಡು ಬರುತ್ತದೆ. ಅವರನ್ನು ತಿಪ್ಪಗೊಂಡನಹಳ್ಳಿಗೆ ಕರೆದುಕೊಂಡು ಹೋಗಿ ಸ್ವಲ್ಪ ದಿವಸ ಕೂರಿಸಿದರೆ ಮಳೆ ಬರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ನಾನು ಜೊತೆಯಲ್ಲಿಯೇ ಹೋಗಬೇಕಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಅಧ್ಯಕ್ಷರೇ, ಲಕ್ಷ್ಮೀಸಾಗರ್ ನಿಜವಾಗಿಯೂ ಬ್ರಹ್ಮಚಾರಿಯಾಗಿದ್ದರೆ, ಅವರು ಒಂದು ದಿವಸ ತಪಸ್ಸು ಮಾಡಿದರೆ ಮಳೆ ಬರುತ್ತದೆ.

ಶ್ರೀ ಎಮ್. ಎಸ್. ಕೃಷ್ಣನ್.—ಹೀಗೆ ಕುಳಿತುಬಿಟ್ಟರೆ ಹ್ಯಾಗೆ ? ನಿಜವಾಗಿಯೂ ಬ್ರಹ್ಮಚಾರಿ ಯೆಂದು ನಿಮ್ಮ ಮೇಲೆ ಅಪಾದನೆ ಮಾಡಿರುವಾಗ, ನೀವು ಅದನ್ನು ಹೇಳದೆ ಹೋದರೆ ಏನು ಸಮಾಚಾರ ನನಗೆ ಅರ್ಥವಾಗುವುದಿಲ್ಲ. ಅವರು ಏನು ಹೇಳಲಿಲ್ಲವೆಂದರೆ ಅವರು ಒಪ್ಪಿಕೊಂಡಹಾಗೆ, ಆಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಒಂದು ಸಾರಿ ನರಿಗಳ ಕೂಟ ನಡೆದಿತ್ತು. ಆ ನರಿಗಳ ಕೂಟದಲ್ಲಿ ಲೀಡರ್ ನರಿ ಯಾವುದೋ ಕಾರಣದಿಂದ ತನ್ನ ಬಾಲವನ್ನು ಕತ್ತರಿಸಿ ಹಾಕಿಬಿಟ್ಟಿತು ಒಂದು ಸಾರಿ ಅದು ಬಂಡೆಯ ಮೇಲೆ ಕುಳಿತುಕೊಂಡು ಮಿಕ್ಕ ಎಲ್ಲಾ ನರಿಗಳನ್ನು ಕುರಿತು ಬಾಲ ಬಹಳ ತೊಂದರೆ ಯಾಗುತ್ತದೆ, ಅದನ್ನು ಎಲ್ಲರು ಕತ್ತರಿಸಿಕೊಂಡರೆ ಬಹಳ ಒಳ್ಳೆಯದಾಗುತ್ತದೆ ಆದ್ದರಿಂದ ನೀವು ಎಲ್ಲಾ ಸುರಕ್ಷಿತವಾಗಿ ಬದುಕಬೇಕಾದರೆ ನಿಮ್ಮಲ್ಲಿರುವ ಬಾಲಗಳನ್ನು ಕತ್ತರಿಸಿಕೊಳ್ಳಬೇಕು. ಎಂದು ಹೇಳಿತಂತೆ. ಒಂದು ಎಲ್ಲೋ Mischieves ನರಿ ಇತ್ತು, ನನ್ನಂಥದ್ದು ಅದು ಹೇಳಿತು ಸ್ವಲ್ಪ ಎದ್ದೇಳಪ್ಪ ನೋಡೋಣ ಅಂತ. ಆ ಲೀಡರ್ ನರಿ ನಿಂತು ಕೊಂಡಾಗ ಬಾಕಿ ನರಿಗೆ ಗೊತ್ತಾಯಿತು. ಅದು ತನ್ನ ಬಾಲವನ್ನು ಕತ್ತರಿಸಿ ಕೊಂಡಿದ್ದರಿಂದ ಹೀಗಾಯಿತು ಎಂಬುದು ಹಾಗೆ ಇವರು ನನ್ನನ್ನು ಸುಮ್ಮನೆ ಇರುವುದಕ್ಕೆ ಬಿಡುತ್ತಿಲ್ಲ.

ಶ್ರೀ ಎಮ್. ಎಸ್. ಕೃಷ್ಣನ್.—ಅವರು ಅರ್ಥಗರ್ಭಿತವಾದ ಮಾತನ್ನು ಹೇಳಿದರು. ಅವರು ಹೇಳಿರುವುದನ್ನು ಅರ್ಥಮಾಡಿಕೊಂಡು ನಾವು ಸುಮ್ಮನೆ ಇರುವುದು ಒಳ್ಳೆಯದು ಎನಿಸುತ್ತದೆ.

ಕೆಲವು ಕಡೆಗಳಲ್ಲಿ ೧೦ ನಿಮಿಷ ಕಾಲ, ಕೆಲವು ಕಡೆಗಳಲ್ಲಿ ೫ ನಿಮಿಷಗಳ ಕಾಲ ನೀರು ಬರುತ್ತಿದೆ. ಆದರೆ ಎರಡು ಗಂಟೆಗಳ ಕಾಲ ಮಾತ್ರ ನನಗೆ ತಿಳಿದ ಮಟ್ಟಿಗೆ ಎಲ್ಲಿಯೂ ಬರುತ್ತಿಲ್ಲ, ನಾನು ರಾಜಾಜಿನಗರ, ಮಲ್ಲೇಶ್ವರಂ, ಬಿನ್ನಿಪೇಟೆ, ಗಾಂಧಿನಗರ ಭಾಗಗಳಲ್ಲಿ ನೋಡಿದ್ದೇನೆ. ಅಲ್ಲಿ ಜನರು ನೀರಿಗಾಗಿ ಪಡುವ ತೊಂದರೆಯನ್ನು ನಾನು ಹೇಳುವುದು ಅಸಾಧ್ಯವಾಗಿದೆ. ಮಾನ್ಯ ಮಂತ್ರಿಯವರು ಶಿಂಶಾದಿಂದ ೪೦ ಲಕ್ಷ ರೂ.ಗಳನ್ನು ಖರ್ಚು ಮಾಡಿ ೪.೫ MG ನೀರನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳಿದ್ದಾರೆ. ಅವರು ಹೇಳಿದ ಹಾಗೆ ಅದು ಎಲ್ಲಿ ಹೋಗಿದೆ ಎಂದು ನಮಗೆ ಗೊತ್ತಾಗಿಲ್ಲ. ಅವರು ಹೇಳುತ್ತಾರೆ ನಿಮ್ಮ ವಿಭಾಗಕ್ಕೆ ನೀರು ಕೊಡುತ್ತಾ ಇದ್ದೇವೆ ಎಂದು ಆದರೆ ಅವರು ಕೊಡುವ ನೀರು ಮಾತ್ರ ಸರಿಯಾಗಿ ನಮಗೆ ಬರುತ್ತಾ ಇಲ್ಲ. ಇವೊತ್ತು ಬೆಳಿಗ್ಗೆ ಹೋದಾಗ ನಮಗೆ ತಿಳಿದು ಬಂದಿದ್ದು ಏನೆಂದರೆ ಸರಕಾರದವರು ಈಗ ನೀರು ಸರಬರಾಜಿನ ಬಗ್ಗೆ ಸಾಕಷ್ಟು ಪ್ರಯತ್ನ ಮಾಡುತ್ತಾ ಇದ್ದಾರೆ ಎಂದು ಅವರ ಪ್ರಯತ್ನ ಹಾಗೂ ಕಾಳಜಿಯ ಬಗ್ಗೆ ನಾನು ಮಾತನಾಡುವುದಿಲ್ಲ. ಆದಷ್ಟು ಬೇಗ ನೀರು ಪೂರೈಸುವಲ್ಲಿ ಬೇಕಾದ ಕ್ರಮ ಕೈಗೊಳ್ಳಲು ಹಗಲು ರಾತ್ರಿ ಎಂದು ಸಂಬಂಧಪಟ್ಟವರು ಕೆಲಸ ಮಾಡುತ್ತಾ ಇದ್ದಾರೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ನಮಗೆ ನೀರು ಬಂದಿಲ್ಲ. ಈಗ ಏನು ಮಾಡಬೇಕು ಅಂದರೆ, ಇದರ ಬಗ್ಗೆ ಸೂಕ್ತ ಹಾಗೂ ನಿರ್ದಿಷ್ಟ ಕ್ರಮ ತೆಗೆದುಕೊಳ್ಳಲು ಯೋಚನೆ ಮಾಡಬೇಕು. ಮಲ್ಲೇಶ್ವರಂ ಭಾಗದಲ್ಲಿಯೂ ಅಷ್ಟೆ. ಅಲ್ಲಿಯು ಸರಬರಾಜು ಸಮರ್ಪಕವಾಗಿಲ್ಲ. ಮತ್ತೆ ನಮಗೆ ಕಂಡುಬರುವುದು ಕೆಲವು ಕಡೆಗಳಲ್ಲಿ ದಿನಬಿಟ್ಟು ದಿನ ನೀರು ಕೊಡುವ ಪದ್ಧತಿ ಇದೆ. ಆದರೆ ಈ ಪದ್ಧತಿ ಜಯನಗರ, ಬಸವನಗುಡಿ, ಚಾಮರಾಜ ಪೇಟೆ, ಹೀಗೆ ಹಲವಾರು ಕಡೆಗಳಲ್ಲಿ ಇಲ್ಲ. ಏತಕ್ಕಾಗಿ ಈ ರೀತಿ ತಾರತಮ್ಯ ಇದೆ ಎನ್ನುವುದು ನಮಗೆ ತಿಳಿಯುತ್ತಿಲ್ಲ. ಜಯನಗರ ವಿಭಾಗ ಮಾನ್ಯ ಚಂದ್ರಶೇಖರ್‌ರವರ ಕ್ಷೇತ್ರ ಎಂದೆ ? ಬಸವನ ಗುಡಿ ಮುಖ್ಯ ಮಂತ್ರಿಗಳವರ ಕ್ಷೇತ್ರ ಎಂದೆ ? ಮೊಯಿದ್ದೀನ್‌ರವರ ಕ್ಷೇತ್ರ ಚಾಮರಾಜ ಪೇಟೆ ಎಂದೆ ? ಹೀಗೆ ಏಕೆ ಮಾಡಿದ್ದೀರಿ ? ನೀವು ಹಾಗೆ ತಾರತಮ್ಯ ಮಾಡುತ್ತೀರಿ ಎಂದು ನಾನು ಹೇಳುವುದಿಲ್ಲ ಮತ್ತು ಅಂತಹ ನೀತಿಯಲ್ಲಿ ನನಗೆ ನಂಬಿಕೆಯೂ ಕೂಡಾ ಇಲ್ಲ. ಆದರೂ ಸಹ ಹೇಳಬೇಕಾಗಿ ಬಂದಿದೆ. ಯಾಕೆಂದರೆ ನಮ್ಮ ರಾಜಾಜಿನಗರ ವಿಭಾಗದ ಜನರು ನಮ್ಮನ್ನು ಕೇಳುತ್ತಾರೆ. ನೀವು ಕಮ್ಯುನಿಷ್ಟ್ ಶಾಸಕರು ಇರುವ ಕಾರಣ ಹೀಗಾಗಿದೆ, ಆ ಕಾರಣಕ್ಕಾಗಿ ನಮಗೆ ನೀರು ಸರಿಯಾಗಿ ಬರುವುದಿಲ್ಲ ಎಂದು ಹೇಳುತ್ತಾರೆ. ಇಂತಹ ಒಂದು ಅಭಿಪ್ರಾಯ ಸಾರ್ವಜನಿಕರಲ್ಲಿ ಬರಲು ಅವಕಾಶ ತಾವುಗಳು ಕೊಡಬಾರದು. ಹೀಗೆ ಒಂದೊಂದು ಭಾಗಕ್ಕೆ ಒಂದೊಂದು ರೀತಿಯ ನೀರಿನ ಸರಬರಾಜಿನ ಪದ್ಧತಿ ಹೋಗಬೇಕು ಎಲ್ಲರಿಗೂ ಅನ್ವಯವಾಗುವಂತೆ ಒಂದೇ ತೆರನಾಗಿ ನೀರನ್ನು ಒದಗಿಸಬೇಕು. ಇಂತಹ ಸಮಯದಲ್ಲಿ ಮಾನ್ಯ ನಾರಾಯಣ ಕುಮಾರ್ ರವರು ಇರಬೇಕಿತ್ತು. ಅವರಿಗೂ ಇದು ಅನ್ವಯವಾಗುತ್ತದೆ ಅವರು ಜನತಾ ಪಕ್ಷದವರು. ನಮ್ಮ ರಾಜಾಜಿನಗರ, ಬಿನ್ನಿಪೇಟೆ, ಗಾಂಧೀನಗರ, ಈ ಭಾಗಗಳಲ್ಲಿ ಎರಡು ದಿನಕ್ಕೊಮ್ಮೆ ನೀರು ಕೊಡುತ್ತಾ ಇದ್ದಾರೆ. ಎ. ಮತ್ತು ಬಿ ಎಂದು ವಿಂಗಡಿಸಿದ್ದಾರೆ ಇದು ಏಕೆ ? ಬೆಂಗಳೂರು ನಗರದ ಜನರಲ್ಲಿ ಈ ಕುರಿತು ವ್ಯತ್ಯಾಸ ಏಕೆ ಮಾಡಿದರು ? ಎಲ್ಲಿ ನೀರು ಬೇಕೋ ಅಲ್ಲಿ ಕೊಡಲಿಕ್ಕೆ ಆಗುವುದಿಲ್ಲವೆ ? ಇವರ ಬಗ್ಗೆ ಕೇಳಿದಾಗ ಮಂತ್ರಿಗಳು ಏನು ಹೇಳಿದ್ದಾರೆ ಅದು ಪತ್ರಿಕೆಗಳಲ್ಲಿ ಬಂದಿದೆ, ಆ ಮೇಲೆ ತಾವು ಹೇಳಿದ್ದನ್ನು ಸರಿಮಾಡಿಕೊಂಡಿದ್ದಾರೆ. ಒಟ್ಟಿನಲ್ಲಿ ನೀರು ಸಮರ್ಪಕವಾಗಿ ಕೊಡುವಲ್ಲಿ ಸರಕಾರ ಕಾಳಜಿ ವಹಿಸಿದೆ. ಆದರೂ ಕೂಡ ಇನ್ನೂ ಹೆಚ್ಚು ಶ್ರಮವಹಿಸಿ ನೀರು ಕೊಡಬೇಕು, ವ್ಯತ್ಯಾಸವನ್ನು ನಿವಾರಿಸಬೇಕು.

ಶ್ರೀ ಪಟಮಕ್ಕಿ ರತ್ನಾಕರ್.—ತಾವು ಸರಕಾರದವರನ್ನು ಹೊಗಳುತ್ತಾ ಇದ್ದೀರಲ್ಲ ?

ಶ್ರೀ ಎಂ ಎಸ್ ಕೃಷ್ಣನ್.—ನಾವು ಯಾರ ತಾಳಕ್ಕೂ ಕುಣಿಯುವ ಜನರು ಅಲ್ಲ. ಇದ್ದುದನ್ನು ಇದ್ದ ಹಾಗೆ ಹೇಳುತ್ತೇವೆ ಸರಿಕಂಡರೆ ಹೌದು ಎಂದು ತಪ್ಪುಗಳು ಇದ್ದಲ್ಲಿ ಅಲ್ಲ ಎಂದು ಹೇಳುತ್ತೇವೆ ಇಷ್ಟು ಮಾತ್ರ ಹೇಳ ಬೇಕಾಗಿದೆ ತಾವುಗಳು ಹಿಂದೆ ಇಂದಿರಾ ಕೃಪಾ ಪೋಷಿತ ನಾಟಕ ಮಂಡಳಿಯಲ್ಲಿ ಕುಣಿಯುತ್ತಾ ಇದ್ದವರು, ಈಗ ರಾಜೀವ ಕೃಪಾ ಪೋಷಿತ ನಾಟಕ ಮಂಡಳಿಯಲ್ಲಿ ಕುಣಿಯುತ್ತಾ ಇದ್ದೀರಿ......ನಮಗೆ ಹಾಗೆ ಕುಣಿಯುವುದಕ್ಕೆ ಬರುವುದಿಲ್ಲ.

ಶ್ರೀ ರತ್ನಾಕರ್ ಪಟಮಕ್ಕಿ.—ನೀವು ಎರಡೂ ಕಡೆಗಳಲ್ಲಿಯೂ ಸೈಡ್ ಆಕ್ಟರ್... ...

ಶ್ರೀ ಎಂ. ಎಸ್. ಕೃಷ್ಣನ್,—ನಾವು ಯಾವ ಕಡೆಗಳಲ್ಲಿಯೂ ಸೈಡ್ ಆಕ್ಟರ್ ಅಲ್ಲ. ಅದರ ಬಗೆ ನಾವು ಈಗ ಹೆಚ್ಚಿಗೆ ಮಾತನಾಡುವುದು ಅನಗತ್ಯವಾದೀತು.

ಶ್ರೀ ಆರ್. ವೆಂಕಟರಾಮಯ್ಯ.—ಇವರ ಆಕ್ಟಿಂಗ್ ತುಂಬಾ ಗಂಭೀರವಾಗಿರುತ್ತದೆ, ನಿಮ್ಮ ಹಾಗೆ ಅಲ್ಲ,

ಶ್ರೀ ಪಂಪಾವತಿ.—ಅಧ್ಯಕ್ಷರೆ. ಮಾನ್ಯ ಸದಸ್ಯರುಗಳು ಹೀಗೆ ಮಾತನಾಡಿ ತಕರಾರಿಗೆ ಅವಕಾಶ ಮಾಡಿಕೊಡುತ್ತಾರೆ. ಒಂದೇ ಮಾತನ್ನು ಹೇಳುವುದಾದರೆ ನಮಗೂ ಅವರ ಹಾಗೆ ಮಾತನಾಡಲಿಕ್ಕೆ ಬರುತ್ತದೆ. ಅವರು ತಿಳಿದುಕೊಂಡ ಹಾಗೆ ನಾವುಗಳು ಇಲ್ಲ. ಅವರಿಗಿಂತ ಹೆಚ್ಚು ಮಾತನಾಡಲು ನಾವು ಶಕ್ತರಿದ್ದೇವೆ. ರಾಜಕಾರಣ ಎಂದಮೇಲೆ ಒಂದಲ್ಲ ಒಂದು ರೀತಿಯಲ್ಲಿ ಸಂದರ್ಭಕ್ಕೆ ಅನುಗುಣವಾಗಿ ನೋಡಿಕೊಳ್ಳಬೇಕಾಗುತ್ತದೆ ಎನ್ನುವುದು ಮಾನ್ಯರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಒಂದು ನೀತಿ, ನಿಷ್ಟೆ, ಎಲ್ಲವೂ ನಮಗೆ ಇರುತ್ತದೆ. ಅದರಂತೆ ನಾವು ನಡೆದುಕೊಳ್ಳುತ್ತಾ ಇದ್ದೇವೆ ಎಂದು ತಾವುಗಳು ಮರೆಯಬಾರದು. ವಾದ ಮುಂದುವರಿಸುವುದರಲ್ಲಿ ಅರ್ಥವಿಲ್ಲ.

ಶ್ರೀ ಎಂ. ಎಸ್. ಪಾಟೀಲ್.—ಅವರು ನಾಟಕ ಎಂದು ಹೇಳಿದ್ದಾರೆ ಅದು ತಪ್ಪಲ್ಲವೆ ?

ಶ್ರೀ ಎಂ. ಎಸ್. ಕೃಷ್ಣನ್.—ಅದೆಲ್ಲಾ ಹಳೆಯ ರಾಗ, ಆ ರಾಗದಲ್ಲಿ ಹಾಡುತ್ತಾ ಇಲ್ಲ. ಅದನ್ನು ಬಿಟ್ಟು ಬಿಡಿ. ವಿಷಯಕ್ಕೆ ಬರುವುದಾದರೆ, ಈ ಕೆಲವು ಭಾಗಗಳಲ್ಲಿ ದಿನಬಿಟ್ಟು ದಿನ ನೀರು ಕೊಡುವ ಪದ್ಧತಿ ಏನಿದೆ, ಅಂದರೆ ಎರಡು ಗಂಟೆಗಳ ಕಾಲ ನೀರು ಕೊಡುತ್ತಾ ಇರುವ ವ್ಯವಸ್ಥೆ ಇದರ ಬಗ್ಗೆ ಮಾನ್ಯ ಮಂತ್ರಿಯವರು ಮತ್ತು ಜಲಮಂಡಳಿಯವರು ಯೋಚನೆ ಮಾಡಬೇಕು. ಜಲಮಂಡಳಿಯವರು ಇದು ಸರಿಯಾಗಿದೆ ದಿನವೂ ಬಿಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಹೇಳಿದಾಗ ಒಂದು ಮಾತು ನೆನಪು ಬರುತ್ತದೆ. ಯಾವುದೋ ಒಂದು ಮನೆಯಲ್ಲಿನ ಹುಡುಗನೊಬ್ಬನಿಗೆ ಅಜೀರ್ಣವಾಯಿತು ಎಂದು ಮನೆಯವರೆಲ್ಲರೂ ಉಪವಾಸ ಇರಬೇಕೇ ? ಊಟ ಬಿಡಬೇಕೇ ? ಬೆಂಗಳೂರು ನಗರದ ಜನರು ಎಲ್ಲರೂ ಒಂದೇನೆ. ಇರುವ ನೀರನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳಬೇಕು. ಒಂದು ಸಂಸಾರದಲ್ಲಿನ ಆಹಾರವನ್ನು ಎಲ್ಲರೂ ಹಂಚಿಕೊಂಡು ತಿಂದು ಬಾಳುವ ರೀತಿಯಲ್ಲಿ ನಗರದ ಜನರಲ್ಲಿ ಹಂಚಿಕೆಯ ವಿಚಾರದಲ್ಲಿ ಏಕತೆ ಇರಲಿ. ವ್ಯತ್ಯಾಸವನ್ನು ಮಾಡುವುದು ಸರಿಯಲ್ಲ, ಅದರ ಬಗ್ಗೆ ನಾನು ಆಕ್ಷೇಪಣೆ ಎತ್ತುತ್ತಿದ್ದೇನೆ. ಅದು ಏನೇ ಇದ್ದರೂ ಪರಿಸ್ಥಿತಿಯನ್ನು ಉತ್ತಮಗೊಳಿಸುವುದರ ಬಗ್ಗೆ ಯೋಚನೆ ಮಾಡಬೇಕು. ಈಗಾಗಲೇ ಬಹಳಷ್ಟು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿದ್ದಾರೆ. ಅದರ ಬಗ್ಗೆ ಸರಕಾರಕ್ಕೆ ನಿಜವಾಗಿಯೂ ಶಹಬಾಶ್‌ಗಿರಿಯನ್ನು ಕೊಡುತ್ತೇನೆ. ಬಹಳಷ್ಟು ಬೋರ್‌ಗಳ ನೀರಿನ ಸಮೃದ್ಧಿ ವೇಗ ಕಡಿಮೆ ಆಗಿದೆ. ಇಂತಹ ಲೋಪದೋಷಗಳನ್ನು ಕೂಡಾ ಸಮರ್ಪಕವಾದ ರೀತಿಯಲ್ಲಿ ನಿರ್ವಹಣೆ ಮಾಡುವುದಕ್ಕೆ ಸೂಕ್ತ ಏರ್ಪಾಡು ಮಾಡಬೇಕು. ಇನ್ನೂ ಹಲವಾರು ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಬೇಕಾಗಿದೆ. ಆದರೆ ಅದಕ್ಕಾಗಿ ನಿಮ್ಮಲ್ಲಿ ಇರುವ ವ್ಯವಸ್ಥೆ ಏನು? ನನಗೆ ತಿಳಿದ ಹಾಗೆ ೧೨ ರಿಗ್‌ಗಳು ನಿಮ್ಮಲ್ಲಿ ಇರಬಹುದು. ಇವೊತ್ತು ಬೆಳಿಗ್ಗೆ ವೆರಿಫೈ ಮಾಡಿದಂತೆ ಬೆಂಗಳೂರಿನಲ್ಲಿ ಈಗ ಐದು ರಿಗ್‌ಗಳು ಮಾತ್ರ ಇವೆ ಎಂದು ತಿಳಿದು ಬಂದಿದೆ. ಒಂದು ರಿಗ್, ಒಂದು ಬೋರ್‌ವೆಲ್‌ನ್ನು ತೆಗೆಯಲಿಕ್ಕೆ ಎರಡು ದಿನಗಳ ಕಾಲವನ್ನು ತೆಗೆದುಕೊಳ್ಳುತ್ತದೆ. ಹಾಗಾದರೆ ಬೆಂಗಳೂರಿನ ಅಗತ್ಯತೆಯ ಅನುಸಾರವಾಗಿ ಬೇಕಾಗಿರುವ ಬೋರ್‌ವೆಲ್‌ಗಳನ್ನು ತೆಗೆಸಲು ನಿಮಗೆ ಇರುವ ಐದು ರಿಗ್‌ಗಳಿಂದ ಕೂಡಲೆ ಸಾಧ್ಯವಿದೆಯೆ ? ಆದುದರಿಂದ ತೀವ್ರವಾಗಿ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ಕೂಡಲೇ ಇನ್ನೂ ಹೆಚ್ಚಿಗೆ ರಿಗ್‌ಗಳನ್ನು ತರಿಸಿ ಬಾವಿಗಳನ್ನು ತೆಗೆಯಿಸುವ ಜವಾಬ್ದಾರಿ ತಮ್ಮ ಮೇಲೆ ಇದೆ. ಈ ನೀರಿನ ಸರಬರಾಜು ಕುರಿತು ನಾವು ಧರಣ ಸತ್ಯಾಗ್ರಹ ಉಪವಾಸ ಸತ್ಯಾಗ್ರಹ ಕೈಗೊಂಡಾಗಲೂ ಸಮರ್ಪಕ ವ್ಯವಸ್ಥೆಯನ್ನು ಮಾಡುವುದಾಗಿ ಹೇಳಿದ್ದೀರಿ. ಆದರೆ ಆ ಕುರಿತು ತಾವುಗಳು ಏನು ಮಾಡಿದ್ದೀರಿ ಎಂದು ಕೇಳುತ್ತಿದ್ದೇನೆ. ತಾವು ಈ ವಿಷಯದಲ್ಲಿ ಕರ್ತವ್ಯ ಲೋಪ ಮಾಡಿದ್ದೀರಿ. ನೀರಿನ ಸರಬರಾಜು ವಿಷಯದಲ್ಲಿನ ಪರಿಸ್ಥಿತಿ ನಮಗೂ ಅರ್ಥವಾಗುತ್ತದೆ. ಆದರೆ ಅದನ್ನು ಸರಿಪಡಿಸುವಲ್ಲಿ ತೀವ್ರತರವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸುವ್ಯವಸ್ಥಿತ ನೀರು ಸರಬರಾಜನ್ನು ತಾವುಗಳು ಮಾಡುತ್ತೇವೆ ಎಂದು ಹೇಳಿದ್ದೀರಿ. ಹಿಂದೆ ಮಹಾರಾಜರುಗಳ ಕಾಲದಲ್ಲಿ ಅಲ್ಲಲ್ಲಿ ನೀರಿನ ದೊಡ್ಡ ದೊಡ್ಡ ಟ್ಯಾಂಕ್‌ಗಳನ್ನು ಕಟ್ಟಿಸಿ, ಅದರೊಳಗೆ ನೀರನ್ನು ಶೇಖರಣೆ ಮಾಡುತ್ತಾ ಇದ್ದರು. ನೀರು ಬೇಕಾದವರು ತೆಗೆದುಕೊಂಡು ಹೋಗುತ್ತಿದ್ದರು. ಈಗ ನಮ್ಮಲ್ಲಿಯೂ ಹಾಗೆ ಮಾಡಬಹುದು. ದೊಡ್ಡ ಟ್ಯಾಂಕ್‌ಗಳನ್ನು ಕಟ್ಟಿಸಿ, ಸಾಕಷ್ಟು ಕೊಳಾಯಿಗಳನ್ನು ಅದಕ್ಕೆ ಜೋಡಿಸಿ ಇಟ್ಟರೆ ಬೇಕಾದಷ್ಟು ಜನರು ಬಂದು ನೀರು ತೆಗೆದುಕೊಂಡು ಹೋಗಲು ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಹಾಗಾದರೂ ಮಾಡಬೇಕೆಂದು ತಮ್ಮಲ್ಲಿ ಹೇಳಿಕೊಳ್ಳುತ್ತೇನೆ.

ಇನ್ನು ಇಷ್ಟೆಲ್ಲ ಆದರೂ ಸಹ ಬೆಂಗಳೂರು ನೀರಿನ ಸರಬರಾಜು ವ್ಯವಸ್ಥೆ ಸರಿಯಾಗಿಲ್ಲ, ವಿತರಣೆ ಸರಿಯಾಗಿ ಇಲ್ಲ, ವ್ಯತಿರಿಕ್ತವಾಗಿದೆ, ಅರಾಜಕತೆಯಿಂದ ಕೂಡಿದೆ ಎಂದು ಕಂಡುಬರುತ್ತದೆ. ಅದನ್ನು ನೋಡಿದಾಗ ಗೊತ್ತಾಗುತ್ತದೆ. ಮೊನ್ನೆಯು ದಿವಸ ತಜ್ಞರ ಒಂದು ಸಭೆ ಮಾಡಿದರು. ಅವರು ಕೂಡಾ ಇದರ ಬಗ್ಗೆ ಮಾತನಾಡಿದ್ದಾರೆ. ಎಲ್ಲಾ ಕಡೆಗಳಲ್ಲಿಯೂ ನೀರು ಬೇಕು. ಬೆಂಗಳೂರನ್ನು ಈ ಕುರಿತು ಅರ್ಧ ಭಾಗ ಮಾಡಿ, ಇನ್ನೊಂದು ೩೬ ಇಂಚಿನ ಲೈನ್‌ನನ್ನು ಸೌಥ್‌ಎಂಡ್‌ನಿಂದ ಕೇತಮಾರನ ಹಳ್ಳಿಯು ತನಕ ಹಾಕಬೇಕು. ಇದಕ್ಕೆ ನಾಲ್ಕುವರೆ ಕೋಟಿ ರೂ. ಗಳು ಬೇಕಾಗುತ್ತದೆ ಎಂದು ವ್ಯಕ್ತವಾಗಿದೆ. ಒಂದು ವೇಳೆ ಇಷ್ಟು ವೆಚ್ಚ ಮಾಡಿ ನೀರು ಸರಬರಾಜು ಜನತೆಗೆ ಯೋಗ್ಯ ರೀತಿಯಲ್ಲಿ ಆಗುವುದಾದರೆ ಈ ನಾಲ್ಕುವರೆ ಕೋಟಿ ರೂ, ಗಳಿಗಾಗಿ ತಾವು ಏಕೆ ಯೋಚನೆ ಮಾಡುತ್ತೀರಿ ?

೪–೦೦ ಪಿ. ಎಂ.

ಇದೆ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದಾದರೆ ಖಂಡಿತವಾಗಿ ನೀವು ಜನತೆಗೆ ನೀರು ಕೊಡುವುದಕ್ಕೆ ಆಗುವುದಿಲ್ಲ. ನೀವೇ ಹೇಳಿದ್ದೀರಿ ಸುಮಾರು ೩೬ ಇಂಚ್ ಪೈಪ್‌ನಲ್ಲಿ ನೀರನ್ನು ಸೌತ್ ಎಂಡ್ ಸರ್ಕಲ್‌ನಿಂದ ಕೇತಮಾರನಹಳ್ಳಿಯವರೆವಿಗೆ ಮಾಡಿಸಿ ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಈಗ ಆ ಪ್ರಶ್ನೆಯೇ ಇನ್ನು ಇತ್ಯರ್ಥ ಮಾಡಲಿಲ್ಲ. ಆ ಪ್ರಶ್ನೆ ಇನ್ನು ಉಳಿದುಕೊಂಡಿದೆ. ಆದ್ದರಿಂದ ನಾನು ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ ಈ ಕೆಲಸವನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕೆಂದು. ಈ ಹಿಂದೆ ರಾಜಾಜಿನಗರದ ಜನತೆ ಮತ್ತು ನಾನು ಧರಣಿ ಕುಳಿತುಕೊಳ್ಳುತ್ತೇವೆಂದು ಹೇಳಿದಾಗ ತಾವೇ ಹೇಳಿದ್ದೀರಿ. ನಾನು ಈ ಕೆಲಸವನ್ನು ಮಾಡಿಸಿ ಕೊಡುತ್ತೇನೆಂದು, ಆದ್ದರಿಂದ ಈ ಬಗ್ಗೆ ತಾವು ಆದಷ್ಟು ಜಾಗ್ರತೆಯಾಗಿ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಇನ್ನು ಬೇಸಿಗೆ ಕಾಲ ಹತ್ತಿರ ಬರುತ್ತಿದೆ, ಆಗ ಜನರು ಇನ್ನು ಬಹಳ ಕಷ್ಟ ಪಡಬೇಕಾದ ಪರಿಸ್ಥಿತಿ ಬರಬಹುದು. ಮಳೆ ಯಾವಾಗ ಬರುತ್ತದೆಯೋ ಯಾರಿಗೂ ಗೊತ್ತಿಲ್ಲ. ತಾವೇನಾದರೂ ಈ ಕೆಲಸವನ್ನು ಶೀಘ್ರವಾಗಿ ಮಾಡದಿದ್ದರೆ ಆ ಜನ ದಂಗೆ ಎದ್ದು ಬರುವಂತಹ ಪರಿಸ್ಥಿಗೆ ಬರುತ್ತಾರೆ, ಆಗ ನಾವು ಸಹ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ಈ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾನು ನಿಮ್ಮನ್ನು ಹೆದರಿಸುತ್ತಿದ್ದೇನೆ ಎಂದು ತಿಳಿದುಕೊಳ್ಳಬಾರದು, ದಯಮಾಡಿ ಈ ಕೆಲಸವನ್ನು ತಾವು ಶೀಘ್ರವಾಗಿ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇಷ್ಟು ಮಾತ್ರ ನಾನು ಬೆಂಗಳೂರು ಜಲಮಂಡಲಿಯ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇನ್ನು ಬಿ.ಡಿ.ಎ. ಬಗ್ಗೆ ಒಂದು ಮಾತನ್ನು ನಾನು ಈ ಸದನದಲ್ಲಿ ಹೇಳಲೇ ಬೇಕಾಗುತ್ತದೆ. ಬೆಂಗಳೂರು ನಗರಕ್ಕೆ ತಾವು ಒಂದು ಮೆಟ್ರೋಪಾಲಿಟಿನ್ ಅಥಾರಿಟಿ ಎಂದು ಮಾಡಿ ಆ ಕಾನೂನು ಸಹ ಈ ಮನೆಯಲ್ಲಿ ಪಾಸ್ ಮಾಡಿಕೊಂಡಿದ್ದೀರಿ. ಅದು ಕಾನೂನು ಆಗಿದೆ. ಇಂತಹ ಒಂದು ಮೆಟ್ರೋಪಾಲಿಟಿನ್ ಅಥಾರಿಟಿ ಇದ್ದರು ಸಹ ಈ ಬಿ.ಡಿ.ಎ. ಇರಬೇಕೇ ಎನ್ನುವ ಪ್ರಶ್ನೆ ಇವತ್ತು ಉದ್ಭವವಾಗಿದೆ. ಈ ಒಂದು ಮೆಟ್ರೋಪಾಲಿಟಿನ್ ಅಥಾರಿಟಿಯಲ್ಲಿ ಸ್ಟ್ಯಾಚುಟರಿ ಬೋರ್ಡ್ ಕೋ–ಆಪರೇಟಿವ್. ಮತ್ತು ವಾಟರ್ ಬೋರ್ಡ್ ಎಲೆಕ್ಟ್ರಿಸಿಟಿ ಮತ್ತು ಕಾರ್ಪೊರೇಷನ್ಸ್ ಮತ್ತು ಟೌನ್ ಪ್ಲಾನಿಂಗ್ ಎಲ್ಲಾ ಬರುತ್ತವೆ. ಅನೇಕ ಜನ ಈ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಈ ಬಿ.ಡಿ ಎ. ಇರಬೇಕೇ ? ಒಂದು ವೇಳೆ ಇದ್ದರೆ ಏತಕ್ಕೆ ಇರಬೇಕೆಂದು ಚರ್ಚೆ ಮಾಡುತ್ತಿದ್ದಾರೆ. ನಾನು ಸಹ ಅದನ್ನೆ ಯೋಚನೆ ಮಾಡುತ್ತಿದ್ದೇನೆ. ತಾವು ಈ ಬಿ.ಡಿ.ಎ. ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದೀರಿ. ಅದನ್ನು ನೋಡಿದರೆ ಹಾಸ್ಯಾಸ್ಪದವಾಗಿದೆ. ಈ ಬಿ.ಡಿ ಎ.ರವರು ಕುಮಾರಸ್ವಾಮಿ ಲೇಔಟ್‌ನಲ್ಲಿ ವೀಕರ್ಸ್ ಸೆಕ್ಷನವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ. ಆ ಮನೆಗಳನ್ನು ತಾವು ಹೋಗಿ ನೋಡಿಕೊಂಡು ಬರಬೇಕು. ಅವರು ಕಟ್ಟಿಸಿಕೊಟ್ಟಿರತಕ್ಕಂಥ ಮನೆಗಳಿಗೆ ಕಿಟಕಿ ಇದ್ದರೆ ಬಾಗಿಲು ಇಲ್ಲ ಬಾಗಿಲು ಇದ್ದರೆ ಗೋಡೆ ಸರಿಯಾಗಿ ಇರುವುದಿಲ್ಲ. ಈ ರೀತಿಯಲ್ಲಿ ಮನೆಗಳನ್ನು ಕಟ್ಟಿಸಿಕೊಟ್ಟರೆ ಅವರು ಯಾವ ರೀತಿಯಲ್ಲಿ ಅಲ್ಲಿ ಹೋಗಿ ವಾಸ ಮಾಡಬೇಕು ? ಈ ರೀತಿ ಯಾರು ಮಾಡಿದ್ದಾರೋ, ಅವರ ಮೇಲೆ ಸರ್ಕಾರದವರು ಕ್ರಮ ತೆಗೆದುಕೊಳ್ಳಬೇಕು. ಮತ್ತು ಈ ಬಿ.ಡಿ,ಎ,ರವರು ಆರ್ಥಿಕವಾಗಿ ಯಾರು ದುರ್ಬಲರಾಗಿದ್ದಾರೋ ಅವರಿಗೆ ಇತ್ತೀಚೆಗೆ ಸೈಟ್‌ಗಳನ್ನೇ ಹಂಚುತ್ತಿಲ್ಲ. ಈ ಸಂಸ್ಥೆಯಲ್ಲಿ ಹಿಂದೆ ನಾನು ಸಹ ಇದ್ದೆ. ಆದರೂ ಏನು ಕೆಲಸ ಮಾಡುವುದಿಲ್ಲ. ಆದ್ದರಿಂದ ಇಂತಹ ಸಂಸ್ಥೆಯನ್ನು ನಾವು ಏತಕೆ ಇಟ್ಟುಕೊಂಡಿರಬೇಕು ? ಈ ಸಂಸ್ಥೆಯ ಬಗ್ಗೆ ನಾನು ಒಂದೇ ಒಂದು ಉದಾಹರಣೆಯನ್ನು ಮಾತ್ರ

ಕೊಡುತ್ತೇನೆ. ಯಾವುದೇ ಒಂದು ಹೊಸ ಸರ್ಕಾರ ಬಂದ ತಕ್ಷಣ ಈ ಸಂಸ್ಥೆಯ ಅಧ್ಯಕ್ಷರುಗಳು ಬದಲಾವಣೆಯಾಗುತ್ತಿರುತ್ತಾರೆ. ಈ ಅಧ್ಯಕ್ಷರುಗಳ ಬದಲಾವಣೆಯಾದಂತೆಲ್ಲಾ ಈ ಸಂಸ್ಥೆಯ ಪಾಲಿಸಿಗಳು ಸಹ ಬದಲಾವಣೆಯಾಗುತ್ತಾ ಬಂದಿವೆ. ಈಗ ರೆವಿನ್ಯೂ ಸೈಟ್‌ದಾರರು ಇದ್ದಾರೆ. ಇದು ಒಂದು ದೊಡ್ಡ ಪ್ರಶ್ನೆ ನಮ್ಮ ಮುಂದೆ ಇದೆ. ಈ ರೆವಿನ್ಯೂ ಸೈಟ್‌ಗಳನ್ನು ಯಾರು ಕೊಂಡುಕೊಳ್ಳುವವರು, ಸಾಮಾನ್ಯವಾಗಿ ಸೈಟ್ ಸಿಗದೆ ಇರತಕ್ಕಂಥವರು. ಇಂತಹ ಸೈಟ್‌ಗಳಿಗೆ ಪ್ರಾಕ್ಟಿಕಲ್ ಆಗಿ ಪ್ರೋಸಿಜರ್ ಆಗಿ ಮಾಡಿಕೊಡಿ ಎಂದು ಅವರು ಹಣವನ್ನು ಸಹ ಕಟ್ಟಿದ್ದಾರೆ ಅವರಿಗೆ ಇನ್ನು ಯಾವುದೇ ರೀತಿಯ ಪ್ರಾಕ್ಟಿಕಲ್ ಪ್ರೋಸಿಜರ್ ತಾವು ಮಾಡಿಕೊಟ್ಟಿಲ್ಲ. ಹಿಂದೆ ಈ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀಮಾನ್ ಬಿ. ಟಿ. ಸೋಮಣ್ಣನವರು ಇದ್ದರು ಆಗ ನಾನು ಸಹ ಈ ಸಂಸ್ಥೆಯ ಸದಸ್ಯನಾಗಿದ್ದೆ. ಆಗ ಅವರು ಒಪ್ಪಿಕೊಂಡರು. ಆ ಮೇಲೆ ಆ ಜಾಗಕ್ಕೆ ಶ್ರೀಮಾನ್ ಕೆ. ಕೆ. ಮೂರ್ತಿಯವರು ಬಂದರು. ತದನಂತರ ಶ್ರೀಮಾನ್ ಬಸವಯ್ಯನವರು ಬಂದರು. ಆಗ ನಾನು ಸಹ ಸದಸ್ಯನಾಗಿದ್ದೆ. ಆಗ ಅವರು ಪ್ರಯತ್ನ ಮಾಡೋಣವೆಂದು ಹೇಳಿದ್ದರು. ಆದರೆ ಅದು ಈಗ ಪೂರ್ತಿಯಾಗಿ ರಿವರ್ಸ್ ಆಗಿದೆ. ರೆವಿನ್ಯೂ ಸೈಟ್‌ಗಳಲ್ಲಿ ಬಡವರು ಕಟ್ಟಿಕೊಂಡಿರತಕ್ಕಂಥ ಮನೆ ಗಳನ್ನು ಪೂರ್ತಿಯಾಗಿ ಧ್ವಂಸ ಮಾಡುವುದಕ್ಕೆ ಹೊರಟಿದ್ದಾರೆ. ಸಾಮಾನ್ಯವಾಗಿ ರೆವಿನ್ಯೂ ಸೈಟ್‌ಗಳಲ್ಲಿ ಮನೆಗಳನ್ನು ಕಟ್ಟಿಕೊಂಡಿರುವವರು ಕೂಲಿ ಕಾರ್ಮಿಕರು ಮತ್ತು ಬಡವರು ಇಂತಹ ಜನರ ಮೇಲೆ ಸರ್ಕಾರದ ಕಣ್ಣು ಬಿದ್ದಿದೆ. ಮಾರಿ ಕಣ್ಣು ಹೋತದ ಮೇಲೆ ಎಂದ ಹಾಗೆ ಇವರ ಮೇಲೆ ಬಿತ್ತು. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಮಾನವೀಯತೆ ದೃಷ್ಟಿಯಿಂದ ಯೋಚನೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿಯಲ್ಲಿ ನಾನು ಇನ್ನೊಂದು ನಿದರ್ಶನವನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಅದೇನೆಂದರೆ ಈ ಸೆಲ್ಫ್ ಫೈನಾನ್ಸ್ ಸ್ಕೀಮ್‌ನಲ್ಲಿ ೨.೮೬ ಲಕ್ಷ ರೂಪಾಯಿಗಳನ್ನು ಕೊಡಬೇಕೆಂದು ಇತ್ತು, ಈ ಯೋಜನೆಯಲ್ಲಿ ಎ.ಟೈಪ್ ಎಂದು ಮಾಡಿದ್ದರು. ಇದಕ್ಕೆ ಹಣ ತುಂಬುವವರು ಹೆಚ್ಚಾಗಿ ಮಧ್ಯಮವರ್ಗದ ಜನ. ಆ ಜನರಿಗೆ ಮನೆಗಳು ಬೇಕಾಗಿದೆ. ಆದರೆ ದೊಡ್ಡ ದೊಡ್ಡ ಶ್ರೀಮಂತರು ಈ ರೀತಿ ಹಣ ಕಟ್ಟಿ ಮನೆಗಳನ್ನು ಕೊಂಡುಕೊಳ್ಳುವುದಿಲ್ಲ. ಅವರು ಏನಿದ್ದರು ಈ ಕಾರ್ನರ್ ಸೈಟ್‌ಗಳನ್ನು ಆಕ್ಷನ್‌ನಲ್ಲಿ ತೆಗೆದುಕೊಂಡು ೫-೧೦ ಲಕ್ಷ ರೂಪಾಯಿಗಳಲ್ಲಿ ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಜೊತೆಗೆ ಬ್ಲಾಕ್ ಮನಿ ಇಟ್ಟಿರುವವರು, ಕಾಳಸಂತೆ ಕೋರರು ಇಂತಹ ಸೈಟ್‌ಗಳಿಗೆ ಹಣ ತುಂಬುವುದಿಲ್ಲ. ಈಗ ಈ ಸೆಲ್ಫ್ ಫೈನಾನ್ಸ್‌ಸ್ಕೀಮ್‌ನಲ್ಲಿ ಹಣ ಕಟ್ಟುವುದನ್ನು ಡಬ್ಬಲ್ ಮಾಡಿದ್ದೀರಿ. ಆದ್ದರಿಂದ ಈ ಬಗ್ಗೆ ಒಂದು ರಿಟ್ ಅರ್ಜಿ ಸಹ ಹೋಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ, ಅದು ರಾಜ್ಯದ ಹೈಕೋರ್ಟಿನಲ್ಲಿ ಇರಬಹುದು. ನಿಮಗೆ ಹಣ ಮಾತ್ರ ಹೆಚ್ಚು ಬೇಕು ಟೈಮ್‌ಗೆ ಸರಿಯಾಗಿ ಆ ಜನರಿಗೆ ಮನೆಗಳನ್ನು ಇದುವರೆಗೂ ಒದಗಿಸಿಕೊಟ್ಟಿಲ್ಲ. ಇದು ನ್ಯಾಯವೇ ನಿಮಗೆ. ಇನ್ನು ರೆಮ್ಕೊ ಬಿಹೆಚ್‌ಇಎಲ್ ಲೇಔಟ್‌ನಲ್ಲಿ ಯಾವ ರೀತಿ ಇದೆ ಎಂಬುದು ತಮಗೆ ಗೊತ್ತಿರಬಹುದು. ಅಲ್ಲಿನ ಜನ ಈ ಬಿ.ಡಿ.ಎ.ರವರಿಗೆ ಸುಮಾರು ೧೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದುವರೆವಿಗೂ ಅಲ್ಲಿನ ರಸ್ತೆಗಳಿಗೆ ಟಾರ್ ಹಾಕಿಸಿಕೊಟ್ಟಿಲ್ಲ. ಅಲ್ಲಿ ಸಾಮಾನ್ಯವಾಗಿ ವಾಸ ಮಾಡತಕ್ಕಂಥ ಜನ ಕಾರ್ಮಿಕರು ಕೂಲಿಕಾರರು ಇಂತಹ ಜನರಿಂದ ನಾವು ಹಣವನ್ನು ತೆಗೆದುಕೊಂಡು ಸರಿಯಾದ ಸೌಲಭ್ಯಗಳನ್ನು ಮಾಡಿ ಕೊಡಲಿಲ್ಲವೆಂದರೆ ಹೇಗೆ ? ಹೋಗಲಿ ನಿಮ್ಮ ಕೈಯಲ್ಲಿ ಆಗಲಿಲ್ಲವೆಂದರೆ ಅವರ ಹಣವನ್ನು ಅವರಿಗೆ ವಾಪಸ್ಸು ಕೊಟ್ಟುಬಿಡಿ, ನೀವು ಆ ಕೆಲಸ ಮಾಡುವುದಕ್ಕೆ ನಾಲಾಯಕ್ ಎಂದು ತೀರ್ಮಾನವಾದರೂ ಮಾಡೋಣ. ಈ ಒಂದು ಸಂಸ್ಥೆಯಲ್ಲಿ ಬಹಳ ಮೋಸ ನಡೆಯುತ್ತಿದೆ. ಅಲ್ಲಿ ಪ್ರತಿಯೊಂದು ಬೆಂಚ್‌ನಿಂದ ಬೆಂಚಿಗು ಹಣವನ್ನು ಕೊಡಬೇಕು. ೫-೧೦ ಎಷ್ಟು ಬೇಕೋ ಅಷ್ಟನ್ನು ಅವರು ತಿಂದು ತೇಗುತ್ತಿದ್ದಾರೆ. ಆದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಎಚ್ಚರಿಕೆಯನ್ನು ವಹಿಸಬೇಕು. ಇನ್ನು ದೊಮ್ಮಲೂರು ಲೇಔಟ್ ಎಂದು ಬಿ.ಡಿ.ಎ.ನವರು ಮಾಡಿದರು. ಅಲ್ಲಿ ಸುಮಾರು ೪೦೦ ಪ್ಲಾಟ್ಸ್ ಮಾಡಿದರು. ಆ ಸೈಟ್‌ಗಳನ್ನು ಸಾಮಾನ್ಯ ಜನರಿಗೆ ಸರ್ಕಾರಿ ನೌಕರರಿಗೆ ಮತ್ತು ಇತರೆ ಕಾರ್ಮಿಕರಿಗೆ ಎಲ್ಲರಿಗೂ ಹಂಚಿಕೆ ಮಾಡಿದರು. ಆದರೆ ಅಲ್ಲಿ ಪ್ಲಾಟ್ಸ್ ಇಲ್ಲ. ಅಲ್ಲಿ ಒಬ್ಬ ಕಂಟ್ರಾಕ್ಟರ್‌ಗೆ ಒಪ್ಪಿಸಿದ್ದರು. ಅವರು ಬಿಟ್ಟು ಹೋದರು. ಮತ್ತೆ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳಲೇ ಇಲ್ಲ. ಈ ಜನ ಬಿ.ಡಿ.ಎಗೆ ಹಣ ಕಟ್ಟಿ ಸುಮಾರು ೩ ವರ್ಷಗಳು ಆಯಿತು. ಇದುವರೆವಿಗೂ ಅವರ ಹಣಕ್ಕೆ ಬಡ್ಡಿ ಇಲ್ಲ ಅವರಿಗೆ ಸೈಟ್‌ಗಳು ಇಲ್ಲ. ಈ

ರೀತಿ ಯಾದರೆ ಹೇಗೆ ? ಇವತ್ತು ನಾಳೆ ಎಂದು ಹೇಳುತ್ತಲೇ ಇದ್ದಾರೆ. ತೆಲುಗಿನಲ್ಲಿ ಒಂದು ಗಾದೆ ಹೇಳುತ್ತಾರಲ್ಲ, ಅದು ಏನೆಂದರೆ ಚೂಸ್ತಾಮು, ಚೇಸ್ತಾಮು ಎಂದು ಆರೀತಿ ಹೇಳುತ್ತಲೆ ಇದ್ದಾರೆ. ಈ ವರ್ಷ ಬಿ.ಡಿ.ಎ.ಡೆವಲಪ್‌ಮೆಂಟ್ ವರ್ಕ್ಸ್ ಬಗ್ಗೆ ಒಂದು ಸಲಹೆ ಬಂದಿದೆ...

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಯಾವಾಗಲೂ ನೋಡೋಣ ಮಾಡೋಣ, ಎಂಬ ಭರವಸೆ ಕೊಡುತ್ತಿರುತ್ತಾರೆ. ಅದಕ್ಕೆ ತೆಲುಗಿನಲ್ಲಿ ಆ ರೀತಿ ಹೇಳುತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್,— ಮಾನ್ಯ ಸದಸ್ಯರು ಬಹಳ ಹೊಸದಾಗಿ ಬಂದಿದ್ದಾರೆ. ಅವರು ತಿಳಿದುಕೊಂಡಿದ್ದಾರೆ. ಮಂತ್ರಿಗಳಾದ ತಕ್ಷಣ ಏನು ಮಾಡುವುದಕ್ಕೂ ಬರುತ್ತದೆ ಎಂದು. ಈಗ ವೆಸ್ಟ್ ಬೆಂಗಾಲ್‌ನಲ್ಲಿ ನಿಮ್ಮ ಪಕ್ಷದವರೇ ಸರ್ಕಾರ ನಡೆಸುತ್ತಿದ್ದಾರೆ. ಅಲ್ಲಿ ಯಾವ ರೀತಿ ಇದೆ ಎಂಬುದನ್ನು ನಾನು ತರಿಸಿಟ್ಟುಕೊಂಡಿದ್ದೇನೆ. ಹೇಳುತ್ತೇನೆ ಸ್ವಲ್ಪ ತಡೆಯಿರಿ.

ಶ್ರೀ ಎಂ. ಎಸ್. ಕೃಷ ನ್.— ವೆಸ್ಟ್ ಬೆಂಗಾಲ್‌ದಲ್ಲಿ ಕಲ್ಕತ್ತಾ ಮೆಟ್ರೋಪಾಲಿಟನ್ ಅಥಾರಿಟಿ ಎಂದರೆ. ಅದಕ್ಕೆ ಚೀಫ್‌ಮಿನಿಸ್ಟರ್‌ರವರು ಚೇರ್ಮನ್ ಆಗಿದ್ದಾರೆ. ಚೀಫ್ ಮಿನಿಸ್ಟರ್ ಇರುವುದರಿಂದ ಅನೇಕ ಕೆಲಸಗಳು ನಡೆಯುತ್ತವೆ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಬಿ. ಸಿ. ರಾಯ್ ಚೀಫ್‌ಮಿನಿಸ್ಟರ್ ಆಗಿದ್ದಾಗ, ವೆಸ್ಟ್ ಬೆಂಗಾಲ್‌ಕ್ಕೆ ಮೆಟ್ರೋಪಾಲಿಟೀನ್ ಅಥಾರಿಟಿ ಸಿಕ್ಕಿದೆ. ನಾವು ಇನ್ನೂ ಶೈಶವಾವಸ್ಥೆ ಯಲ್ಲಿದ್ದೇವೆ. ಮಗು ಈಗತಾನೇ ಜನನವಾಗಿದೆ, ವಯಸ್ಸಿಗೆ ಬಂದಮೇಲೆ ಇಲ್ಲಿಯೂ ಆಗಬಹುದು.

ಶ್ರೀ ಎಂ. ಎಸ್. ಕೃಷ್ಣನ್.— ಬರೀ ಭರವಸೆಗಳನ್ನು ಕೊಡುವುದು ಬೇಡ. ಅವುಗಳನ್ನು ಕಾರ್ಯರೂಪಕ್ಕೆ ತರಬೇಕು, ಒಂದು ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಚೀಫ್ ಮಿನಿಸ್ಟರ್‌ರವರು ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ ಏನು ಬರೆದಿದ್ದಾರೆ. ರಾಜಾಜಿನಗರದ ಕುಡಿಯುವ ನೀರಿನ ಬವಣೆ ವಿಚಾರದಲ್ಲಿ, ಸರ್ಕಾರದ ಕಾರ್ಯದರ್ಶಿಗಳಿಗೆ ಮತ್ತು ವಸತಿ ಮತ್ತು ನಗರಾಭಿವೃದ್ಧಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದ್ದಾರೆ. ಇದನ್ನು ಇಟ್ಟುಕೊಂಡು ಏನು ಮಾಡಬೇಕು ? ಇದರಿಂದ ಏನೂ ಪ್ರಯೋಜನ ಇಲ್ಲ. ಇದರಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸಹಿ ಮಾತ್ರ ಚೆನ್ನಾಗಿದೆ. ನಾನು ಇದರ ಬಗ್ಗೆ ದೊಡ್ಡ ಪ್ರಶ್ನೆ ಮಾಡುವುದಿಲ್ಲ. ಮುಖ್ಯ ಮಂತ್ರಿಗಳು ಯಾರೇ, ಬಂದರೂ ಕಾಗದಗಳ ಬಗ್ಗೆ ಕೂಡಲೇ ಕ್ರಮ ತೆಗೆದುಕೊಂಡು ಬರೆಯಬೇಕು, ಅದರಂತೆ ಬರೆದಿದ್ದಾರೆ. ಇದನ್ನು ದೊಡ್ಡದು ಮಾಡುವುದಕ್ಕೆ ಹೋಗುವುದಿಲ್ಲ. ಇಂತಹ ಒಂದು ಗಂಭೀರವಾದ ಪರಿಸ್ಥಿತಿ ಇದೆ. ಇಲ್ಲಿ ಬಿ. ಬಿ. ಎ, ಬಗ್ಗೆ ಮಾತನಾಡುತ್ತೇನೆ.' ಯಾವ ಉದ್ದೇಶ ಇಟ್ಟುಕೊಂಡು ಬಿ.ಡಿ.ಎ. ಆಯಿತೋ, ಅದರಂತೆ ಇವತ್ತು ನಡೆಯುತ್ತಿಲ್ಲ. ಇವತ್ತು ಬಿ. ಡಿ. ಎ. ಲೇಔಟ್ಸ್ ನೋಡಿ. ೫ ವರ್ಷ, ೬ ವರ್ಷ, ೮ ವರ್ಷದಿಂದ ಅಲ್ಲಿ ಟಾರ್ ಹಾಕಿಲ್ಲ, ಲೈಟ್ ಹಾಕಿಲ್ಲ, ಅಲ್ಲಲ್ಲಿ ಪಾರ್ಥೇನಿಯಂ ಬೆಳೆದುಕೊಂಡು ಬಂದಿದೆ. ಅಲ್ಲಿ ಕೆಲಸ ಮಾಡುವ ಜನ ಇಲ್ಲ. ಕುಡಿಯುವ ನೀರು ಇಲ್ಲ. ಅಂತಹ ಕಡೆ ಜನ ಹೇಗೆ ವಾಸಮಾಡಬೇಕು ? ಒಂದು ಯೂನಿವರ್ಸಿಟಿ ಲೇಔಟ್ ಇದೆ. ಅಲ್ಲಿ ಪ್ರೊಫೆಸರ್ಸ್ ಇದ್ದಾರೆ, ಲೆಕ್ಚರರ್ಸ್ ಇದ್ದಾರೆ. ಈ ರೀತಿಯಲ್ಲಿ ಬಿ. ಡಿ. ಎ. ಇರುವುದರಿಂದ, ಅವರಿಗೆ ಅನುಮಾನ ವಾಗುತ್ತಿದೆ. ಅವರು ಜಗಳ ಆಡುವಂತ ಜನ ಅಲ್ಲ. ಅವರು ಇಂದು ಕಣ್ಣೀರು ಹಾಕುತ್ತಿದ್ದಾರೆ. ಈ ಬಿ. ಡಿ. ಎ. ಎಂದರೆ ಭ್ರಷ್ಟಾಚಾರ ಡೆವಲಪ್‌ಮೆಂಟ್ ಅಥಾರಿಟಿ ಆಗಿದೆ. ಈ ಮಾತನ್ನು ಹಿಂದೆಯೇ ನಾನು ಹೇಳಿದ್ದೆ. ಇಂತಹ ಏರಿಯಾಗಳು ಇವತ್ತು ನೂರಕ್ಕೆ ನೂರರಷ್ಟು ಇವೆ. ಇದು ಇರಬೇಕೇ ಬೇಡವೇ? ಇದಕ್ಕೆ ಪೂರ್ಣಾವಧಿ ಚೇರ್ಮನ್ ಇಲ್ಲ, ಮೂಗು ಇಲ್ಲ, ಮುಖ ಇಲ್ಲ, ಅಲ್ಲೊಂದು ಕಾಲು, ಇಲ್ಲೊಂದು ಕಾಲು. ಹೀಗಾದರೆ ಇದು ಹೇಗೆ ನಡೆಯುತ್ತದೆ. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನು ಒಂದೇ ಒಂದು ಮಾತು. ತಮ್ಮ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಬೆಂಗಳೂರು ಮೆಟ್ರೋ ಪಾಲಿಟನ್ ಅಥಾರಟಿ ಕೆಲಸವನ್ನು ಬೇಗ ಪ್ರಾರಂಭ ಮಾಡಿ. ಹೆಚ್ಚಿನ ರೀತಿಯಲ್ಲಿ, ಚುರುಕಾಗಿ ಕೆಲಸ ಮಾಡಿ. ಸರಿಯಾಗಿ ಕೆಲಸ ಮಾಡುವಂಥ ಅಧಿಕಾರಿಗಳನ್ನು ಇಟ್ಟುಕೊಳ್ಳಿ. ನಾನು ಇದನ್ನು ಹೇಳಿದ ತಕ್ಷಣ ಕೋಪಬರುತ್ತದ. ಆದರೂ ಸಹ ಚುರುಕಿನಿಂದ ಇರತಕ್ಕ ಜನ ಬೇಕು, ಕೆಲಸ ಸರಿಯಾಗಿ ನಡೆಯಬೇಕು ಎಂದು ಹೇಳುತ್ತೇನೆ. ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಮುಖ್ಯವಾಗಿ ಈ ಡಿಪಾರ್ಟ್‌ಮೆಂಟ್ ಸರಿಯಾಗಿ ಕೆಲಸ ಮಾಡಲಿ ಎಂದು ಹೇಳಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಣಿಯರಿಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಆರ್ ರಾಮಯ್ಯ (ಹಿರಿಯೂರು).— ಸನ್ಮಾನ್ಯ ಅಧ್ಯಕ್ಷಣೀಯವರೇ, ಈ ಸದನದಲ್ಲಿ ಮಂಡಿಸಿರತಕ್ಕ ಎರಡು ಇಲಾಖೆಗಳ ಬೇಡಿಕೆಗಳ ಮೇಲೆ ಮಾತನಾಡಲು ಬಯಸುತ್ತೇನೆ. ಪ್ರಥಮವಾಗಿ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂತೆ ಎರಡು ಮುಖ್ಯ ಕೆಲಸಗಳನ್ನು ಆ ಇಲಾಖೆ ಹಮ್ಮಿಕೊಂಡಿದೆ ಎಂದು ನನಗನಿಸುತ್ತದೆ. ಒಂದು ಜನರನ್ನು ಆರೋಗ್ಯದಿಂದ ಕಾಪಾಡುವುದು ಇನ್ನೊಂದು ಜನಸಂಖ್ಯೆಯನ್ನು ನಿಯಂತ್ರಣ ಮಾಡುವಂಥ ಕಾರ್ಯಕ್ರಮ. ಇದುವರೆಗೆ ನೋಡಿದಾಗ, ಆರೋಗ್ಯದ ಕಾರ್ಯಕ್ರಮದಲ್ಲಿ ನಾನಾ ತರಹ ಚಟುವಟಿಗಗಳನ್ನು ಹಾಕಿಕೊಂಡಿದೆ. ಈಗ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂನಲ್ಲಿ ಬರತಕ್ಕಂತಾದ್ದು ಏನಿದೆ. ಅದರಿಂದ ಕುಷ್ಟರೋಗಗಳನ್ನು ನಿವಾರಣೆ ಮಾಡುವ ಕಾರ್ಯಕ್ರಮ ಇದೆ. ಅದರಲ್ಲಿ ತಿಂಗಳಿಗೆ ಇಷ್ಟು ನಿಗದಿತ ರೋಗಿಗಳನ್ನು ಗುರುತಿಸಿ, ಶುಶ್ರೂಷೆ ಕೊಡತಕ್ಕಂಥ ಕಾರ್ಯ ಇದೆ. ನಾವು ೨೦ ಅಂಶಗಳ ಸಭೆಯಲ್ಲಿ ಇದನ್ನು ಪರಿಶೀಲಿಸಿದಾಗ, ಈ ಒಂದು ಕಾರ್ಯಕ್ರಮವನ್ನು ನಿರ್ವಹಿಸದೇ ಇರತಕ್ಕ ಕೆಲವು ಇಲಾಖಾ ಅಧಿಕಾರಿಗಳನ್ನು ನೋಡಿದ್ದೇವೆ, ಇದು ಬಹುತೇಕ ರಾಷ್ಟ್ರೀಯ ವ್ಯಾಪ್ತಿಯ ಕಾರ್ಯಕ್ರಮ ಈ ವಿಚಾರದಲ್ಲಿ, ಇದು ಇನ್ನೂ ಅಗೋಚರವಾಗಿದೆ. ಇದನ್ನು ಪತ್ತೆ ಹಚ್ಚಿ ನಿಲ್ಲಿಸಬೇಕೆಂದೂ, ಇರತಕ್ಕಂಥ ಕಾರ್ಯಕ್ರಮವನ್ನು ಅಷ್ಟು ಸುಲಭವಾಗಿ ಕೈಬಿಡುವುದು ಸರಿಯಲ್ಲವೆಂದು ಹೇಳಬಯಸುತ್ತೇನೆ.

ಇನ್ನು ಕಾಲರಾ, ಚಿಕನ್‌ಪಾಕ್ಸ್, ಗ್ಯಾಸ್ಟ್ರೋಎಂಟ್ರೈಟೀಸ್ ಖಾಯಿಲೆಗಳು ೮ ಜಿಲ್ಲೆಗಳಲ್ಲಿ ಇವೆ ಎನ್ನುವುದನ್ನು ಪತ್ತೆ ಹಚ್ಚಿದ್ದಾರೆ. ಇದರಲ್ಲಿ ಕಾಲರಾ ಇದ್ದಕ್ಕಿದ್ದಹಾಗೆ ಭುಗಿಲೆದ್ದು, ಎಲ್ಲರನ್ನೂ ಆಹುತಿ ತೆಗೆದುಕೊಳ್ಳತಕ್ಕ ಭಯಂಕರ ರೋಗ ಎನ್ನುವುದನ್ನು ಎಲ್ಲರೂ ಮನಗಂಡಿದ್ದೇವೆ. ಈ ಖಾಯಿಲೆ ಚಿತ್ರದುರ್ಗ ಜಿಲ್ಲೆಯಲ್ಲಿ ವರ್ಷಂಪ್ರತಿ ಕಾಣಿಸಿಕೊಂಡಂಥ ದೊಡ್ಡ ಪಿಡುಗು. ಇದು ಕಾಣಿಸಿಕೊಂಡ ನಂತರ, ಇದು ನಿವಾರಣೆಗೆ ಬೇಕಾದ ಔಷಧಿಯನ್ನು ಬೆಂಗಳೂರಿಗೆ ಕಳಿಸಿ ತರುವಂಥ ಪ್ರಯತ್ನ ಮಾಡುತ್ತಾರೆ. ಇದರಿಂದ ರೋಗಿಗಳಿಗೆ ಅನಾನುಕೂಲವಾಗುತ್ತದೆ. ಖಾಯಿಲೆಗಳು ಇರುವಂಥ ಜಿಲ್ಲೆಯಲ್ಲಿ ಬೇಕಾದ ಔಷಧಿಗಳನ್ನು ಇಟ್ಟುಕೊಂಡರೆ, ಬರತಕ್ಕ ಜನಗಳ ಆರೋಗ್ಯವನ್ನು ಕಾಪಾಡುವುದಕ್ಕೆ ಸಾಧ್ಯವಾಗುತ್ತದೆ ಆದುದರಿಂದ ಈ ಖಾಯಿಲೆಯನ್ನು ಗುರುತಿಸಿರುವಂಥ ಜಿಲ್ಲೆಗಳಲ್ಲಿ ಯಾವಾಗಲೂ ಔಷಧಿಯನ್ನು ಸಿದ್ಧಮಾಡಿ ಇಟ್ಟುಕೊಂಡಿರಬೇಕೆಂದು ಹೇಳಬಯಸುತ್ತೇನೆ. ತದನಂತರ, ಮಲೇರಿಯಾ ರೋಗದ ನಿಯಂತ್ರಣವೂ ಸಹ ನಾವು ನಿರೀಕ್ಷಿಸಿದ ಮಟ್ಟವನ್ನು ಮುಟ್ಟಿಲ್ಲ. ಇದು ದೊಡ್ಡ ಆಂದೋಳನದ ರೀತಿಯಲ್ಲಿ, ಈ ಕಾರ್ಯಕ್ರಮ ನಡೆಯಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ಆಸ್ಪತ್ರೆಗಳ ಕಾರ್ಯವೈಖರಿಯನ್ನು ನೋಡಿದರೆ ಬಹಳ ಬೇಸರವಾಗುತ್ತದೆ, ಕಾರಣ ಇಷ್ಟೆ. ವೈದ್ಯರು ಮನುಷ್ಯನ ಜೀವದಾನ ಮಾಡತಕ್ಕಂಥ ಪರಮೋಚ್ಚ ಹುದ್ದೆಯನ್ನು ಅವಲಂಬಿಸಿಕೊಂಡಿರತಕ್ಕವರು. ಬಡ ಜನರಿಂದ ಏನು ನಿರೀಕ್ಷಣೆ ಮಾಡುತ್ತಾರೆ ಎಂಬುದು ತಿಳಿದಿದ್ದರೂ ಸಹ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ ಎಂಬುದನ್ನು ಹೇಳುತ್ತೇನೆ. ಉದಾಹರಣೆಗೆ ಒಂದು ಹೇಳುತ್ತೇನೆ. ಚಿತ್ರದುರ್ಗಾ ಜಿಲ್ಲಾ ಆಸ್ಪತ್ರೆಗೆ ಒಂದು ಸಾರಿ ಹೋಗಿದ್ದೆ. ಅಲ್ಲಿ ಇ. ಸಿ. ಜಿ. ಮಾಡಿಸಬೇಕಾಗಿತ್ತು. ಹಾಗೆ ರಿಕಾರ್ಡ್ ಮಾಡಿದ ನಂತರ ಆ ವರದಿಯನ್ನು ನಮಗೆ ಕೊಡಬೇಕಾದರೆ, ಅವರು ನೇರವಾಗಿ ನನ್ನನ್ನು ಕೇಳಿದರು. ಅವತ್ತು ನಾನೂ ಇನ್ನೂ ಸದಸ್ಯನಾಗಿರಲಿಲ್ಲ. ಏನಾದರೂ ಹಣ ಕೊಡಿ ಎಂದು ಕೇಳಿದರು. ನಾನು ಏಕೆ ಹಣ ಕೊಡಬೇಕೆಂದು ಕೇಳಿದೆ. ಅಂದರೆ ಇವತ್ತು ಯಾವುದೇ ನಿರೀಕ್ಷಣೆ ಇಲ್ಲದೆ ಫಲಾಪೇಕ್ಷೆ ಇಲ್ಲದೆ ಕೆಲಸ ಮಾಡತಕ್ಕಂಥ ಜನ ಬಹಳಷ್ಟು ಕಡಿಮೆ. ಆದರೆ ಕೆಲವರು ಒಳ್ಳೆಯ ಮನೋಭಾವನೆಯನ್ನು ಇಟ್ಟುಕೊಂಡಿದ್ದಾರೆ. ಆದ್ದರಿಂದ ಇದರ ಬಗ್ಗೆ ಕೇವಲ ಅಧಿಕಾರ ಅಂಕುಶದಿಂದಲೇ ಕರ್ತವ್ಯ ಮಾಡುತ್ತೇವೆಂದು ಹೇಳುವುದಕ್ಕಿಂತ, ಅವರ ವಿದ್ಯಾಭ್ಯಾಸದಲ್ಲಿ, ಇದು ಅವರ ಆದ್ಯ ಕರ್ತವ್ಯ ಇದನ್ನು ಮಾಡಲೇಬೇಕೆಂಬ ತಿಳುವಳಿಕೆಯನ್ನು ಕೊಡಬೇಕು. ಅಲ್ಲದೇ ವೈದ್ಯರು ಕೆಲವೇ ಸ್ಥಳಗಳಲ್ಲಿ ಸೇವೆ ಮಾಡಬೇಕೆಂಬ ಪರಿಪಾಠ ಇಟ್ಟುಕೊಂಡಿದ್ದಾರೆ. ಆದುದರಿಂದ ಇದನ್ನು ತಪ್ಪಿಸಿ, ಹಳ್ಳಿಗಾಡುಗಳಲ್ಲೂ ಇವರು ಸೇವೆ ಮಾಡಬೇಕೆಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರನ್ನು ನೇಮಿಸಿದರೆ, ನೇಮಿಸಿದ ಒಂದು ವಾರದಲ್ಲೇ ಬದಲಾವಣೆ ಮಾಡತಕ್ಕಂತಾದ್ದು ಇದೆ ಆದುದರಿಂದ ಇದನ್ನು ತಪ್ಪಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಅವರ ಸೇವೆ ಬೇಕು, ಅಲ್ಲಿ ಅವರ ಕೊರತೆ ಇದೆ, ಎಂಬುದನ್ನು ಮನಗಂಡು, ಗ್ರಾಮೀಣ ಜನತೆಗೆ ಅವರ ಸೇವೆಯನ್ನು ಒದಗಿಸಿಕೊಟ್ಟು, ಅನುಕೂಲ ಮಾಡಬೇಕು.

ತದನಂತರ ಈವೊತ್ತು ಕೆಲವು ಪಿ. ಹೆಚ್. ಸಿ. ಗಳನ್ನು ಜನರಲ್ ಹಾಸ್ಪಿಟಲ್‌ಗಳನ್ನಾಗಿ ಮಾಡಿರುವುದನ್ನು ನೋಡಿದರೆ ಅಲ್ಲಿ ಏನು ಏನೇನು ತೊಂದರೆಗಳು ಇವೆ ಅನ್ನುವುದು ಗೊತ್ತಾಗುತ್ತದೆ. ಇವರು ೫-೬ ತಾಲ್ಲೂಕುಗಳಲ್ಲಿ ಈರೀತಿ ಮಾಡಿದ್ದಾರೆ. ನಾವು ಹಿರಿಯೂರಿನಲ್ಲಿ ಒಂದು ಜನರಲ್ ಹಾಸ್ಪಿಟಲ್ ಮಾಡಬೇಕು ಎಂದು ಬಹಳ ವರ್ಷಗಳಿಂದಲೂ ಕೂಡ ಒತ್ತಾಯ ಮಾಡುತ್ತಾ ಬಂದಿದ್ದೇವೆ. ಇದು ಪತ್ರಿಕೆಗಳಲ್ಲೂ ಕೂಡ ಬಂದಿದೆ. ಆದರೂ ಸಹ ಇದುವರೆವಿಗೂ ಅದು ಇನ್ನೂ ಆಗಿಲ್ಲ. ಆದುದರಿಂದ ನಾನು ಈ ಸಂದರ್ಭದಲ್ಲಿ ೪೮ ಬೆಡ್‌ಗಳು ಇರತಕ್ಕಂಥಾ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಜೊತೆಗೆ ಅಲ್ಲಿ ವಿವಿಧ ಡಾಕ್ಟರ್ಸ್‌ಗಳನ್ನು ನೇಮಿಸಬೇಕು. ಈ ತಾಲ್ಲೂಕಿನ ಪ್ರಜಾ ಸಂಖ್ಯೆ ೨ ಲಕ್ಷಕ್ಕೂ ಮೀರಿದೆ. ಆದುದರಿಂದ ಆ ಆಸ್ಪತ್ರೆಯನ್ನು ಜನರಲ್ ಹಾಸ್ಪಿಟಲ್ ಆಗಿ ಪರಿವರ್ತನೆ ಮಾಡಿದರೆ ತುಂಬಾ ಉಪಯುಕ್ತವಾಗುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ತದನಂತರ ಇನ್ನೊಂದು ವಿಷಯ ಹೇಳುವುದಾದರೆ ಈಗ ಮಲೆನಾಡಿನಲ್ಲಿ, ಕೋಲಾರದಲ್ಲಿ ಮತ್ತು ಬೆಂಗಳೂರು ಸುತ್ತಮುತ್ತ ಮಂಗನ ಕಾಯಿಲೆ ಹಾಗೂ ಮೆದುಳು ಜ್ವರ ಇಂಥಾ ಭಯಾನಕ ರೋಗಗಳು ಬಂದು ಅನೇಕರನ್ನು ಬಲಿ ತೆಗೆದುಕೊಂಡಿದ್ದನ್ನು ನಾವು ನೋಡಿದ್ದೇವೆ. ಇದಕ್ಕೆ ಇನ್ನೂ ಸರಿಯಾದ ಔಷಧಿಯನ್ನು ಕಂಡುಹಿಡಿದಿಲ್ಲ ಹಾಗೂ ಸರಿಯಾಗಿ ನಿಯಂತ್ರಣ ಮಾಡಿಲ್ಲ. ನಿಯಂತ್ರಣ ಮಾಡುವುದರಲ್ಲಿ ಸರಿಯಾದ ಔಷಧಿಯನ್ನು ಬಿಡುಗಡೆ ಮಾಡದೇ ಇರುವುದು ಈ ಆಧುನಿಕ ಯುಗದಲ್ಲಿ ತುಂಬಾ ಶೋಚನೀಯವಾದ ಪರಿಸ್ಥಿತಿ ಎಂದು ನಾನಾದರೂ ಭಾವಿಸುತ್ತೇನೆ.

ತದನಂತರ ಇನ್ನೊಂದು ವಿಷಯ ಹೇಳುತ್ತೇನೆ. ಅದೇನೆಂದರೆ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕಂಥಾ ನೌಕರರು ಏನು ಇದ್ದಾರೆ ಅವರ ಹತ್ತಿರ ಸಾರ್ವಜನಿಕರು ಬಂದರೆ, ಅವರು ಅರ್ಜಿಗಳನ್ನು ತಂದುಕೊಟ್ಟರೆ ಆ ಜನಗಳನ್ನು ಸಮಾಧಾನದಿಂದ ವಿಚಾರಿಸಿಕೊಂಡು ಅವರ ಹೇಳಿಕೆಗಳನ್ನು ಮನವರಿಕೆ ಮಾಡಿಕೊಂಡು ಸೂಕ್ತವಾದ ಉತ್ತರವನ್ನು ಕೊಡುವಂತೆ. ಕೆಲಸ ಮಾಡಬೇಕು. ಈಗ ೧೪-೧೫ ಸಾವಿರ ಜನಕ್ಕೆ ಒಬ್ಬ ಎ.ಎಂ.ಒ. ಕೊಡುತ್ತಾರೆ ಅವರು ಮಾಡತಕ್ಕಂಥಾ ಕೆಲಸ, ಅದರ ವೈಶಿಷ್ಟ್ಯತೆಯನ್ನು ನೋಡಿದರೆ ಅವರು ಜನರ ಹತ್ತಿರ ಯಾವರೀತಿಯಾಗಿ ನಡೆದುಕೊಳ್ಳುತ್ತಾರೆನ್ನುವುದನ್ನು ನೋಡಿದರೆ ನಾನು ಹೆಚ್ಚಿಗೆ ಹೇಳಬೇಕಾದ್ದು ಏನೂ ಇಲ್ಲ. ಬಹಳ ಕಳಪೆ ಕೆಲಸ ಮಾಡುತ್ತಾರೆ. ಸರ್ಕಾರ ಅವರಿಗೆ ಯಾವ ರೀತಿಯಾಗಿ ತಿಳುವಳಿಕೆ ಕೊಡಬೇಕೋ ಆ ರೀತಿಯಾಗಿ ಅವರಿಗೆ ತಿಳುವಳಿಕೆ ಕೊಡಬೇಕು. ಅಂಥಾವರ ಮೇಲೆ ಸರಿಯಾಗಿ ಕ್ರಮ ತೆಗೆದುಕೊಳ್ಳದೇ ಹೋದರೆ ಇವರಿಗೆ ಶಕ್ತಿ ಇಲ್ಲ ಎಂದು ತಿಳಿದುಕೊಳ್ಳುತ್ತಾರೆ. ಆದುದರಿಂದ ಕೆಲವು ಸಂದರ್ಭದಲ್ಲಿ ಯಾರು ಕಳಪೆ ಕೆಲಸ ಮಾಡುತ್ತಾರೋ ಅಂಥಾವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ತದನಂತರ ಈವೊತ್ತು ಸರ್ಕಾರದ ಎಲ್ಲ ಕಾರ್ಯಕ್ರಮಗಳೂ ಕೂಡ ಬಹಳ ಕುಂಠಿತವಾಗುತ್ತಾ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಈವೊತ್ತಿನ ದಿವಸ ಬೃಹದಾಕಾರವಾಗಿ ಬೆಳೆಯುತಕ್ಕಂಥಾ ಜನಸಂಖ್ಯೆಯನ್ನು ನಿಯಂತ್ರಣ ಮಾಡದೇ ಹೋದರೆ ೨೦೦೦ ಎ.ಡಿ ಹೊತ್ತಿಗೆ, ಈಗ ಈ ಜನಸಂಖ್ಯೆಯ ನಿಯಂತ್ರಣಕ್ಕೆ ಒಂದು ಕೋಟಿ ರೂಪಾಯಿ ಆಗುವ ಬದಲು ೩ ಕೋಟಿ ರೂಪಾಯಿ ಖರ್ಚು ಮಾಡಿದರೂ ಕೂಡ ಸಾಕಾಗದೆ ಕೊನೆಗೆ ಈ ಒಂದು ಜನಸಂಖ್ಯೆ ಸ್ಫೋಟಗೊಳ್ಳುವಂತಾಗುವ ಹಾಗೆ ಕಾಣುತ್ತದೆ. ಇದನ್ನು ತಪ್ಪಿಸಬೇಕಾದರೆ ಈವಾಗಿನಿಂದಲೇ ಜನರಿಗೆ ಸರಿಯಾಗಿ ತಿಳುವಳಿಕೆ ಕೊಡುವುದರ ಬಗ್ಗೆ ಗಮನ ಕೊಡಬೇಕು ಜೊತೆಗೆ ಅವರಿಗೆ ಕೆಲವು ಸವಲತ್ತುಗಳನ್ನು ಒದಗಿಸಿಕೊಡಬೇಕಾಗಿದೆ. ಈವೊತ್ತು ಸರ್ಕಾರದವರು ಕೆಲವು ಉಚಿತ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದರೂ ಸಹ, ಸ್ವಲ್ಪ ಧನ ಸಹಾಯ ಮಾಡುತ್ತೇನೆಂದು ಹೇಳಿದ್ದರೂ ಸಹ ಅದನ್ನು ಕಾರ್ಯರೂಪಕ್ಕೆ ತರುವಾಗ ಯಾರು ನಿಜವಾಗಿ ಈ ಚಿಕಿತ್ಸೆಗೆ ಒಳಪಡುತ್ತಾರೋ ಅವರಿಗೆ ಸರಿಯಾಗಿ ಕೊಡುತ್ತಾ ಇಲ್ಲ ಎಂದು ಹೇಳುತ್ತೇನೆ. ಕೆಲವರು ರಾಜಕಾರಣದ ಒತ್ತಾಯಕ್ಕೆ ಮಣಿದು ಕೊಡುತ್ತಿದ್ದಾರೆ ಇದು ನಿಲ್ಲಬೇಕು. ಈ ಚಿಕಿತ್ಸೆಗೆ ಸರ್ಕಾರದವರು ಏನು ಸೌಲಭ್ಯಗಳನ್ನು ಕೊಡುತ್ತಾರೋ, ಅದರಲ್ಲಿ ಮೊದಲು ಶಸ್ತ್ರ ಚಿಕಿತ್ಸೆಗೆ ಆದ್ಯತೆ ಕೊಡಬೇಕು. ಸರ್ಕಾರದ ನೌಕರರಿಗೆ ಇಷ್ಟು ಮಕ್ಕಳು ಇದ್ದರೆ ಒಂದು ಇಂಕ್ರೀಮೆಂಟ್ ಕೊಡುತ್ತೇವೆಂದು ಏನು ಮಾಡಿದ್ದೀರಿ ಅದೇ ರೀತಿಯಾಗಿ ಸಾರ್ವಜನಿಕರಿಗೂ ಕೂಡ ಈ ಶಸ್ತ್ರ ಚಿಕಿತ್ಸೆಗೆ ಒಳಪಡುವವರಿಗೆ ತಿಂಗಳಿಗೆ ಮಾಸಾಶನ ೧೦೦ ರೂಪಾಯಿ ಕೊಡುವ ಹಾಗೆ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಈವೊತ್ತು ಕೇವಲ ೧೫೦ ರೂಪಾಯಿ ಮಾತ್ರ ಅವರಿಗೆ ಇಂತಿಷ್ಟು ದಿವಸದವರೆಗೆಂದು ಏನು ಕೊಡುತ್ತೀರೋ ಅದರ ಬದಲು ಅವರು ಸ್ವಯಂಪ್ರೇರಿತರಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವವರಿಗೆ ಮಾಸಾಶನ ೧೦೦ ರೂಪಾಯಿ ಕೊಟ್ಟರೆ ತಪ್ಪೇನೂ ಆಗುವುದಿಲ್ಲ. ಹಾಗೆ ನೀವು ಮಾಡದೇ ಹೋದರೆ ೨೦೦೦ ಎ. ಡಿ. ತನಕ ಈ ಜನಸಂಖ್ಯೆ ಬೃಹದಾಕಾರವಾಗಿ ಬೆಳೆಯುತ್ತದೆ. ಅನಂತರ ಸಮಸ್ಯೆಗಳೂ ಕೂಡ ಬಹಳ ಹೆಚ್ಚಾಗುತ್ತದೆ. ಆದುದರಿಂದ ಈಗಲೇ ಇದರ ಬಗ್ಗೆ ಇದು ರಾಷ್ಟ್ರದ ಸಮಸ್ಯೆ ಎಂದು ಇದನ್ನು ಏಕದೃಷ್ಟಿ ಕೋನದಿಂದ ನೋಡುವ ಹಾಗೆ ತಾವು ಕಾರ್ಯಕ್ರಮ ತೆಗೆದುಕೊಳ್ಳಬೇಕು. ಈ ಶಸ್ತ್ರ ಚಿಕಿತ್ಸೆಯಲ್ಲಿ ಕೆಲವರು ಧರ್ಮದ ಹೆಸರಿಗೆ ಒಳಗಾಗಿದ್ದಾರೆ. ರಾಷ್ಟ್ರದ ಒಂದು ದೃಷ್ಟಿಯಿಂದ ಇದನ್ನು ಸಮಗ್ರ ದೃಷ್ಟಿಕೋನದಿಂದ ನೋಡಿ ಎಲ್ಲರೂ ಸಹ ಶಸ್ತ್ರ ಚಿಕಿತ್ಸೆ ಒಳಪಡುವ ಹಾಗೆ ಮಾಡುವ ಹಾಗೆ ತಾವು ಕಾರ್ಯಕ್ರಮ ರೂಪಿಸಿಕೊಳ್ಳಬೇಕು. ಇದು ಧರ್ಮಬಾಹಿರ ಎಂದು ತಾವು ಎತ್ತಿ ಹಿಡಿಯಬೇಕು ಎಂದು ನಾನು ಹೇಳಬಯಸುತ್ತೇನೆ.

ಇನ್ನು ನಾನು ನಗರಾಭಿವೃದ್ಧಿ ಮತ್ತು ವಸತಿಗೆ ಸಂಬಂಧಪಟ್ಟ ಹಾಗೆ ಕೆಲವು ವಿಷಯಗಳನ್ನು ಹೇಳಬಯಸುತ್ತೇನೆ. ಈ ನಗರಾಭಿವೃದ್ಧಿ ಬಗ್ಗೆ ಹೇಳಬೇಕಾದರೆ ಬಹುತೇಕವಾಗಿ ಬೆಂಗಳೂರನ್ನು ಕೇಂದ್ರವನ್ನಾಗಿಟ್ಟುಕೊಂಡು ಬಹುತೇಕ ಕಾರ್ಯಕ್ರಮಗಳನ್ನೂ ಹಾಗೂ ಸೌಲಭ್ಯಗಳನ್ನೂ ಇಲ್ಲೇ ಮಾಡುತ್ತಿದ್ದೀರಿ. ರಾಜ್ಯಾದ್ಯಂತ ಈ ವಸತಿ ಸಮಸ್ಯೆ ಹೆಚ್ಚಾಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ನಮ್ಮ ರಾಜ್ಯದಲ್ಲಿ ೨೪೮ ಸಣ್ಣಪುಟ್ಟ ಪಟ್ಟಣಗಳು ಇವೆ. ಅವೆಲ್ಲಾ ಸೇರಿ ಏಕ ರೀತಿಯ ಕಾನೂನು ಬರುವ ಹಾಗೆ ಮಾಡಬೇಕು. ತಾವು ಹೇಳಬಹುದು ಬೆಂಗಳೂರಿಗೆ ಸಾಕಾದಷ್ಟು ಸೌಲಭ್ಯಗಳು ಒದಗಿಸದೇ ಹೋದರೆ ಅನಿವಾರ್ಯವಾಗಿ ಕೊಳಚೆ ಪ್ರದೇಶ ಹೆಚ್ಚಾಗುತ್ತದೆ ಎಂದು. ಅಲ್ಲದೆ ಈ ಕೊಳಚೆ ಪ್ರದೇಶದ ಯೋಜನೆಗೆ ಹಣವನ್ನು ಖರ್ಚು ಮಾಡುವುದಕ್ಕೆ ಎರಡು ರೀತಿಯಾದ ಕಾರ್ಯಕ್ರಮಗಳನ್ನು ಹಾಕಿದ್ದಾರೆ. (೧) ಬೆಳಕು ಮತ್ತು ನೀರು ಕೊಡುವುದಕ್ಕೆ. (೨) ಮನೆಗಳನ್ನು ಅವರಿಗೆ ಕಟ್ಟಿ ಕೊಡತಕ್ಕಂಥಾದ್ದು. ಈ ಎರಡೂ ಕಾರ್ಯಕ್ರಮಗಳನ್ನು ಹಾಕಿ ಕೊಟ್ಟಿದ್ದಾರೆ. ಅದೇ ರೀತಿಯಾಗಿ ಪಟ್ಟಣಗಳನ್ನೂ ವಿಕೇಂದ್ರೀಕರಣ ಮಾಡುವುದಕ್ಕೆ ಈಗ ಇರುವ ಕಾನೂನನ್ನು ಸ್ವಲ್ಪ ಬದಲಾವಣೆ ಮಾಡಿ ಜಾರಿಗೆ ತಂದರೆ ಒಳ್ಳೆಯದು. ಏತಕ್ಕೆಂದರೆ ಈಗ ನೀವು ಇದಕ್ಕೆ ಒಂದು ಪಟ್ಟು ಖರ್ಚು ಮಾಡುವುದಾದರೆ ಮುಂದೆ ನಗರ ಬೃಹತ್ ಜನ ಸಂಖ್ಯೆಯಾಗಿ ಬೆಳೆದರೆ ಆವಾಗ ಇದರ ಮೂರು-ನಾಲ್ಕು ಪಟ್ಟು ಖರ್ಚು ಮಾಡಬೇಕಾಗುತ್ತದೆ. ಆವಾಗ ಜನ ಸಂಖ್ಯೆಯನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎನ್ನತಕ್ಕಂಥಾ ಮಾತನ್ನು ಹೇಳಬಯಸುತ್ತೇನೆ.

ತದನಂತರ ಮುನಿಸಿಪಾಲಿಟಿಗಳಲ್ಲಿ ಬರತಕ್ಕಂಥಾ ಆದಾಯವನ್ನು ರದ್ದು ಮಾಡಿರುವುದರಿಂದ ಅನೇಕ ಮುನಿಸಿಪಾಲಿಟಿಗಳು ಆರ್ಥಿಕ ಪರಿಸ್ಥಿತಿಗೆ ಒಳಗಾಗಿವೆ. ಇದನ್ನು ಹೋಗಲಾಡಿಸುವುದಕ್ಕೆ ಸರ್ಕಾರದವರು ಅವರು ನಿರೀಕ್ಷಿಸಿದಷ್ಟು ಗ್ರಾಂಟ್‌ನ್ನು ಕೊಡುತ್ತಾ ಇಲ್ಲ. ಅಲ್ಪಸ್ವಲ್ಪ ಗ್ರಾಂಟ್ ಕೊಡುತ್ತಾರೆ. ಈವೊತ್ತು ಎಷ್ಟೋ ಮುನಿಸಿಪಾಲಿಟಿಗಳು ಪಂಚಾಯತ್‌ನ ಒಂದು ಕೆಳಮಟ್ಟದಲ್ಲಿ ಕೆಲಸ ಮಾಡುವ ಪರಿಸ್ಥಿತಿಗೆ ಬಂದಿದೆ. ಅದರ ಬಗ್ಗೆ ತಾವು ನಿಗಾ ಕೊಡಬೇಕು. ನಂತರ ಯಾವ್ಯಾವ ಮುನಿಸಿಪಾಲಿಟಿಗಳಿಗೆ ಗ್ರಾಂಟ್ ಕೊಡುವುದು ನಿಂತು ಹೋಗಿದೆ ಅವಕ್ಕೆ ಗ್ರಾಂಟನ್ನು ಕೊಡಬೇಕು ಎಂದು ಹೇಳುತ್ತೇನೆ.

ತದನಂತರ ಇನ್ನು ೨೦ ಸಾವಿರ ಜನಸಂಖ್ಯೆ ಕಡಿಮೆ ಇರತಕ್ಕಂಥಾದ್ದನ್ನು ಮಂಡಲ್ ಪಂಚಾಯತ್ ಕೇಂದ್ರಗಳನ್ನಾಗಿ ಮಾಡುತ್ತೇವೆಂದು ಹೇಳಿದ್ದಾರೆ. ಇದರಿಂದ ಅನೇಕ ಮುನಿಸಿಪಾಲಿಟಿಗಳು ಮಂಡಲ್ ಪಂಚಾಯತ್ ಕೇಂದ್ರವಾಗುತ್ತದೆ. ಹಾಗೆ ಮಾಡುವಾಗ ಅಲ್ಲಿಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಮತ್ತು ಅಲ್ಲಿನ ಒಂದು ಆದಾಯದ ಬಗ್ಗೆ ತಾವು ಗಮನಹರಿಸಬೇಕಾಗುತ್ತದೆ ಎಂದು ಹೇಳುತ್ತೇನೆ.

ತದನಂತರ ಪಟ್ಟಣಗಳ ಪುರೋಭಿವೃದ್ಧಿಗಾಗಿ ಬಿ. ಡಿ. ಎ. ರೀತಿ ಒಂದು ಅಥಾರಿಟಿಯ ವ್ಯವಸ್ಥೆಯನ್ನು ಮಾಡಿದ್ದೀರಿ. ಅವರು ಅದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಾರೆ. ಅದೇ ರೀತಿಯಾಗಿ ಗ್ರಾಮಾಂತರ ಪ್ರದೇಶಗಳಲ್ಲೂ ನಿವೇಶನ ರಹಿತರಾದವರಿಗೆ ನಿವೇಶನಗಳನ್ನು ಕೊಡುವುದಕ್ಕೆ ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಯಾರಿಗೆ ೨ ಸಾವಿರ ರೂಪಾಯಿಗಿಂತ ಕಡಿಮೆ ಆದಾಯ ಬರುತ್ತದೋ ಅವರಿಗೆ ಪುಕ್ಕಟೆಯಾಗಿ ಸೈಟನ್ನು ಕೊಡುವ ಹಾಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಅದೇ ರೀತಿಯಾಗಿ ೧೪೦೦ ರೂಪಾಯಿಗಿಂತ ಆದಾಯ ಕಡಿಮೆ ಬರುವವರಿಗೆ ಆ ಮುನಿಸಿಪಾಲಿಟಿಗಳು ಧನ ಸಹಾಯ ಮಾಡುವ ಹಾಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಅವರವರ ಶಕ್ತ್ಯಾನುಸಾರವಾಗಿ ೨೫ ರಷ್ಟು, ೫೦ ರಷ್ಟು, ೭೫ ರಷ್ಟು ಧನ ಸಹಾಯ ಮಾಡುವ ಹಾಗೆ

ಮಾಡಬೇಕು ಈವೊತ್ತಿನ ದಿವಸ ಬೆಂಗಳೂರಿನಲ್ಲಿರತಕ್ಕ ೩೦ ಲಕ್ಷ ಜನ ಸಂಖ್ಯೆಗೆ ನೀವು ಕೊಟ್ಟಿರತಕ್ಕಂಥ ನಿವೇಶನಗಳು ೭೧ ಸಾವಿರ ಜನಕ್ಕೆ ಕೊಟ್ಟಿದ್ದೀರಿ. ಇಲ್ಲಿರುವ ಜನಸಂಖ್ಯೆಯ ಗಾತ್ರಕ್ಕೆ ಇದು ಸರಿಸಮಾನವಲ್ಲ. ಅನೇಕ ಜನರನ್ನು ಕೈಬಿಟ್ಟಿದ್ದಾರೆ, ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು ಕಲ್ಯಾಣ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ ತಾವು ಬಡಜನರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ವಹಿಸಬೇಕು ಎಂದು ಹೇಳುತ್ತೇನೆ.

ತದನಂತರ ಈವೊತ್ತು ಗ್ರಾಮಾಂತರ ಪ್ರದೇಶದಲ್ಲಿ ಈ ನಿವೇಶನಗಳನ್ನು ಕೊಡುವುದರ ಬಗ್ಗೆ ಹಾಕಿಕೊಂಡಿರತಕ್ಕಂಥಾ ಟಾರ್ಗೆಟ್ ಮೂರನೇ ಒಂದು ಭಾಗ ಮಾಡಿದ್ದೀರಿ. ಇದು ಈ ವರ್ಷ ಎಷ್ಟು ಜನರಿಗೆ ಮುಟ್ಟಿದೆಯೋ ? ಇದನ್ನು ಪ್ರತಿ ವರ್ಷವೂ ಹೆಚ್ಚು ಮಾಡಬೇಕು ಇಲ್ಲದೇ ಹೋದರೆ ಇದು ಅರ್ಥಶೂನ್ಯವಾಗುತ್ತದೆ. ಈಗಲೇ ಇದರ ಬಗ್ಗೆ ಒಂದು ಯೋಜನೆ ಹಾಕಿಕೊಂಡು ಇದರ ಗುರಿಯನ್ನು ಸಾಧನೇ ಮಾಡದೇ ಹೋದರೆ ಮುಂದೆ ಇದರ ಗಾತ್ರ ಹೆಚ್ಚಾಗಿ ಅದರ ಪರಿಣಾಮವನ್ನು ಎದುರಿಸ ಬೇಕಾಗುವ ಸಂದರ್ಭ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ತದನಂತರ ಮುನಿಸಿಪಾಲಿಟಿಗಳ ವ್ಯಾಪ್ತಿಯಲ್ಲಿ ಬರುವ "ಭಾಗ್ಯ ಮಂದಿರ" ಯೋಜನೆ ಏನು ಇದೆ ಇದರ ಬಗ್ಗೆ ಹೇಳಬೇಕಾದರೆ ಸರ್ಕಾರದವರು ಕಟ್ಟತಕ್ಕಂಥಾ ಮನೆಗಳನ್ನು ಅವರಿಗೆ ಏನು ಕೊಡುತ್ತಾರೋ, ಆ ಮನೆಗಳನ್ನು ಅವರು ತೆಗೆದುಕೊಳ್ಳುವುದಕ್ಕೆ ಬ್ಯಾಂಕ್ ಅಸಿಸ್ಟೆನ್ಸ್ ಕೊಡತಕ್ಕಂಥಾ ಸೌಲಭ್ಯಗಳನ್ನು ಹೆಚ್ಚು ಮಾಡುವ ಹಾಗೆ ತಕ್ಕ ಅನುಕೂಲಗಳನ್ನು ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇನ್ನು ಬಡವರಿಗೆ ತಮ್ಮದೇ ಆದಂಥಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಧನ ಸಹಾಯವನ್ನು ನೀಡುವ ಹಾಗೆ ಅವಕಾಶ ಕಲ್ಪಿಸಿಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ.

(MR. SPEAKER IN THE CHAIR)

ತದನಂತರ ಕುಡಿಯುವ ನೀರಿನ ಬಗ್ಗೆ ಹೇಳಬೇಕಾದರೆ ಮುಂದೆ ಎಲ್ಲ ಪಟ್ಟಣಗಳಲ್ಲೂ ಕೂಡ ಭೀಕರ ಬರಗಾಲ ಬರುವುದರಿಂದ ಇದರ ಬಗ್ಗೆ ಈಗಲೇ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ, ಈವೊತ್ತು ನನ್ನ ತಾಲ್ಲೂಕಿನ ಹಿರಿಯೂರ್‌ನಗರದ ಬಗ್ಗೆ ಹೇಳಬೇಕಾದರೆ ಅಲ್ಲಿ ೩೦ ಸಾವಿರ ಜನಸಂಖ್ಯೆ ಅಲ್ಲಿಗೆ ೫ ಲಕ್ಷ ಗ್ಯಾಲನ್ ನೀರು ಬೇಕಾಗುತ್ತದೆ. ಈವೊತ್ತು ಅಲ್ಲಿ ೫೦ ಸಾವಿರ ಗ್ಯಾಲನ್ ನೀರು ಮಾತ್ರ ಪೂರೈಕೆಯಾಗುತ್ತದೆ. ಇನ್ನು ೪½ ಲಕ್ಷ ಗ್ಯಾಲನ್ ನೀರು ಕಡಿಮೆ ಇದೆ. ಆದುದರಿಂದ ಆ ಜನರ ಕುಡಿಯುವ ನೀರಿನ ಕಷ್ಟವನ್ನು ಬಗೆಹರಿಸುವುದಕ್ಕೆ ಈವಾಗಲೇ ಒಂದು ಯೋಚನೆ ಮಾಡಬೇಕು ಎಂದು ಹೇಳುತ್ತೇನೆ. ಆದುದರಿಂದ ಜನ ಸಂಖ್ಯೆಯ ಆಧಾರಕ್ಕನುಗುಣವಾಗಿ ಪೂರ್ವಭಾವಿ ಯೋಜನೆಗಳನ್ನು ಸಿದ್ಧಮಾಡಿಕೊಂಡು ಜನರ ಸಮಸ್ಯೆಗಳನ್ನು ಕಡಿಮೆ ಮಾಡುವ ಕಡೆ ಹೆಚ್ಚಿನ ಗಮನ ಕೊಡಬೇಕು ಎಂಬ ಮಾತನ್ನು ಹೇಳುತ್ತಾ ಈ ಎರಡು ಬೇಡಿಕೆಗಳ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

೪–೩೦ ಪಿ. ಎಂ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).-- ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಮಂಡನೆ ಮಾಡಿರುವಂಥ ೨೯, ೩೦, ೩೨ ೩೩, ೩೬. ೩೭ ಈ ಎಲ್ಲಾ ಬೇಡಿಕೆಗಳ ಮೇಲೆ ಮಾತನಾಡು ವುದಕ್ಕೆ ಅವಕಾಶವಿಲ್ಲ. ಆದರೆ ವಿಶೇಷವಾಗಿ ವೈದ್ಯಕೀಯ ಮತ್ತು ನಗರಾಭಿವೃದ್ಧಿ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ವಿಧಾನಮಂಡಲದಲ್ಲಿರುವಂಥ ಅಧಿಕೃತ ವರದಿಗಾರರು ಬೇಡಿಕೆಗಳನ್ನು ಇಟ್ಟಿರುವುದು ತಮಗೆ ಗೊತ್ತಿದೆ. ಅದರ ಬಗ್ಗೆ ಮುಖ್ಯ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ ಒಂದು ವಾರದೊಳಗೆ ಬಗೆಹರಿಸುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಆದರೆ ಅದು ಇದುವರೆಗೆ ಕಾರ್ಯರೂಪಕ್ಕೆ ಬಂದಿಲ್ಲ, ಅವರ ಸಮಸ್ಯೆಗಳು ಬಗೆಹರಿದಿಲ್ಲ. ಆದುದರಿಂದ ಅವರು ಪ್ರಾಮಾಣಿಕವಾದಂಥ, ನ್ಯಾಯವಾದಂಥ ಬೇಡಿಕೆಗಳನ್ನು ಇಟ್ಟಂಥ ಸಂದರ್ಭದಲ್ಲಿ ತಾವು ಕೊಟ್ಟ ಆಶ್ವಾಸನೆಯಂತೆ ತಕ್ಷಣ ಅವರ ಬೇಡಿಕೆಯನ್ನು ಈಡೇರಿಸಿ, ಅವರ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ವಿನಂತಿ ಮಾಡುತ್ತೇನೆ.

ಇನ್ನು ವೈದ್ಯಕೀಯ ವಿಷಯಗಳ ಬಗ್ಗೆ ಒಂದೆರಡು ಮಾತನ್ನು ಹೇಳುವಂಥ ಪ್ರಯತ್ನ ಮಾಡು ತ್ತೇನೆ. ನಾನು ಅಂದುಕೊಂಡಿದ್ದೆ, ಆರೋಗ್ಯ ಮಂತ್ರಿಗಳಾದ ತಿಮ್ಮೇಗೌಡರು ಸ್ವತಃ ಡಾಕ್ಟರ್ ಇದ್ದಾರೆ, ಅವರಿಗೆ ವಿರೋಧಪಕ್ಷದಲ್ಲಿದ್ದು ಅನುಭವ ಇದೆ. ಅವರಿಗೆ ಸಮಸ್ಯೆಗಳು ಗೊತ್ತಿದೆ, ಇದರಲ್ಲಿರತಕ್ಕ ಸಮಸ್ಯೆಗಳನ್ನು ಬಗೆಹರಿಸುವಂಥ ಪ್ರಯತ್ನ ಮಾಡುತ್ತಾರೆ ಎಂದು ಅಂದುಕೊಂಡಿದ್ದೆ. ಇವತ್ತು ತಾಲ್ಲೂಕು ಕೇಂದ್ರಗಳಲ್ಲಿರತಕ್ಕ ಆಸ್ಪತ್ರೆಗಳನ್ನು ನಾವು ಹೋಗಿ ನೋಡಿದರೆ ನಮಗೆ ಕಾಣುವಂಥ ದೃಶ್ಯ ಏನೆಂದರೆ, ಒಳಗೆ ಹೋಗುವುದಕ್ಕೆ ಸಾರ್ವಜನಿಕರಿಗೆ ಒಂದು ಕರ್ಚೀಫ್ ಕೊಡುವಂಥ ವ್ಯವಸ್ಥೆ ಆಗಬೇಕು. ಮೂಗು ಮುಚ್ಚಿಕೊಂಡು ಒಳಗೆ ಹೋಗಿ ಕಣ್ಣು ಮುಚ್ಚಿಕೊಂಡು ಹೊರಗೆ ಬರಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿರುವಂಥ ಆಸ್ಪತ್ರೆಗಳಲ್ಲಿ ಸ್ವಚ್ಛತೆ ಮಾಡುವುದರ ಬಗ್ಗೆ, ರೋಗಿಗಳಿಗೆ ಬೆಡ್‌ಶೀಟ್‌ಗಳನ್ನು ಬದಲಾಯಿಸುವುದರ ಬಗ್ಗೆ, ನೀರಿನ ವ್ಯವಸ್ಥೆ ಮಾಡುವುದರ ಬಗ್ಗೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಇವತ್ತಿನ ದಿವಸ ಗ್ರಾಮಾಂತರ ಪ್ರದೇಶದಲ್ಲಿ ವಾಸಮಾಡುವಂಥ ಜನ ಯಾವ ಪಾಪ ಮಾಡಿದ್ದಾರೆ ಎಂದು ಕೇಳಬೇಕಾಗಿದೆ. ಆದುದರಿಂದ ಈ ಒಂದು ವ್ಯವಸ್ಥೆಯನ್ನು ಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಬೇಕಾಗಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತಾ ಇದ್ದೇನೆ. ನೇರವಾಗಿ ಹೇಳುವು ದಾದರೆ, ಗವರ್ನ್‌ಮೆಂಟ್ ಮೆಡಿಕಲ್ ಸ್ಟೋರ್ಸ್‌ಗೆ ತಾಲ್ಲೂಕು ಕೇಂದ್ರಗಳಿಂದ ಇಂತಹ ಔಷಧಿಗಳು ಬೇಕು ಎಂದು ಇಂಡೆಂಟ್ ಮಾಡಿ ಕಳಿಸಿದರೂ ಯಾವುದು ಬೇಕು ಎಂದು ಕೇಳಿರುತ್ತಾರೋ ಅದನ್ನು ಕಳಿಸುವುದಿಲ್ಲ, ಇರತಕ್ಕಂಥ ಓಲ್ಡ್ ಸ್ಟಾಕನ್ನು ಕಳಿಸಿಕೊಟ್ಟು ಅಲ್ಲೂ ಕೂಡ ಮೂಲೆಗೆ ಬಿದ್ದಿರುವಂತೆ ವ್ಯವಸ್ಥಿತವಾದಂಥ ಕುತಂತ್ರ ಮಾಡುತ್ತಾ ಇದ್ದಾರೆ, ಆದುದರಿಂದ ಇದನ್ನು ಸರಿಮಾಡುವಂಥ ಪ್ರಾಮಾಣಿಕ ಪ್ರಯತ್ನ ಮಾಡುತ್ತೀರಿ ಎಂದು ತಿಳಿದಿದ್ದೇನೆ. ಇಲ್ಲಿ ನಡೆಯುತ್ತಿರುವಂಥ ಅವ್ಯವಹಾರ ಗಳ ಬಗ್ಗೆ ಹೇಳುವಂಥ ಅವಶ್ಯಕತೆ ಇಲ್ಲ, ಹೇಳಿದರೆ ಸರಿ ಮಾಡುತ್ತಾರೆ ಎನ್ನುವಂಥ ವಿಶ್ವಾಸ ಕಳೆದು ಕೊಂಡಿರುವುದರಿಂದ ಪ್ರಸ್ತಾಪ ಮಾಡುವುದಿಲ್ಲ. ಇನ್ನು ೧೯೮೫–೮೬ರ ವಾರ್ಷಿಕ ವರದಿಯನ್ನು ನೋಡಿ ದಾಗ ನೋವಾಯಿತು. ಆಡಳಿತ ಪಕ್ಷದವರು ಪ್ರತಿಯೊಂದು ಕ್ಷೇತ್ರದ ಬಗ್ಗೆ ಗಮನ ಕೊಟ್ಟಿಲ್ಲ. ವಿರೋಧಪಕ್ಷದಲ್ಲಿದ್ದಾಗ ಸೌಲಭ್ಯವನ್ನು ಒದಗಿಸಿಕೊಡಿ ಎಂದು ಹೇಳಿದಂಥ ತಾವು ಪ್ರತಿಯೊಂದು ಕ್ಷೇತ್ರದ ಕಡೆ ಗಮನ ಕೊಟ್ಟಿಲ್ಲ. ವಾರ್ಷಿಕ ವರದಿಯ ಪುಟ ೬—೭ ರಲ್ಲಿ ಪ್ರಾಥಮಿಕ ಘಟಕಗಳಿಗೆ, ಪ್ರಾಥಮಿಕ ವಿಭಾಗ ಕೇಂದ್ರಗಳು ಪ್ರಾಥಮಿಕ ಉಪವಿಭಾಗಗಳನ್ನು ಎಷ್ಟು ಕೊಟ್ಟಿದ್ದೀರಿ ಎಂದು ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು –೮, ಪ್ರಾಥಮಿಕ ಆರೋಗ್ಯ ಘಟಕಗಳು—೨೫, ಪ್ರಾಥಮಿಕ ಉಪ ಆರೋಗ್ಯ ಕೇಂದ್ರಗಳು —೪ ಒಟ್ಟು ೩೭ ಇದೆ. ಈ ೩೭ ಘಟಕ-ಕೇಂದ್ರಗಳನ್ನು ಕೊಟ್ಟಿರುವುದರ ಬಗ್ಗೆ ಇಲ್ಲಿರು ವಂಥ ಅಧಿಕಾರಿಗಳನ್ನು ಕೇಳುತ್ತೇನೆ. ಮಂತ್ರಿಗಳು ಏನು ಕಣ್ಣು ಮುಚ್ಚಿಕೊಂಡು ಮಾಡುತ್ತಾರೆ ಅದನ್ನೇ ಅವರು ಮಾಡುತ್ತಾರೆ ಎಂದು. ಇಲ್ಲಿ ಮಂಜೂರಾತಿ ಕೊಟ್ಟಿರುವುದರಲ್ಲಿ ಎರಡು ಘಟಕಗಳನ್ನು ಬಿಟ್ಟರೆ ಉಳಿದವನ್ನು ಅಧಿಕಾರದಲ್ಲಿರುವಂಥ ಪಕ್ಷಕ್ಕೆ ಕೊಟ್ಟಿದ್ದಾರೆ. ಟೋಟಲ್ ೩೭ ರಲ್ಲಿ ಎರಡು ಕಾಂಗ್ರೆಸ್‌ಗೆ, ಒಬ್ಬರಿಗೆ ಇಂಡಿಪೆಂಡೆಂಟ್, ಅವರೂ ಜನತಾ ಪಕ್ಷದ ಬೆಂಬಲಿಗರು —ಈ ೩ ಬಿಟ್ಟರೆ ಇನ್ನು ೩೪ ಕೇಂದ್ರ ಗಳನ್ನು ಏನು ಕೊಟ್ಟಿದ್ದಾರೆ ಅವೆಲ್ಲವೂ ಸಹ ಅಧಿಕಾರದಲ್ಲಿರುವಂಥ ಪಕ್ಷದ ಕ್ಷೇತ್ರಕ್ಕೆ ವಿಶೇಷವಾಗಿ ಮಂತ್ರಿಗಳ ಪಾಲಾಗಿದೆ. ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಹಾಗಾದರೆ ಈ ರಾಜ್ಯದ ಜನತೆ...

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಯಾವುದರಲ್ಲಿದೆ ?

ಶ್ರೀ ಬಿ. ಎಸ್. ಯಡಿಯೂರಪ್ಪ.— ೧೯೮೫–೮೬ರ ವಾರ್ಷಿಕ ವರದಿಯ ಪುಟ ೫–೬ ರಲ್ಲಿ ಮಂಜೂರು ಮಾಡಿದಂಥ ಪಟ್ಟಿ ಕೊಟ್ಟಿದೆ. ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಒಂದು ಕಾನೂನು ಮಾಡಿ. ಅಧಿಕಾರದಲ್ಲಿದ್ದ ಪಕ್ಷದವರು ಗೆದ್ದು ಬಂದವರ ಕ್ಷೇತ್ರಕ್ಕೆ ಎಲ್ಲಾ ಕಾರ್ಯಕ್ರಮ ಗಳನ್ನು ಮಾಡುತ್ತೇವೆ, ವಿರೋಧ ಪಕ್ಷದವರು ಹೋರಾಟ ಮಾಡಬಹುದು ಎಂದು. ನಾನು ಈ ವರದಿ ಯಲ್ಲಿ ಶಿವಮೊಗ್ಗ, ಶಿಕಾರಿಪುರಕ್ಕೂ ಸಿಗುತ್ತದೆ ಎಂದು ಹುಡುಕಾಡಿದೆ, ಆದರೆ ಸಿಗಲಿಲ್ಲ. ನಮ್ಮಲ್ಲಿ ಮಟ್ಟಿಕೋಟೆ ಎಂಬ ದೊಡ್ಡ ಗ್ರಾಮ ಇದೆ. ಅದನ್ನು ಮಂಡಲ್ ಕೇಂದ್ರ ಮಾಡುವುದಕ್ಕೆ ಹೊರಟಿದ್ದಾರೆ. ಅಲ್ಲಿ ಆರೋಗ್ಯ ಘಟಕವನ್ನು ಕೊಡಬೇಕು ಎಂದು ಮಂತ್ರಿಗಳಿಗೆ ಪತ್ರ ಕೊಟ್ಟಿದ್ದೇನೆ. ಇದರಲ್ಲಿ ಸೇರಿದೆಯೋ ಎಂದು ಹುಡುಕಿದರೆ ಸೇರಿಲ್ಲ. ವಿರೋಧಪಕ್ಷದವರಿಗೆ ಒಂದು ಸರಿಸಮಾನವಾದಂಥ ಪಾಲು ಕೊಡಬೇಕಾ ಗಿತ್ತು, ಕೊಡಲಿಲ್ಲ. ಇದನ್ನು ತಾವು ಸರಿ ಮಾಡುತ್ತೀರಿ ಎಂದು ನಾನು ತಿಳಿದು ಕೊಂಡಿದ್ದೇನೆ. ಆಮೇಲೆ ರಾಜ್ಯದಲ್ಲಿ ಗ್ರಾಮೀಣ ಹೆಣ್ಣುಮಕ್ಕಳಿಗೆ ಹೆರಿಗೆ ಭತ್ಯ ಕೊಡುವಂಥ ಕಾರ್ಯಕ್ರಮವನ್ನು ಜಾರಿಗೆ

ತಂದಿದ್ದೀರಿ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಈ ಒಂದು ಅಧಿಕಾರವನ್ನು ತಾಲ್ಲೂಕು ಆಫೀಸಿನಿಂದ ಪಬ್ಲಿಕ್ ಹೆಲ್ತ್ ಸೆಂಟರ್‌ಗೆ ತಾವು ವರ್ಗಾವಣೆ ಮಾಡಿದ್ದೀರಿ. ಒಂದು ತಾಲ್ಲೂಕಿನಲ್ಲಿ ಒಂದೆರಡು ಕೇಂದ್ರಗಳು ಮಾತ್ರ ಇವೆ. ೮–೧೦ ಮೈಲಿ ದೂರದಿಂದ ಬಂದು ಡಾಕ್ಟರನ್ನು ಹುಡುಕಿಕೊಂಡು ಅಲೆಯುವಂಥ ಪರಿಸ್ಥಿತಿ ಇದೆ. ಒಂದು ತಾಲ್ಲೂಕಿನಲ್ಲಿ ಹತ್ತು ಕೇಂದ್ರಗಳಿರುತ್ತವೆ. ಅಲ್ಲಿರುವಂಥ ಡಾಕ್ಟರಿಗೆ ಅಧಿಕಾರ ಕೊಟ್ಟುಬಿಟ್ಟರೆ ೨–೩ ಮೈಲಿ ಆಸುಪಾಸಿನಲ್ಲಿರತಕ್ಕವರು ಬಂದು ಈ ಒಂದು ಅನುಕೂಲ ಪಡೆಯಲು ಅವಕಾಶವಾಗುತ್ತದೆ. ಇದರ ಬಗ್ಗೆ ಚರ್ಚೆ ಮಾಡುವಂಥ ಅವಶ್ಯಕತೆ ಇಲ್ಲ. ತಕ್ಷಣ ಎಲ್ಲಾ ಅಧಿಕಾರವನ್ನು ಎಲ್ಲಾ ಆರೋಗ್ಯ ಘಟಕಗಳಿಗೆ ಕೊಡುತ್ತೀರಿ ಎಂದು ನಂಬಿದ್ದೇನೆ. ಬೆಂಗಳೂರಿನ ಧನ್ವಂತರಿ ರೋಡಿನಲ್ಲಿರುವ ಭಾರತೀಯ ವೈದ್ಯಪದ್ಧತಿ ಮಹಾ ವಿದ್ಯಾಲಯದಲ್ಲಿ ಇರುವಂಥ ಪ್ರಿನ್ಸಿಪಾಲರು, ಲೆಕ್ಚರರ್ಸ್ ವಿದ್ಯಾರ್ಥಿಗಳು ಪಾಸ್ ಆಗಬೇಕು, ಪಾಠ ಪ್ರವಚನಗಳು ಸರಿಯಾಗಿ ನಡೆಯಬೇಕು, ಪರಿಸ್ಥಿತಿ ಸುಧಾರಿಸಬೇಕು ಎಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೋ ಇಲ್ಲವೋ ಎಂಬ ಅನುಮಾನ ನನಗೆ ಬರುತ್ತಿದೆ. ಅಲ್ಲಿ ಪಾಠಪ್ರವಚನಗಳು ಸರಿಯಾಗಿ ನಡೆಯುತ್ತಾ ಇಲ್ಲ ಎಂದು ವಿದ್ಯಾರ್ಥಿಗಳು ಬಂದು ಹೇಳುತ್ತಾ ಇದ್ದಾರೆ. ತಮ್ಮ ಕಾಲದಲ್ಲಿ ಅಲ್ಲಿ ಸರಿಯಾಗಿ ಪಾಠಪ್ರವಚನಗಳು, ಪರೀಕ್ಷೆಗಳು ನಡೆದು, ವಿದ್ಯಾರ್ಥಿಗಳಿಗೆ ತೊಂದರೆಯಾಗದ ರೀತಿಯಲ್ಲಿ, ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಾರೆ ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ಸಮುದಾಯ ಆರೋಗ್ಯ ಮಾರ್ಗದರ್ಶಕರಿಗೆ ಗೌರವಧನ ೫೦ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಆದರೆ ಅಲ್ಲಿಗೆ ಸಾಂಕ್ರಾಮಿಕ ರೋಗಿಗಳು ಬಂದರೆ ಅವರಿಗೆ ಮಾರ್ಗದರ್ಶನ ಮಾಡಿಕೊಡದೇ ಅವರು ಓಡಾಡಿಕೊಂಡಿದ್ದಾರೆ. ಅವರು ತಮ್ಮ ಇಲಾಖೆಗೆ ಒಂದು ನಾಲ್ಕೈದುಸಾರಿ ಓಡಾಡಿದರೆ ೫೦ ರೂಪಾಯಿ ಸಾಲುವುದಿಲ್ಲ. ಅವರು ಪ್ರಾಮಾಣಿಕವಾಗಿ ಕೆಲಸಮಾಡಬೇಕು ಎಂಬ ಇಚ್ಛೆ ಇದ್ದರೆ ತಕ್ಷಣ ೫೦ ರಿಂದ ೨೫೦ ರೂಪಾಯಿಗೆ ಕೊಟ್ಟು ಅವರು ಬದುಕುವುದಕ್ಕೆ ದಾರಿ ಮಾಡಿಕೊಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಶಿಕಾರಿಪುರ ತಾಲ್ಲೂಕಿನ ಬಗ್ಗೆ ಹತ್ತಾರು ಸಾರಿ ಹೇಳಿದೆ. ಅಲ್ಲಿ ಭೀಕರ ಬರಗಾಲ ಇದೆ. ಅಲ್ಲಿ ಆರೋಗ್ಯ ಘಟಕಗಳು, ಕೇಂದ್ರಗಳಿವೆ. ೯ ಕಡೆ ಪಬ್ಲಿಕ್ ಹೆಲ್ತ್ ಯೂನಿಟ್‌ನಲ್ಲಿ ಡಾಕ್ಟರ್ಸ್ ಇಲ್ಲ ಎಂದು ಹೇಳಿದ್ದೆ, ಇದರ ಬಗ್ಗೆ ಆಶ್ವಾಸನೆ ಕೊಟ್ಟು ೭–೮ ತಿಂಗಳಾಯಿತು. ಏನಾದರೂ ನೋಡುತ್ತೇನೆ, ಮಾಡುತ್ತೇನೆ ಎಂದು ಮಾನ್ಯ ನಗರಾಭಿವೃದ್ಧಿ ಸಚಿವರು ಮಾತನಾಡಿದಂತೆ ಆಗಿದೆ. ಈಗ ಇಂತಹ ಪರಿಸ್ಥಿತಿ ಬಂದಾಗ ನಾವು ನಮ್ಮ ಕ್ಷೇತ್ರದ ಜನರಿಗೆ ಯಾವರೀತಿ ಮುಖ ತೋರಿಸಬೇಕು. ನಮ್ಮ ಕ್ಷೇತ್ರದ ಬಗ್ಗೆ ಉದಾಹರಣೆಗೆ ಹೇಳಿದೆ, ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇದ್ದೇ ಇದೆ. ದಯಮಾಡಿ ಎಲ್ಲಾ ಕಡೆ ಡಾಕ್ಟರುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಕಂಬೈಂಡ್ ಆಸ್ಪತ್ರೆ ಇದೆ, ಅಲ್ಲಿ ಲೇಡಿ ಡಾಕ್ಟರ್ ಇಲ್ಲ. ಇರುವ ಡಾಕ್ಟರ್ ಬಡವರ ರಕ್ತ ಹೀರುತ್ತಾ ಇದ್ದಾರೆ. ಇದನ್ನು ಸರಿ ಮಾಡಬೇಕಾಗಿದೆ. ಆರೋಗ್ಯ ಇಲಾಖೆಯಲ್ಲಿ ಏನೇನು ನ್ಯೂನತೆಗಳಿವೆ ಅವುಗಳನ್ನು ಸರಿ ಮಾಡಬೇಕು. ೧೫–೨೦ ದಿವಸಗಳ ಹಿಂದೆ ಪತ್ರಿಕೆಯಲ್ಲಿ ಒಂದು ಸುದ್ದಿ ಬಂದಿತ್ತು. ತುಮಕೂರು ರೋಡಿನಲ್ಲಿ ಮಹಿಳಾ ವೈದ್ಯಾಧಿಕಾರಿಯೊಬ್ಬರು ಬಡವರಿಗೆ ಕಿರುಕುಳ ಕೊಡುವಂಥ ಸಂದರ್ಭ ಬಂದಾಗ ಇಡೀ ಊರಿನ ಜನ ಗಲಾಟೆ ಮಾಡಿದ್ದು ಪತ್ರಿಕೆಯಲ್ಲಿ ವರದಿಯಾಗಿದೆ, ಅದು ಗಂಭೀರವಾಗಿ ಎಂದು ಕಾಣುತ್ತದೆ. ಇದು ಒಂದು ಉದಾಹರಣೆ ತಮ್ಮ ಕಣ್ಣಿಗೆ ಬಿದ್ದಿರಬಹುದು. ವೈದ್ಯಾಧಿಕಾರಿಗಳಿಗೆ ಹೆಚ್ಚಿನ ಸಂಬಳ ಕೊಟ್ಟರೂ ಕೂಡ ಜನರಿಗೆ ಅವರ ಸೇವೆ ಸರಿಯಾಗಿ ದೊರೆಯುತ್ತಿಲ್ಲ. ತಮ್ಮ ಕಾಲದಲ್ಲಿ ಹೆಚ್ಚು ಔಷಧಿಗಳನ್ನು ಕೊಡುತ್ತಿದ್ದಾಗಲೂ ಗ್ರಾಮಾಂತರ ಪ್ರದೇಶದಲ್ಲಿ ಔಷಧಿ ಇಲ್ಲ ಎನ್ನುವಂಥ ಉತ್ತರ ಬರುತ್ತಿದೆ. ಈ ರೀತಿ ಔಷಧಿ ಇಲ್ಲ ಎಂದು ಏಕೆ ಉತ್ತರ ಕೊಡುತ್ತಿದ್ದಾರೆ ? ಅಥವಾ ಔಷಧಿಗಳನ್ನು ಕಳುಹಿಸುವುದರಲ್ಲಿ ಏನಾದರೂ ಅವ್ಯವಸ್ಥೆ ಇದೆಯೆ ? ಆದುದರಿಂದ ಸರಿಯಾದ ವ್ಯವಸ್ಥೆಯಲ್ಲಿ ಇವು ನಡೆದು ಗ್ರಾಮೀಣ ಜನರಿಗೆ ಅನುಕೂಲವಾಗುವ ಹಾಗೆ ತಾವು ಗಮನ ಕೊಡುತ್ತೀರಿ ಎಂದು ಭಾವಿಸಿದ್ದೇನೆ.

ಈಗ ಮಾನ್ಯ ನಗರಾಭಿವೃದ್ಧಿ ಸಚಿವರು ಇಲ್ಲ. ಗ್ರಾಮಾಂತರ ಪ್ರದೇಶದ ಜನ ಏನು ಪಾಪ ಮಾಡಿ ಹುಟ್ಟಿದ್ದಾರೋ ಗೊತ್ತಿಲ್ಲ. ಮಾನ್ಯ ನಗರಾಭಿವೃದ್ಧಿ ಸಚಿವರು ಬಂದರು. ನಗರ ಪ್ರದೇಶದಲ್ಲಿ ವಾಸ ಮಾಡುವಂತಹ ಜನರಿಗೆ ಈ ಸರ್ಕಾರದ ಯಾವುದೇ ಯೋಜನೆಗಳು ಸಹ ಮಾನ್ಯ ಲಕ್ಷ್ಮೀಸಾಗರ್ ರವರ ಮೂಲಕ ತಲುಪುತ್ತಿಲ್ಲ. ಅದು ಅವರಿಗೆ ತಲುಪುವ ರೀತಿಯಲ್ಲಿ ಪ್ರಾಮಾಣಿಕ ರೀತಿಯ ವ್ಯವಸ್ಥೆಯನ್ನು ಅವರು ಮಾಡುತ್ತಿಲ್ಲ. ಐ.ಆರ್.ಡಿ.ಪಿ. ಸ್ಕೀಮ್ ಇದೆ, ಹೆರಿಗೆ ಭತ್ಯ ಕೊಡುತ್ತೀರಿ. ಅದು

ಗರ ಪ್ರದೇಶದವರಿಗೆ ಉಪಯೋಗವಾಗುವುದಿಲ್ಲ, ಭಾಗ್ಯಜ್ಯೋತಿ ದೀಪ ಇದೆ, ಹಸಿರು ಕಾರ್ಡ್ ಇದೆ, ಲ್ಲವೂ ಕೂಡ ನಗರದ ಜನರಿಗೆ ಅನ್ವಯವಾಗುವುದಿಲ್ಲ. ಒಂದು ವಿಚಿತ್ರವಾದಂತಹ ಪರಿಸ್ಥಿತಿಗೆ ಮ್ಮ ನಗರದ ಜನರು ಬಂದು ಮುಟ್ಟಿದ್ದಾರೆ. ಇವೆಲ್ಲಾ ನಿಮ್ಮ ಇಲಾಖೆಗೆ ಸಂಬಂಧಪಡದೇ ಇದ್ದರೂ ಭಾವ ಬೀರಿ ಎಲ್ಲರೂ, ಎಲ್ಲ ಜನರೂ ಬದುಕುವುದಕ್ಕೆ ಸರಿಯಾದ ವ್ಯವಸ್ಥೆ ಮಾಡುತ್ತೀರಾ ಎಂದು ನಾನು ಭಾವಿಸಿಕೊಂಡಿದ್ದೇನೆ. ಇನ್ನು ಪುರ ಸಭೆ, ನಗರ ಸಭೆಗಳು ಇವೆ, ಇವು ಎಲ್ಲಿಗೆ ಬಂದಿವೆಯೆಂದರೆ, ಎಲ್ಲಾ ಅಧಿಕಾರ ಕೊಟ್ಟಿದ್ದರೂ ಸಹ ಯಾವುದೇ ಕೆಲಸವಾಗಬೇಕಾದರೂ ಬೆಂಗಳೂರಿಗೆ ಓಡಿಬರಬೇಕಾಗಿದೆ ನಗರ ಸಭೆಯ ಅಧ್ಯಕ್ಷರಾಗಲೀ ಇಲ್ಲವೇ ಸದಸ್ಯರಾಗಲೀ ಅಥವಾ ಅದರ ಪ್ರಯೋಜನದಾರ ಯಾರಿದ್ದಾರೆ ಅವರೇ ನೋಟ್ ಹಿಡಿದುಕೊಂಡು ಬರಬೇಕು. ಆ ಜನ ಆಫೀಸರ್ ಹತ್ತಿರ ಹೋಗುವುದಕ್ಕೆ ಹಿಂದು ಮುಂದು ನೋಡುವ ಪರಿಸ್ಥಿತಿ ಇದೆ. ನಮ್ಮ ಸಹಕಾರ ಮಂತ್ರಿಯವರ ಕ್ಷೇತ್ರವಾದ ದೊಡ್ಡಬಳ್ಳಾಪುರದಲ್ಲಿ ಸುಮಾರು ೪೦–೫೦ ಸೈಟುಗಳನ್ನು ಅಂಗವಿಕಲರಿಗೆ ಮಂಜೂರು ಮಾಡಿದ್ದಾರೆ ಅದು ಎಲ್ಲಿಗೆ ಬಂದಿದೆಯೆಂದರೆ, ಸೆಕ್ರೆಟರಿಯೇಟ್‌ನಲ್ಲಿನ ಒಬ್ಬ ಭೂಪತಿ ರಿಪೋರ್ಟ್ ಕಳಿಸಿದ್ದಾನೆ ಇದನ್ನು ಏಕೆ ಪಾರ್ಕಿಗೆ ಉಪಯೋಗ ಮಾಡಿಕೊಳ್ಳಬಾರದು ಎಂದು. ಬೇಕಾದರೆ ಅದರ ವಿವರ ಕೊಡುತ್ತೇನೆ. ಅಧಿಕೃತ ದಾಖಲೆಗಳಲ್ಲಿ ಇದ್ದು, ಆ ಬೃಹಸ್ಪತಿ ಇದನ್ನು ಪಾರ್ಕಿಗೆ ಮಾಡಬಹುದೆಂಬ ಕಲ್ಪನೆ ಇದೆ ಎನ್ನುವುದಾದರೆ ಹೇಗೆ ? ಅಧಿಕಾರಿಗಳು ಕಣ್ಣು ಮುಚ್ಚಿಕೊಂಡು ಸೈನ್ ಮಾಡಿ ಕಳುಹಿಸುತ್ತಾರೆನ್ನುವುದಾದರೆ ಹೇಗೆ ? ನಗರ ಸಭೆ, ಪುರ ಸಭೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ಇದನ್ನು ಕಳಿಸಿ ಕೊಟ್ಟಾಗ ಒಬ್ಬ ಎಸ್. ಡಿ. ಸಿ. ಏನು ರೆಕಮಂಡ್ ಮಾಡಿರುತ್ತಾನೆ ಅದನ್ನೇ ಒಪ್ಪಿ ಜಿಲ್ಲಾಧಿಕಾರಿಗಳು, ಸೆಕ್ರೆಟರಿಯೇಟ್‌ನ ಅಧಿಕಾರಿಗಳು ಸಹಿ ಮಾಡುವಂತಹ ವಿಚಿತ್ರವಾದಂತಹ ಪದ್ಧತಿ ಬಂದಿದೆ. ಬಹಳಷ್ಟು ಕಡೆಯ ನಗರ ಸಭೆಗಳಲ್ಲಿ ಬಹಿರಂಗ ಹರಾಜು ಮಾಡಿದ್ದಾರೆ. ಅದು ಇಲ್ಲಿಗೆ ಬಂದು ಆರೇಳು ತಿಂಗಳಾಯಿತು ಇನ್ನಾದರೂ ಕೂಡ ವಾಪಸ್ ಬಂದಿಲ್ಲ. ಆರು ತಿಂಗಳ ಹಿಂದೆ ಶಿಕಾರಿಪುರದಲ್ಲಿ ೨೫ರಿಂದ ೪೦ ಸಾವಿರಕ್ಕೆ ೧೦ ಸೈಟ್ ಹರಾಜಾಗಿದೆ, ಅದಕ್ಕೆ ದುಡ್ಡು ಕಟ್ಟಿಸಿಕೊಂಡು ಆರೇಳು ತಿಂಗಳಾಯಿತು ಅವರು ಮನೆ ಕಟ್ಟಿಕೊಳ್ಳಬೇಕೆಂದು ಇದ್ದಾರೆ. ಇದನ್ನೆಲ್ಲಾ ಏಕೆ ಕಳಿಸಬಾರದು. ನಿಮ್ಮವರಿಗೆ ಏನಾದರೂ ಪೂಜೆ ಪುನಸ್ಕಾರ ಮಾಡಬೇಕೇ ? ಇಲ್ಲ ಮಾಮೂಲು ಏನಾದರೂ ಕೊಡಬೇಕೇ ? ಈ ತರಹ ಎಷ್ಟು ಫೈಲ್ ಬಾಕಿ ಇದೆ ? ಇದರ ಬಗ್ಗೆ ನೋಡುತ್ತೀರಾ ಇದನ್ನು ಸರಿ ಮಾಡುವಂತಹ ಪ್ರಯತ್ನವನ್ನು ಮಾಡುತ್ತೀರಾ ಇದನ್ನು ಸರಿಯಾದ ರೀತಿಯಲ್ಲಿ ಗಮನಿಸುತ್ತೀರಾ ಎಂದು ನಾನು ಅಂದು ಕೊಂಡಿದ್ದೇನೆ. ಇನ್ನು ಮಂಡಲ ಪಂಚಾಯ್ತಿ ಬಗ್ಗೆ ಹೇಳುವುದಾದರೆ ಅಸೆಂಬ್ಲಿ ಪಾರ್ಲಿಮೆಂಟ್‌ನಲ್ಲಿ ಚುನಾಯಿತ ಪ್ರತಿನಿಧಿಗಳ ಅವಧಿ ೫ ವರ್ಷವೆಂದು ಇದೆ. ಇಲ್ಲಿ ಮಾತ್ರ ೪ ವರ್ಷ ಇದೆ. ಇದನ್ನು ಕಣ್ಣು ಮುಚ್ಚಿಕೊಂಡು ೫ ವರ್ಷಕ್ಕೆ ಎಕ್ಸ್‌ಟೆಂಡ್ ಮಾಡುವ ಘೋಷಣೆಯನ್ನು ಮಾಡುತ್ತೀರಾ ಎಂದು ನಾನು ಅಂದು ಕೊಂಡಿದ್ದೇನೆ, ಇದನ್ನು ೫ ವರ್ಷಕ್ಕೆ ವಿಸ್ತರಣೆ ಮಾಡಿ. ಮತ್ತು ಪುರಸಭೆ, ನಗರ ಸಭೆ ಮಹಾ ಪಾಲಿಕೆಗಳ ಸಂಪನ್ಮೂಲವನ್ನು ಸೂಕ್ತ ಹಂಚಿಕೆಗೆ ಒಂದು ಸಮಿತಿಯನ್ನು ಮಾಡಿದರು, ಆ ಸಮಿತಿ ವರದಿ ಕೊಟ್ಟಿದೆ, ಆದರೆ ಅದನ್ನು ಜಾರಿಗೆ ತಂದಿಲ್ಲ. ಈ ಸಮಿತಿಯನ್ನು ಏಕೆ ರಚಿಸುತ್ತೀರಿ ? ಇದನ್ನು ಜಾರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಇನ್ನು ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಮೋಟಾರು ವಾಹನ ತೆರಿಗೆಯಿಂದ ಹಣ ಬರುತ್ತದೆ. ಅದರಲ್ಲಿ ಶೇಕಡಾ ೧೫ರಷ್ಟು ಪ್ರಾಮಾಣಿಕವಾಗಿ ಪುರಸಭೆ, ನಗರಸಭೆಗೆ ತಲುಪಬೇಕು. ಸಂಪನ್ಮೂಲ ಹೆಚ್ಚು ಸೇರಬೇಕು, ಚೆನ್ನಾಗಿ ನಡೆಯಬೇಕೆಂದಿದ್ದರೆ ಇದನ್ನು ಪುರಸಭೆ, ನಗರಸಭೆಗಳಿಗೆ ಕೊಡುವಂತಹ ವ್ಯವಸ್ಥೆ ಮಾಡಿ. ಇನ್ನು ಮನರಂಜನಾ ತೆರಿಗೆಯಲ್ಲಿ ೯–೧೦ ಪರ್ಸೆಂಟ್ ನಷ್ಟು ನಗರ ಸಭೆ, ಪುರಸಭೆಗಳಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕು. ೧೯೬೪ರ ಕರ್ನಾಟಕ ಪುರ ಸಭೆ ಕಾಯಿದೆಯ ಸೆಕ್ಷನ್ ೮೭–೮೮–೮೯ರ ಪ್ರಕಾರ ಸಾಕಷ್ಟು ಅಧಿಕಾರ ಪುರಸಭೆ, ನಗರಸಭೆಗಳಿಗೆ ಇದೆಯೆಂದು ಅಧ್ಯಕ್ಷರುಗಳು ತಿಳಿದುಕೊಂಡಿದ್ದಾರೆ. ಆದರೆ ಏನಾದರೂ ಮಂಜೂರಾಗಬೇಕಾದರೆ ನಿಮ್ಮ ಹತ್ತಿರ ಓಡಿ ಬರಬೇಕು, ಪ್ರತಿಯೊಂದಕ್ಕೂ ಜಿಲ್ಲಾಧಿಕಾರಿಗಳ ಹತ್ತಿರ ಓಡುವಂಥಾದ್ದನ್ನು ತಪ್ಪಿಸಿ ಅಲ್ಲಿಯೇ ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಈ ವಿಕೇಂದ್ರೀಕರಣವನ್ನು ಮಾಡುವುದಕ್ಕೋಸ್ಕರ ಮಂಡಲ ಪಂಚಾಯ್ತಿಗೆ ಜಿಲ್ಲಾ ಪಂಚಾಯ್ತಿಗೆ ಕೊಡುವ ಯೋಚನೆ ಮಾಡುತ್ತೀರಾ ? ಪ್ರತಿಯೊಂದಕ್ಕೂ ಬೆಂಗಳೂರಿಗೆ ಬರುವುದು ಬೇಡ. ಅದನ್ನು ಮಾಡುತ್ತೀರೆಂದು ನಾನು ಅಂದುಕೊಂಡಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಇದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಎಲ್ಲಾ ಪುರಸಭೆಗಳಿಗೆ ಕಟ್ಟಡಗಳ

ತೆರಿಗೆ ಬರುತ್ತಿರುವುದರಿಂದ ಅವು ಬದುಕಿವೆ. ಅಲ್ಲಿನ ಅಸೆಸ್‌ಮೆಂಟ್ ಅಧಿಕಾರ ಬಂದು ೪-೫ ವರ್ಷ ಕ್ಕೊಮ್ಮೆ ೫೦೦ ರಿಂದ ೭೫೦ ಮಾಡುತ್ತೇನೆಂದು ಅಲ್ಲಿನ ಜನರಿಗೆ ಹೇಳುತ್ತಾನೆ. ಮೊನ್ನೆ ಶಿಕಾರಿಪುರಕ್ಕೆ ಬಂದು ಅಲ್ಲಿ ಲಕ್ಷಗಟ್ಟಲೆ ಹಣ ಮಾಡಿಕೊಂಡು ಹೊರಟು ಹೋದ. ನಾವೆಲ್ಲಾ ಇಂಥಾದ್ದನ್ನೆಲ್ಲಾ ತಡೆ ಯುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದೆವು. ಇಂಥಾದ್ದು ರಾತ್ರೋ ರಾತ್ರಿ ಇಡೀ ರಾಜ್ಯದಲ್ಲಿ ನಡೆಯುತ್ತಿದೆ, ಈ ಭ್ರಷ್ಟಾಚಾರ ನಿಲ್ಲಬೇಕೆಂಬ ಪ್ರಾಮಾಣಿಕ ಪ್ರಯತ್ನ ಇದ್ದರೆ, ದಯವಿಟ್ಟು ಶೇಕಡಾ ಇಷ್ಟು ಜಾಸ್ತಿ ಮಾಡಬೇಕು ಎಂದು ಅಧಿಕಾರವನ್ನು ಅವರಿಗೆ ಕೊಟ್ಟುಬಿಡಿ, ಪ್ರತಿ ವರ್ಷ ಇಷ್ಟೆಂದು ಜಾಸ್ತಿ ಮಾಡೋಣ. ಅಸೆಸ್‌ಮೆಂಟ್ ಆಫೀಸರ್‌ರನ್ನು ದೊಡ್ಡವನನ್ನಾಗಿ ಮಾಡುವುದಕ್ಕೆ ಗಂಟು ಹೊಡೆಯುವುದಕ್ಕೆ ಅವಕಾಶ ಕೊಡಬೇಡಿ. ಏನು ಈ ಅವ್ಯವಸ್ಥೆ ? ನಮಗೆ ಇದರ ಬಗ್ಗೆ ಮಾತನಾ ಡುವುದಕ್ಕೆ ಅಧಿಕಾರವಿಲ್ಲ. ಪುರಸಭಾ ಅಧ್ಯಕ್ಷರೂ ಕೂಡ ಇದನ್ನೆಲ್ಲಾ ನೋಡುತ್ತಿದ್ದರೂ ಏನೂ ಮಾಡುವ ಹಾಗಿಲ್ಲ. ಸರ್ಕಾರಕ್ಕೆ ಬರೆಯಬಹುದು ಅಷ್ಟೇ ವಿನಃ ಏನೂ ಮಾಡುವ ಹಾಗಿಲ್ಲ. ಇದರ ಬಗ್ಗೆ ಏನಾದರೂ ಒಂದು ಆ್ಯಕ್ಟ್ ಅನ್ನು ತಂದು ಇದನ್ನು ಪ್ರಾಮಾಣಿಕವಾಗಿ ತಡೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ನಾನು ಭಾವಿಸಿದ್ದೇನೆ. ಇನ್ನು ಶಿರಾಳಕೊಪ್ಪದಲ್ಲಿ ಪುರಸಭೆ ಇತ್ತು, ಅಲ್ಲಿ ಚುನಾವಣೆಯಾಗದೆ ೫ ಜನ ಗೆದ್ದು ಬಂದರು, ಅಲ್ಲಿ ಉಪಾಧ್ಯಕ್ಷರ ಚುನಾವಣೆಯಾಗಿಲ್ಲ. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ವಾಗಿದೆ. ೧೫ ಲಕ್ಷ ರೂಪಾಯಿ ಎಸ್ಟಿಮೇಟ್‌ನ ಪ್ಲಾನ್ ಇಲ್ಲಿ ಬಂದು ಬಿದ್ದಿದೆ. ನಿಮ್ಮ ಆಫೀಸ್‌ಗೂ ಬಂದಿದೆ. ಕೊನೇ ಪಕ್ಷ ನಾನು ಇಷ್ಟು ಕಾಡಿಸುತ್ತೇನೆಂದಾದರೂ ಇದನ್ನು ಮಾಡಿ. ನಾವು ಏನು ಪಾಪ ಮಾಡಿ ವಿರೋಧ ಪಕ್ಷದಲ್ಲಿ ಗೆದ್ದು ಬಂದೆವೋ ಗೊತ್ತಿಲ್ಲ. ಜನತೆ ಏನು ಪಾಪ ಮಾಡಿದ್ದಾರೋ ಗೊತ್ತಿಲ್ಲ. ಆ ಜನಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಅಲ್ಲಿ ಕುಡಿಯುವ ನೀರನ್ನು ಕೊಡಿಸುವ ವ್ಯವಸ್ಥೆ ಮಾಡಿ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ತಾವು ಒಂದು ವರದಿಯನ್ನು ಕೊಟ್ಟಿದ್ದೀರಿ. ಭಾಗ್ಯ ಮಂದಿರ ಯೋಜನೆಯಲ್ಲಿ ೧೯೭೫-೭೬ರಲ್ಲಿ ಸೈಟನ್ನು ಹಂಚಿದ್ದೇವೆಂದು ಬೆಂಗಳೂರು ಡಿವಿಜನ್ ನಲ್ಲಿ ಒಟ್ಟು ೫೩ ಮುನಿಸಿಪಾಲಿಟಿಗಳು, ೬ ಸಿಟಿ ಮುನಿಸಿಪಾಲಿಟಿಗಳು, ಎರಡು ನೋಟಿಫೈಡ್ ಏರಿಯಾ ಎಂದು ಇದೆ. ಅದರಲ್ಲಿ ೧೬೬ ಮನೆಗಳೆಂದರೆ, ಆವರೇಜ್ ಮೂರು ಬಂತು. ಅದನ್ನು ಹರಿಜನಗಿರಿ ಜನರಿಗೆ ಕೊಡೋಣವೋ ಇಲ್ಲವೇ ಕಡುಬಡವರಿಗೆ ಕೊಡೋಣವೋ, ಯಾರಿಗೆ ಕೊಡೋಣ ? ೧೬೬ ಮನೆ ಕಟ್ಟಿಸಿರುವುದು, ೫೮೬ ಸೈಟ್ ಇದೆ. ಮೈಸೂರು ಡಿವಿಜನ್‌ನಲ್ಲಿ ೨೩೬ ಮನೆ ಕಟ್ಟಿಸಿರುವುದು, ೫೯೧ ಸೈಟ್ ಕೊಟ್ಟಿರುವುದು, ಬೆಳಗಾಂ ಡಿವಿಜನ್‌ನಲ್ಲಿ ೬-೭ ಜಿಲ್ಲೆ ಸೇರಿ ಮನೆ ಕಟ್ಟಿರುವುದು ೨೬೮, ಕೊಟ್ಟಿರುವ ಸೈಟ್ ೧೯೭೭, ಗುಲ್ಬರ್ಗಾ ಡಿವಿಜನ್‌ನಲ್ಲಿ ಕೇವಲ ೯೧೨ ಮನೆಗಳು. ೧೫೬೧ ಸೈಟ್‌ಗಳು ನಗರ ಪ್ರದೇಶದ ಜನತೆ ಈ ಎಲ್ಲಾ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಈ ಕಡೆ ಇದ್ದಾಗ ಏನು ಕಳಕಳಿ ಇತ್ತು, ಅದೇ ಕಳಕಳಿ ಆ ಕಡೆ ಹೋದಾಗ ಇರುವುದಿಲ್ಲಾ. ಇದು ಮನುಷ್ಯನ ಸ್ವಭಾವವೆಂದು ಕಾಣುತ್ತದೆ. ಈ ಕಡೆ ಇದ್ದಾಗ ಏನೇನೋ ಮಾಡಬೇಕೆಂದು ಅನಿಸುತ್ತದೆ. ನಮ್ಮನ್ನು ನಂಬಿ ಆ ಕಡೆ ಕೂರಿಸಿದಾಗ ಮಾಡುವುದಕ್ಕಾಗುವುದಿಲ್ಲ. ಧೈರ್ಯವಾಗಿ ಈ ರಾಜ್ಯದ ಜನತೆ ಬದುಕುವುದಕ್ಕೆ ಅನುಕೂಲ ವಾಗುವ ದೃಷ್ಟಿಯಿಂದ ನಗರಸಭೆ, ಪುರಸಭೆ ಅಧ್ಯಕ್ಷರುಗಳಿಗೆ ಗೌರವ ಬರುವ ದೃಷ್ಟಿಯಿಂದ ಪುರಸಭಾ ಸದಸ್ಯರುಗಳಿಗೆ ಹೆಚ್ಚಿನ ಹಣವನ್ನು ಕೊಟ್ಟು. ಅಧಿಕಾರವನ್ನು ಕೊಟ್ಟು ಬಡವರ ಉದ್ಧಾರಕ್ಕೋಸ್ಕರ ಇರುವ ಕಾರ್ಯಕ್ರಮಕ್ಕೆ ಹೆಚ್ಚಿನ ಹಣವನ್ನು ಕೊಟ್ಟು ಚೆನ್ನಾಗಿ ಕೆಲಸ ಮಾಡುತ್ತಾರೆಂಬ ನಂಬಿಕೆಯಿಂದ ಒಂದೆರಡು ಸಲಹೆಯನ್ನು ಕೊಟ್ಟಿದ್ದೇನೆ. ಮಾನ್ಯ ಲಕ್ಷ್ಮೀಸಾಗರ್‌ರವರು ಇವರ ಕಡೆಗೆ ಹೆಚ್ಚಿನ ಗಮನ ಕೊಡುತ್ತಾರೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ (ಕೋಲಾರ).—ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ನಾನು ನ್ಯಾಯಾಂಗ ಇಲಾಖೆಯ ಬಗ್ಗೆ ಸ್ವಲ್ಪ ಹೇಳಿ ನಂತರ ಇತರೇ ಇಲಾಖೆಯ ಬಗ್ಗೆ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹೈಕೋರ್ಟಿನಲ್ಲಿ ಬೃಹದಾಕಾರವಾಗಿದೆ ಕೇಸುಗಳು ಪೆಂಡಿಂಗ್‌ನಲ್ಲಿವೆ. ಹೈಕೋರ್ಟಿನ ಬಗ್ಗೆ ವರದಿಯಲ್ಲಿ ಏನಾದರೂ ಕೊಟ್ಟಿದ್ದಾರೆಯೋ ಎಂದು ನೋಡಿದೆ, ಅದರಲ್ಲಿ ಏನೂ ಕಾಣಿಸಲಿಲ್ಲ. ಇದರಿಂದ ಗೊತ್ತಾಗುತ್ತದೆ ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ವರದಿಯ ಪ್ರಕಾರ ಡಿಸೆಂಬರ್ ೩೧ ೧೯೭೫ರಲ್ಲಿ ೮೭ ಸಾವಿರ ಕೇಸುಗಳು ಹೈಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿದ್ದರೆ ಬೇರೆ ಕೇಸಸ್ ಎಷ್ಟು ಪೆಂಡಿಂಗ್‌ನಲ್ಲಿ ಇರ ಬಹುದು ಎಂದು ಗೊತ್ತಾಗುತ್ತದೆ. ಬೇರೆ ಕೇಸ್‌ಗಳು ಎಷ್ಟು ಪೆಂಡಿಂಗ್‌ನಲ್ಲಿ ಇದೆಯೆಂದು ವರದಿಯಲ್ಲಿ ಕೊಟ್ಟಿದ್ದೀರಿ ಅದರ ಪ್ರಕಾರವೇ ನೋಡಿದರೆ ನಿಜವಾಗಿಯೂ ಕೂಡ ನ್ಯಾಯವನ್ನು ದೊರಕಿಸುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂದು ಗೊತ್ತಾಗುತ್ತದೆ. ೩೧-೧೨-೭೫ಕ್ಕೆ ಕ್ರಿಮಿನಲ್ ನ್ಯಾಯಾಲಯಗಳಲ್ಲಿ

೯,೬೯,೨೪೦ ಕೇಸುಗಳು ಪೆಂಡಿಂಗ್‌ನಲ್ಲಿವೆ. ಇದರ ಬಗ್ಗೆ ಕೇಳಿದರೆ ಹೈಕೋರ್ಟ್ ಜಡ್ಜಸ್ ಲಿಸ್ಟ್ ಕೊಟ್ಟಿಲ್ಲ, ೨೨ ಮುನ್ಸೀಫ್ ಹುದ್ದೆಗಳು, ೧೧೨ ಸಿವಿಲ್ ಜಡ್ಜ್ ಹುದ್ದೆಗಳು, ೮೨ ಜಿಲ್ಲಾ ನ್ಯಾಯಾಧೀಶರ ಹುದ್ದೆಗಳು, ೧೫ ಮುನ್ಸೀಫ್ ಹುದ್ದೆಗಳು ಖಾಲಿಯಿದೆಯೆಂದು ಹೇಳಿದ್ದಾರೆ. ಹೋದ ಸಾರಿ ಬಡ್ಜೆಟ್ ಭಾಷಣ ಮಾಡಿದಾಗ ಹೇಳಿದ್ದೆ, ಹೈಕೋರ್ಟಿನ ಜಡ್ಜ್‌ಗಳ ಸಂಖ್ಯೆಯನ್ನು ಜಾಸ್ತಿ ಮಾಡಿಸಿಕೊಂಡು ಬನ್ನಿ ಎಂದು. ಡಿಸ್ಟ್ರಿಕ್ಟ್ ಜಡ್ಜ್‌ಗಳ ಸಂಖ್ಯೆಯನ್ನು ಡಬಲ್ ಮಾಡಿ ಎಂದು ಒಂದು ಕೇಸಿನ ಸೆಕೆಂಡ್ ಅಪೀಲು ಬರಬೇಕೆಂದರೆ ಹತ್ತು ವರ್ಷವಾದರೂ ಕೂಡ ಆಗುವುದಿಲ್ಲ. ನಾನು ಒಂದು ಕೇಸಿನಲ್ಲಿ ಅಪೀಲು ಹೋಗಿ, ಅವರೆಲ್ಲಾ ಸತ್ತು ಹೋದರೂ ಅವಕಾಶ ಸಿಗಲಿಲ್ಲ. ಇವತ್ತು ಮಕ್ಕಳು ಮೊಮ್ಮಕ್ಕಳ ಕಾಲಕ್ಕೂ ಕೂಡ ನ್ಯಾಯ ಸಿಗುವುದಿಲ್ಲ. ಇಂಥ ಪರಿಸ್ಥಿತಿ ಇರುವಾಗ ಮಾನ್ಯ ಲಕ್ಷ್ಮೀಸಾಗರ್‌ರವರು ಹೈಕೋರ್ಟ್ ನ್ಯಾಯಾಧೀಶರ ಸಂಖ್ಯೆಯನ್ನು ಇಮ್ಮಡಿ ಮಾಡಬೇಕು, ಜಿಲ್ಲಾ ನ್ಯಾಯಾಧೀಶರ ಸಂಖ್ಯೆಯನ್ನು, ಮುನ್ಸೀಫರ ಸಂಖ್ಯೆಯನ್ನು ಕೂಡ ಇಮ್ಮಡಿ ಮಾಡಬೇಕು ಜೊತೆಗೆ ಈಗ ಖಾಲಿ ಇರತಕ್ಕ ನ್ಯಾಯಾಧೀಶರುಗಳ ಹುದ್ದೆಗಳನ್ನು ಆದಷ್ಟು ಬೇಗ ತುಂಬಬೇಕು. ಇನ್ನು ನ್ಯಾಯಾಧೀಶರಿಗೆ ಸಂಬಳ ಏನು ಕೊಡುತ್ತಿದ್ದಾರೆ, ಅದು ಬಹಳ ಕಡಿಮೆ. ವಕೀಲ ವೃತ್ತಿಯಲ್ಲಿ ಫೇಲಾಗಿರುವವರು ಮಾತ್ರ ಈ ಹುದ್ದೆಗಳಿಗೆ ಬರುತ್ತಾರೆ. ಇಂಥಾದ್ದು ಆಗಬಾರದು. ಇದು ಒಂದು ಗೌರವದ ಹುದ್ದೆ ಎನ್ನುವ ರೀತಿಯಲ್ಲಿ ಆಕರ್ಷಣೆಯಾಗುವ ಸಂಬಳ ಸಾರಿಗೆಯನ್ನು ಕೊಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಳ ಜಾಸ್ತಿ ಮಾಡಿ, ತೆರಿಗೆ ಜಾಸ್ತಿ ಮಾಡಬೇಡಿ ಎನ್ನುವುದೇ ಮಾನ್ಯ ವೆಂಕಟರಾಮಯ್ಯನವರ ತತ್ವ.

ಅಧ್ಯಕ್ಷರು.—ವರ್ಷದಲ್ಲಿ ೨೦೫ ದಿನ ಮಾತ್ರ ಕೆಲಸದ ದಿನ. ಇದನ್ನು ಕೂಡ ತಾವು ತಿಳಿದುಕೊಂಡು ರೈತರ ಬಗ್ಗೆ ಸ್ವಲ್ಪ ಹೇಳಿ. ಅವರ ಬಗ್ಗೆ ಕೂಡ ಕಳಕಳಿ ಇರಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮ್ಯಾಜಿಸ್ಟ್ರೇಟರು ಕೂಡ ರೈತರ ಕೆಲಸ ಮಾಡುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಮುಳಬಾಗಿಲು ಮತ್ತು ಶ್ರೀನಿವಾಸಪುರ ತಾಲ್ಲೂಕುಗಳಲ್ಲಿ ಕೋರ್ಟುಗಳು ಇರಲಿಲ್ಲ. ಈಗ ಕೋರ್ಟು ಕೊಡಬೇಕೆಂದು ಶಿಫಾರಸ್ಸು ಆಗಿದೆಯೆಂದು ಕೇಳಿದ್ದೇನೆ, ಸಂತೋಷ. ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್ ಸಂಸ್ಥೆ ಮಾಡಿದ್ದೀರಿ, ಇದಕ್ಕೆ ಫಾಲೋ ಆಫ್ ಆಕ್ಷನ್ ಇಲ್ಲ. ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನೂ ನೇರವಾಗಿ ಬಾರ್ ಕೌನ್ಸಿಲ್‌ನಿಂದ ತೆಗೆದುಕೊಳ್ಳಬೇಕು ಎ.ಪಿ.ಪಿ.ಗಳನ್ನು ನೇಮಕ ಮಾಡುವುದರಲ್ಲಿಯೂ ನ್ಯಾಯ ದೊರಕುವುದಿಲ್ಲವೆಂದು ಅಲ್ಲಿ ಹೇಳುತ್ತಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ವೆಂಕಟರಾಮಯ್ಯನವರು ವಾಸ್ತವಾಂಶವನ್ನು ತಿಳಿದುಕೊಂಡು ಮಾತನಾಡಿದರೆ ಉತ್ತರ ಕೊಡಬಹುದು. ಪ್ರಾಸಿಕ್ಯೂಟರುಗಳಾಗಿ ಬರುವವರು ವಕೀಲರ ಗುಂಪಿನಿಂದಲೇ ಬರುತ್ತಾರೆ. ಇದಕ್ಕೆ ರೂಲ್ಸ್ ರೆಗ್ಯೂಲೇಷನ್ ಇದೆ. ರಿಟನ್ ಟೆಸ್ಟ್ ಮತ್ತು ವೈಓಸಿ ಪರೀಕ್ಷೆ ಇದೆ. ಮುನ್ಸೀಫ್ ಎಕ್ಸಾಮಿನೇಷನ್‌ನಲ್ಲಿ ಪಾಸಾದವರು ಪ್ರಾಸಿಕ್ಯೂಟರ್ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಅವರಿಗಿಂತ ಲಾಯರ್ ಪ್ರಾಕ್ಟೀಸ್ ಚೆನ್ನಾಗಿ ಮಾಡಿದ್ದೇನೆ ಅವರೇನೂ ಹೇಳಿಕೊಡಬೇಕಾಗಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಹೇಳಿಕೊಡುವುದೇನೂ ಇಲ್ಲ, ವಿಷಯ ಸರಿಯಾಗಿ ತಿಳಿದುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ.—ಇನ್ನೊಂದು ವಿಷಯ ತಮ್ಮ ಗಮನಕ್ಕೆ ತರುವುದಾದರೆ. ಇವತ್ತು ೧೦,೨೯,೩೦೮ ಕ್ರಿಮಿನಲ್ ಕೇಸುಗಳಲ್ಲಿ ೬೦,೦೦೦ ಮಾತ್ರ ತೀರ್ಮಾನವಾಗಿದ್ದು, ಉಳಿಕೆ ೯ ಲಕ್ಷ ಚಿಲ್ಲರೆ ಪೆಂಡಿಂಗ್‌ನಲ್ಲಿದೆ. ಹಾಲಿ ಇರತಕ್ಕ ೨೨೨ ಜಡ್ಜಸ್‌ಗಳ ಹುದ್ದೆಯನ್ನು ಡಬಲ್ ಮಾಡಿ, ಅವಶ್ಯಕತೆ ಇರುವ ಕಡೆ ಕೋರ್ಟುಗಳನ್ನು ತೆಗೆಯಬೇಕೆಂದು ಹೇಳುತ್ತೇನೆ. ಇನ್ನು ಸಿವಿಲ್ ಜಡ್ಜ್‌ಗಳನ್ನು ಡಿ. ಸಿ. ಕೇಡರ್ ಮಾಡಿ ಜಿಲ್ಲಾ ಮಟ್ಟದಲ್ಲಿ ಲ್ಯಾಂಡ್ ರೆವಿನ್ಯೂ ಕೇಸುಗಳನ್ನು ಇತ್ಯರ್ಥ ಮಾಡುವಂಥ ವ್ಯವಸ್ಥೆ ಮಾಡಬೇಕು. ಗೇಣಿದಾರರಿಗೆ ಅನ್ಯಾಯವಾಗಿರುವುದನ್ನು ತಪ್ಪಿಸಿ, ಕೂಡಲೇ ಅವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಹೇಳುತ್ತೇನೆ.

ಇನ್ನು ನಗರಾಡಳಿತ ಇಲಾಖೆಯ ವಿಚಾರದಲ್ಲಿ ಹೇಳುವುದಾದರೆ, ಬೆಂಗಳೂರು ನಗರ ಅಂದರೆ, ಅಂಬೇಡ್ಕರ ವೀದಿ, ಕೆಂಪೇಗೌಡ ರಸ್ತೆ ಎಂದು ತಿಳಿದುಕೊಂಡಂತೆ ಇದೆ. ಹೊರಗಿನಿಂದ ಬಂದಂಥ ವ್ಯಕ್ತಿಗಳಿಗೆ ಹೆಚ್.ಎ.ಎಲ್.ನಿಂದ ಶುರುಮಾಡಿ, ಬೆಂಗಳೂರು ಹೀಗಿದೆ ಎಂದು ತೋರಿಸಿಕೊಂಡು ಬರುತ್ತಾರೆ. ನಮ್ಮ ಹಳ್ಳಿ ಜಾತ್ರೆಗಳಲ್ಲಿ ಬಾಂಬೆ ನೋಡು, ಡೆಲ್ಲಿ ನೋಡು ಎಂದು ತೋರಿಸುತ್ತಾರಲ್ಲ ಹಾಗೆ ಇಲ್ಲಿ ತೋರಿಸುತ್ತಾರೆ, ಬೆಂಗಳೂರು ನಗರದಲ್ಲಿ ಸುಮಾರು ೭೫ ಭಾಗ ಕೊಳಚೆ ಪ್ರದೇಶ ಇದೆ. ಅಲ್ಲಿ ವಾಸ ಮಾಡುವಂಥ ಜನಗಳಿಗೆ ದೀಪದ ವ್ಯವಸ್ಥೆ ಇಲ್ಲ, ರಸ್ತೆಗಳಿಲ್ಲ, ಕುಡಿಯುವ ನೀರಿನ ವ್ಯವಸ್ಥೆಯಿಲ್ಲ. ಕಾವೇರಿಯಿಂದ ನೀರು ಬಂದರೂ ಕೂಡ ಮಲ್ಲೇಶ್ವರಂವರೆಗೆ ಬರುತ್ತೆ, ಮುಂದಕ್ಕೆ ಟೆಕ್ನಿಕಲ್ ಅಬ್ಜಕ್ಷನ್, ಫೈನಾನ್ಸಿಯಲ್ ಅಬ್ಜಕ್ಷನ್ ಬರುತ್ತೆ, ಬೆಂಗಳೂರಿನಲ್ಲಿ ಪ್ರಪಂಚದಲ್ಲಿಯೇ ಎಲ್ಲೂ ಇರದಂಥ ಸ್ಲಂಗಳು ಇವೆ. ಜೀವನಹಳ್ಳಿ ಸ್ಲಂ, ಅಲಸೂರು ಸ್ಲಂ ಹೀಗೆ ೪೦೦ ಸ್ಲಂಗಳು ಇವೆ. ಬಡವರ ಕುಟುಂಬದಿಂದ ಬಂದಂಥ ಲಕ್ಷ್ಮೀಸಾಗರ್‌ರವರು ಇವುಗಳ ಅಭಿವೃದ್ಧಿ ಕಡೆಗೆ ಗಮನಕೊಡಬೇಕೆಂದು ಹೇಳುತ್ತೇನೆ. ಕೊಳಚೆ ಪ್ರದೇಶಗಳ ಅಭಿವೃದ್ಧಿಗಾಗಿ ೯೦೦ ಲಕ್ಷ ರೂಪಾಯಿ ಕೊಟ್ಟಿದ್ದಾರೆ, ಈ ಹಣವನ್ನು ನ್ಯಾಯವಾಗಿ ವಿನಿಯೋಗ ಮಾಡಿದ್ದರೆ, ಮನೆಗಳನ್ನು ಇನ್ನಿತರ ಅನುಕೂಲಗಳನ್ನು ಮಾಡಿಕೊಡಬಹುದಾಗಿತ್ತು. ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುವವರು ನಿನ್ನೆ ಮೊನ್ನೆ ಬೆಂಗಳೂರಿಗೆ ಬಂದವರಲ್ಲ, ೨೦-೨೫ ವರ್ಷಗಳ ಹಿಂದೆ ಬಂದು, ವಿಧಿಯಿಲ್ಲದ ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೆ. ಅವರನ್ನು ವಕ್ಕಲೆಬ್ಬಿಸುವುದು ಸರಿಯಲ್ಲ. ಕಲ್ಕತ್ತ ಪಟ್ಟಣದಲ್ಲಿ ವಿಪರೀತಜನರಿದ್ದಾರೆ.ರಸ್ತೆಗಳ ಮೇಲೆ ಮತ್ತು ಬದಿಯಲ್ಲಿ ಚಿಕ್ಕಪುಟ್ಟ ಪೆಟ್ಟಿ ಶಾಪುಗಳನ್ನು ಇಟ್ಟುಕೊಂಡು ಜೀವನ ಮಾಡುತ್ತಾರೆ. ಅವರು ಯಾವ ರೀತಿಯಲ್ಲೂ ಅಲ್ಲಿಂದ ಎಬ್ಬಿಸುವುದಿಲ್ಲ. ಆದ್ದರಿಂದ ಕೊಳಚೆ ಪ್ರದೇಶದಲ್ಲಿ ವಾಸ ಮಾಡುವಂಥ ಜನರ ಬಗ್ಗೆ ಮಾನವೀಯತೆಯಿಂದ ಕಳಕಳಿಯನ್ನು ಇಟ್ಟುಕೊಂಡು ಕೆಲಸ ಮಾಡಬೇಕು. ಈಗಾಗಲೇ ೨೦ ಸ್ಲಂಗಳನ್ನು ಕ್ಲಿಯರ್ ಮಾಡಲಾಗಿದೆ, ಇನ್ನು ೨೦೦ ಸ್ಲಂಗಳು ಇರಬಹುದು. ಅವುಗಳ ವಿಚಾರದಲ್ಲಿ ಏತಕ್ಕೆ ಶೀಘ್ರವಾಗಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬಾರದೆಂದು ಹೇಳುತ್ತೇನೆ. ಮುಳಬಾಗಿಲು ಮತ್ತು ಕೋಲಾರ ಮುನಿಸಿಪಾಲಿಟಿಗಳ ವಿಚಾರದಲ್ಲಿ ಹೇಳುವುದಾದರೆ, ಯಾವುದೇ ರೀತಿಯ ಅನುಕೂಲಗಳನ್ನು ಕಲ್ಪಿಸಿಕೊಟ್ಟಿಲ್ಲ. ಮೊನ್ನೆ ಮಂತ್ರಿಯವರು ಉತ್ತರ ಕೊಡುತ್ತಾ, ಒಂದೂವರೆ ಲೀಟರ್ ನೀರು ಕೊಡುತ್ತಾರೆಂದು ತಿಳಿಸಿದ್ದಾರೆ. ಸ್ವಾಮಿ, ೩೦ ಲೀಟರ್ ನೀರು ಕೊಡುವುದಕ್ಕೆ ಬದಲಾಗಿ ಒಂದೂವರೆ ಲೀಟರ್ ನೀರು ಕೊಡುತ್ತಿದ್ದಾರೆ, ದುರಾದೃಷ್ಟವಶಾತ್ ಅದು ಹಾಗೆ ನಡೆದುಕೊಂಡು ಬಂದಿದೆ. ಜನ ಕೂಡ ಹಾಗೆ ಬದುಕುತ್ತಿದ್ದಾರೆ. ಬೆಂಗಳೂರು ನಗರದಲ್ಲಿ ೩೦ ಲೀಟರ್ ಕೊಡುತ್ತಿದ್ದಾರೆ. ಕೊಳವೆ ಬಾವಿಗಳನ್ನು ಕೊಟ್ಟಿದ್ದಾರೆ ಸಾಕಷ್ಟು ನೀರು ಸರಬರಾಜು ಆಗುತ್ತಿಲ್ಲ. ಕುಡಿಯುವ ನೀರಿನ ವಿಚಾರದಲ್ಲಿ ಮಾನ್ಯ ಮಂತ್ರಿಯವರು ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಪುರಸಭೆಗಳ ಹಣಕಾಸಿನ ವಿಚಾರದಲ್ಲಿ ಹೇಳುವುದಾದರೆ, ಮನೆ ಕಂದಾಯವನ್ನು ವಸೂಲಿ ಮಾಡುವುದರಲ್ಲಿ ಸರಿಯಾದ ವ್ಯವಸ್ಥೆ ಮಾಡಬೇಕು. ಬೆಂಗಳೂರು ನಗರದಲ್ಲಿ ಸರ್ಕಾರದವರೇ ಕೊಟ್ಟಿರತಕ್ಕ ಲೆಕ್ಕದ ಪ್ರಕಾರ ೮ ಕೋಟಿ ರೂಪಾಯಿ ಬಾಕಿ ಇದೆ. ದೊಡ್ಡ ದೊಡ್ಡವರಿಂದ ಬರಬೇಕಾದ ಕಂದಾಯವನ್ನು ಕಡ್ಡಾಯವಾಗಿ ವಸೂಲು ಮಾಡುವಂಥ ಕ್ರಮ ತೆಗೆದುಕೊಳ್ಳಬೇಕು. ಸಣ್ಣಪುಟ್ಟವರು ತೆರಿಗೆಯನ್ನು ಕೊಡುತ್ತಾರೆ. ನಗರ ಪ್ರದೇಶಗಳ ಜನರಿಗೆ ಅವಶ್ಯಕವಾದ ನೀರು, ದೀಪ ಹಾಗೂ ರಸ್ತೆಗಳ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ.

೫-೦೦ ಪಿ.ಎಂ.

ಇನ್ನು ವೈದ್ಯಕೀಯ ಸೇವೆಗಳ ಬಗ್ಗೆ, ನಮ್ಮ ಗೌಡರು ಇದ್ದಿದ್ದರೆ ಚೆನ್ನಾಗಿತ್ತು. ಈ ವೈದ್ಯಕೀಯ ಸೇವೆಗಳ ಬಗ್ಗೆ ಯೋಚನೆ ಮಾಡಿದರೇನೇ ದು:ಖವಾಗುತ್ತದೆ. ನಮ್ಮ ಕೋಲಾರದಲ್ಲಿ ಎಸ್‌ಎನ್‌ಆರ್ ಆಸ್ಪತ್ರೆ ಎಂದು ಒಂದು ಇದೆ. ಶ್ರೀ ಯಡಿಯೂರಪ್ಪನವರು ಹೇಳಿದ ಹಾಗೆ; ಇನ್ನೂ ದುರ್ನಾತ, ದುರ್ವಾಸನೆಯಿಂದ ಕೂಡಿದೆ. ಯಾರಾದರೂ ದುರಾದೃಷ್ಟವಶಾತ್ ಕಾಯಿಲೆ ಬಿದ್ದು ಅಲ್ಲಿಗೆ ಹೋದರೆ ಇನ್ನು ಯಾವ್ಯಾವ ಕಾಯಿಲೆ ಬಂದು ಅಲ್ಲಿ ತಗುಲಿಕೊಳ್ಳುತ್ತದೋ ಎಂಬ ಭಯ. ಅಂಥಾ ಆಸ್ಪತ್ರೆ ಅದಾಗಿದೆ.

ಈ ಆಸ್ಪತ್ರೆಗಳಲ್ಲಿ ಬೇಕಾದಷ್ಟು ಡಾಕ್ಟರುಗಳುಂಟು. ಆದರೆ ಒಬ್ಬರಿಗೂ ನಿಷ್ಠೆ ಇಲ್ಲ. ಪ್ರತಿಯೊಬ್ಬರೂ ಪ್ರೈವೇಟ್ ಪ್ರಾಕ್ಟಿಸ್ ಇಟ್ಟುಕೊಂಡಿದ್ದಾರೆ. ಆಸ್ಪತ್ರೆಗೆ ಕಾಯಿಲೆಗೋಸ್ಕರ ಯಾರಾದರೂ

ಬಂದರೆ 'ಇಲ್ಲಿ ಆಗೋಲ್ಲ ನನ್ನ ಮನೆಗೇ ಬಂದುಬಿಡಪ್ಪ' ಎಂದು ಹೇಳಿಬಿಡುತ್ತಾರೆ. ಆಸ್ಪತ್ರೆಗಳಲ್ಲಿ ಏನೂ ಮುತುವರ್ಜಿ ವಹಿಸದ ಅವರು ಮನೆಯಲ್ಲಿ ಬೇಕಾದಷ್ಟು ವಹಿಸುತ್ತಾರೆ. ಇದು ಎಲ್ಲ ಕಡೆಯೂ ಇದೆ. ಉದಾಹರಣೆಗೆ ಬೆಂಗಳೂರಿನಲ್ಲಿ ವಿಕ್ಟೋರಿಯಾ ಆಸ್ಪತ್ರೆ ಇದ್ದು ಅದರಲ್ಲಿ ಒಳ್ಳೊಳ್ಳೆಯ ಪೋಸ್ಟ್‌ನಲ್ಲಿದ್ದರೂ ಕೂಡ ಅವರೆಲ್ಲ ಪ್ರೈವೇಟ್ ನರ್ಸಿಂಗ್ ಹೋಂ ಇಟ್ಟುಕೊಂಡಿರುತ್ತಾರೆ. ಇಲ್ಲ ಬೇರೆಯವರ ನರ್ಸಿಂಗ್ ಹೋಂಗಳಲ್ಲಿ ವಿಸಿಟಿಂಗ್ ಡಾಕ್ಟರ್‌ಗಳಾಗಿರುತ್ತಾರೆ. ಏನೋ ಬೇರೆ ಗತಿಯಿಲ್ಲ ಎಂದು ಸತ್ತರೂ ಸರಿ ಎನ್ನುವವರು ಮಾತ್ರ ಆಸ್ಪತ್ರೆಗಳಲ್ಲಿ ಬಿದ್ದಿರಬೇಕು. ಅಂಥಾ ಪರಿಸ್ಥಿತಿ ಇದೆ. ಇಂಥಾ ಡಾಕ್ಟರುಗಳನ್ನು ಉತ್ಪಾದಿಸಲು ನಮ್ಮಲ್ಲಿ ೧೮ ಮೆಡಿಕಲ್ ಕಾಲೇಜುಗಳಿವೆ. ಎಲ್ಲ ಬೋಗಸ್ಸು, ದುಡ್ಡಿಗಾಗಿ ವಿದ್ಯೆ ಮಾರುವವರು ಇವರು.

ಇಂಥವರ ಜೊತೆಗೆ ನಕಲಿ ಡಾಕ್ಟರುಗಳು ಇದ್ದಾರೆ, ಇವರು ಎಷ್ಟಿದ್ದಾರೆಂಬುದನ್ನು ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಮೆಡಿಕಲ್ ಕಾಲೇಜಿನವರು ೮ ಜನ ಇದ್ದರೆ ಈ ನಕಲಿಯವರು ೨೦ ಇರುತ್ತಾರೆ. ಇವರಿಗೆ ಯಾವುದೋ ಒಂದು ಡಿಗ್ರಿ ಬೇರೆ ಹಾಕಿಕೊಂಡಿರುತ್ತಾರೆ, ಅಂಥ ಒಬ್ಬರನ್ನು ನಾವು ಸಂಮ್ಮಾನೆ ಮೊನ್ನೆ ನಮ್ಮ ಬಾರ್ ಆಫ್ ಕೌನ್ಸಿಲ್‌ನಲ್ಲಿ ಒಬ್ಬರನ್ನು ಕೇಳಿದರೆ ಅವರು ತಮಾಷೆಗೆ ಐಯಾಮ್ ಎ ಡಾಕ್ಟರ್ ಆಫ್ ಅನಿಮಲ್ಸ್ ಅಂಡ್ ಪೀಪಲ್ಸ್ ಎಂದು ಹೇಳಿದರು. ಜನಗಳ ದೃಷ್ಟಿಯಲ್ಲಿ ಅವರೂ ಒಬ್ಬ ಡಾಕ್ಟರು. ಇಂಥವರು ಏನಿಲ್ಲ ಎಂದರೂ ದಿನಕ್ಕೆ ನಾಲ್ಕೈದು ಜನರನ್ನು ಸಾಯಿಸುತ್ತಿದ್ದಾರೆ. ಮಾನ್ಯ ತಿಮ್ಮೇಗೌಡರು ಏನು ಫ್ಯಾಮಿಲಿ ಪ್ಲಾನಿಂಗ್ ಎಂದು ಹೇಳುತ್ತಿದ್ದಾರೋ ಆ ಕೆಲಸವನ್ನು ಸರ್ಕಾರಕ್ಕೆ ಒಂದು ಪೈಸೆ ಕೂಡ ಖರ್ಚಿಲ್ಲದೆ ಇವರೇ ಮಾಡಿಬಿಡುತ್ತಾರೆ. ಇವರು ಎಂಥೆಂಥದು ಮಾಡುತ್ತಾರೆಂದರೆ ಮುಳಬಾಗಿಲನಲ್ಲಿ ಒಬ್ಬಾಕೆ ಅಬಾರ್ಷನ್ ಮಾಡಿಸಿಕೊಳ್ಳಲೆಂದು ಹೋದರೆ ಒಬ್ಬ ಪ್ರೈವೇಟ್ ಡಾಕ್ಟರ್ ಆವಳನ್ನು ಕೊಂದೇಹಾಕಿಬಿಟ್ಟ. ಬಾಗೇಪಲ್ಲಿಯಲ್ಲಿ ೧೫ ವರ್ಷದ ಒಬ್ಬ ಹುಡುಗ ನಕಲಿ ಡಾಕ್ಟರಿಂದ ಇಂಜೆಕ್ಷನ್ ಪಡೆದು ಸತ್ತುಬಿದ್ದ. ಅಂದು ಓಡಿಹೋದ ಡಾಕ್ಟರು ಮೂರು ತಿಂಗಳು ಕಳೆದರೂ ವಾಪಸ್ಸು ಬಂದಿಲ್ಲ, ಬಂದರೆ ಜನ ಅವನಿಗೆ ಎಕ್ಕಿ ಸಾಯಿಸಿಬಿಡುತ್ತಾರೆ. ಇಂಥವರು ಸಾವಿರಾರು ಜನ ಇದ್ದಾರೆ. ಇಂಥ ಅರೆಬೆಂದವರನ್ನೆಲ್ಲ ಕೂಡಿಹಾಕಿ ಅವರನ್ನು ಟ್ರೈನ್‌ಅಪ್ ಮಾಡಿ ಅನಂತರ ಬೇಕಾದರೆ ಅಂಥವರ ಸೇವೆಯನ್ನು ಬಳಸಿಕೊಳ್ಳಿ.

ಈ ಡ್ರಗ್ಸ್ ಇನ್ಸ್‌ಪೆಕ್ಟರ್ಸ್ ಎಂದು ಒಂದು ಬ್ಯಾಚ್ ಇದೆ. ಇವರೆಲ್ಲ ಡಿ. ಫಾರ್ಮ ಮಾಡಿ ಬಂದಿರುತ್ತಾರೆ.

ಶ್ರೀ ಪಿ.ಸಿ. ಮುನಿಸ್ವಾಮಪ್ಪ – ಬಾಗೇಪಲ್ಲಿಯಲ್ಲಿ ನಕಲಿ ಡಾಕ್ಟರು ಎಂದು ಹೇಳಿದಿರಲ್ಲ, ಅವರು ಯಾರು ಎಂದು ಗೊತ್ತಾಗಲಿ.

ಶ್ರೀ ಆರ್. ವೆಂಕಟರಾಮಯ್ಯ.— *

ಶ್ರೀ ರಮೇಶ್‌ಕುಮಾರ್.— * ಬಗ್ಗೆ ಹೇಳುತ್ತಿದ್ದಾರೆ, ಅವರುಇಲ್ಲಿ ಇಲ್ಲದಿರುವುದರಿಂದ ಅವರ ಬಗ್ಗೆ ಹೇಳುವುದು ಸರಿಯಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.— ಏಕೆಂದರೆ * ರವರಶಿಷ್ಯ ಎಂದು ವೆಂಕಟರಾಮಯ್ಯನವರು ಹೇಳುವುದಾದರೆ ಅವರಿಗೆ ಸಂಬಂಧ ಇದೆಯೋ ಇಲ್ಲವೋ ಹೇಗೆ ಹೇಳುವುದು ? ಇದು ನಮಗೆ ಗೊತ್ತಿಲ್ಲದಿರುವುದರಿಂದ ಇದನ್ನು ಕಡತದಿಂದ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು :— ಅದನ್ನು ಎಕ್ಸ್‌ಪಂಜ್ ಮಾಡಿ.

ಶ್ರೀ ಆರ್. ವೆಂಕಟರಾಮಯ್ಯ :— ಇನ್ನು ಡ್ರಗ್ಸ್ ಇನ್ಸ್‌ಪೆಕ್ಟರ್ ಬಗ್ಗೆ ಹೇಳಬೇಕೆಂದರೆ ಮುಳಬಾಗಿಲಿನಲ್ಲಿ ಒಬ್ಬ ಹುಡುಗ ಒಂದು ಪಿಲ್ಸ್ ಕೊಂಡು ನುಂಗಿದವನು ಸತ್ತುಹೋದ. ಆ ಪಿಲ್ಸ್ ಎಷ್ಟು ಔಟ್‌ಡೇಟೆಡೋ ಅಥವಾ ಅಡಲ್ಟ್ರೇಷನ್ ಆಗಿದ್ದೋ ಎಂಬುದನ್ನು ಇವರು ಸರಿಯಾಗಿ ನೋಡದೆ ಇದ್ದುದರಿಂದ ಹೀಗಾಯಿತು. ಇವರು ಬರೀ ಯಾವ್ಯಾವ ಅಂಗಡೀಲಿ ಎಷ್ಟೆಷ್ಟು 'ಮಾಮೂಲು' ವಸೂಲು ಮಾಡಬೇಕು ಎಂಬುದನ್ನು ಯೋಚಿಸುತ್ತಾರೆ. ಅಷ್ಟೇ ಇವರ ಕೆಲಸ. ಇಂಥವರ ಮೇಲೆ ಮಾನ್ಯ ತಿಮ್ಮೇಗೌಡರು ಹೇಗೆ ಕಂಟ್ರೋಲ್ ತರುತ್ತಾರೆ ಎಂದು ಕೇಳುತ್ತೇನೆ. ಸರಿಯಾದ ಡ್ರಗ್ ಇಲ್ಲದೆಹೋದರೆ ನಮ್ಮ ಜನ

* ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿರುತ್ತದೆ.

ಅನ್ಯಾಯವಾಗಿ ಸಾಯುತ್ತಾರೆ. ಇಂಥ ಡ್ರಗ್ಸ್ ಆಗಲೇ ಹೇಳಿದಂಥ ನಕಲಿ ಡಾಕ್ಟರ್‌ಗಳ ಕೈಲಿ ಸಿಕ್ಕಿದರೆ ಪರಿಣಾಮ ತಾವೇ ಊಹಿಸಿಕೊಳ್ಳಿ. ಈ ನಕಲಿ ಡಾಕ್ಟರ್‌ಗಳಾಗುವವರು ಅಫಿಡವಿಟ್‌ಗೆ ನಮ್ಮ ಹತ್ತಿರ ಸೈನ್ ಹಾಕಿಸಿಕೊಳ್ಳುತ್ತಾರೆ. ಅದೇನೋ ಕೊಯಂಬತ್ತೂರಿನಲ್ಲಿ ಯಾವುದೋ ಕಾಲೇಜು ಇವರಿಗೆಲ್ಲ ಡಿಗ್ರಿ ಕೊಡುತ್ತದಂತೆ. ಆ ಡಿಗ್ರಿ ಹಾಕ್ಕೊಂಡು ಇವರು ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ ಎಂದು ಬೋರ್ಡ್ ಹಾಕಿಕೊಂಡುಬಿಡುತ್ತಾರೆ. ಇವರು ಅನ್ಯಾಯ ಮಾಡುತ್ತಿದ್ದಾರೆ. ನಮ್ಮಲ್ಲಿ ಡಾಕ್ಟರ್ಸ್‌ಗೇನು ಕಡಿಮೆಯೇ ?

ವೈದ್ಯಕೀಯ ಕಾಲೇಜುಗಳ ಬಗ್ಗೆ ಎಷ್ಟು ಹೇಳಿದರೂ ಸಾಕಾಗುವುದಿಲ್ಲ. ಹಿಂದೆ ೧೬ ಇತ್ತು ಈಗ ೨ ಸೇರಿಸಿಬಿಟ್ಟಿದ್ದಾರೆ. ಡಾ. ಅಂಬೇಡ್ಕರ್ ಹೆಸರಿನಲ್ಲಿ ಬೇರೆ ಒಂದು ಕಾಲೇಜು ಮಾಡಿಕೊಂಡಿದ್ದಾರೆ. ಅಲ್ಲಿ ಬೇರೆ ಏನೂ ಇರುವುದಿಲ್ಲ. ಕರ್ನಾಟಕದವರಿಗೂ ಸೀಟು ಸಿಗುವುದಿಲ್ಲ. ಈಗ ಕೋಲಾರದಲ್ಲಿ ಒಂದು ಕೊಟ್ಟಿದ್ದಾರೆ. ಪ್ರತಿ ಸೀಟಿಗೆ ೨ ಲಕ್ಷದಿಂದ ೫ ಲಕ್ಷದವರೆಗೂ ಹಣ ಕೇಳುತ್ತಾರೆ. ಇಷ್ಟು ಕೊಟ್ಟು ಡಾಕ್ಟರಾದವನು ಆಸ್ಪತ್ರೆಗೆ ಬಂದ ತಕ್ಷಣ ಇಂಜೆಕ್ಷನ್ ಟ್ಯೂಬ್ ಕೈಲಿ ಹಿಡಿದು ೧೫ ಕೊಡು ೨೦ ಕೊಡು ಎನ್ನುತ್ತಾರೆ, ನಮ್ಮ ಕರ್ನಾಟಕದಲ್ಲಿ ಜಾತಿಗೊಂದು ಕಾಲೇಜು ಕೊಡುವ ಹಾಗಾಯಿತು. ದಯವಿಟ್ಟು ಈ ಸಂಖ್ಯೆಗೂ ಒಂದು ಮಿತಿ ಇರಲಿ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ,

ಒಬ್ಬ ಮಾನ್ಯ ಸದಸ್ಯರು :—ಯಾವ ಮಂತ್ರಿಗಳನ್ನು ಕೇಳುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ :—ನ್ಯಾಯವಾಗಿ ನೋಡಿದರೆ ಮಾನ್ಯ ತಿಮ್ಮೇಗೌಡರು ಮತ್ತು ರಘುಪತಿಯವರನ್ನು ಕೇಳಬೇಕು. ದುರಾದೃಷ್ಟವಶಾತ್ ಈಗ ಕ್ಯಾಬಿನೆಟ್‌ನಲ್ಲಿ ತೀರ್ಮಾನವಾಗಿ, ಯಾವ್ಯಾವುದೋ ಫೋರ್ಸ್ ತಂದು ಯಾರ್‍ಯಾರು ಮಾಡಿಸಿಕೊಂಡಿದ್ದಾರೆಂಬುದು ಎಲ್ಲರಿಗೂ ಗೊತ್ತು. ಒಂದು ಕೋಟಿ ಇನ್‌ವೆಸ್ಟ್ ಮಾಡಿದರೆ ಸಾಕು. ಸ್ಟಾರ್ಟ್ ಮಾಡಿದವರು ಒಂದು ವರ್ಷದಲ್ಲಿ ನಾಲ್ಕು ಕೋಟಿ ಸಂಪಾದಿಸಬಹುದು. ಸೀಟ್ ಹಂಚಿಕೆಯಲ್ಲಿ ಬಹಳ ಅನ್ಯಾಯ ಇದೆ, ಇದನ್ನು ಕರ್ಬ್ ಮಾಡಬೇಕು.

ಸ್ಲಮ್ಸ್ ಬಗ್ಗೆ ಒಂದು ಹೇಳುತ್ತೇನೆ: ಕರ್ನಾಟಕದಲ್ಲಿ ೯೬೫ ಸ್ಲಮ್ಸ್ ಇದೆ. ಬೆಂಗಳೂರಿನಲ್ಲಿ ೪೦೦ ಸ್ಲಮ್ಸ್ ಇವೆ. ೫೬೫ ಬೇರೆ ನಗರಗಳಲ್ಲಿ ಇವೆ, ಈ ಬೋರ್ಡಿಗೆ ೬.೧೨ ಲಕ್ಷ ದುಡ್ಡು ಕೊಟ್ಟಿದ್ದಾರೆ. ಇದರಲ್ಲಿ ಎಷ್ಟು ಜನಕ್ಕೆ ಏನು ಮಾಡುತ್ತಾರೆ ಸ್ವಾಮಿ? ದುರಾದೃಷ್ಟವಶಾತ್ ಈ ಸ್ಲಂಗಳಲ್ಲಿ ಹಳ್ಳಿಗಳಿಂದ ಬಂದ ಜನ ಗುಡ್ಸು ಹಾಕ್ಕೊಂಡಿರ್ತಾರೆ. ಲೈಟಿಲ್ಲ, ನೀರಿಲ್ಲ, ರೋಡ್ಸಿಲ್ಲ, ಈ ಥರ ಇರುವಾಗ ಇವರು ೧೮೨ ಲಕ್ಷ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಾರೆ.

ಕೊಳಚೆಪ್ರದೇಶಗಳ ಬಗ್ಗೆ ಹೇಳುವುದಾದರೆ, ಕೊಳಚೆಪ್ರದೇಶ ನಿರ್ಮೂಲನ ಮಾಡಲಿಕ್ಕೆ ತಾವು ಕಳೆದ ಸಾರಿ ೪೧೯ ಟೆನಮೆಂಟ್ಸ್ ಕಟ್ಟಿಸಿದ್ದೀರಿ. ಇದು ಬಹಳ ಕಡಿಮೆಯಾಯಿತು, ಅದರ ಬಗ್ಗೆ ಹೆಚ್ಚು ಗಮನವನ್ನು ಕೊಟ್ಟು ಅದನ್ನು ಜಾಸ್ತಿ ಮಾಡಬೇಕು. ೧೯೮೫-೮೬ರಲ್ಲಿ ೨೫೦೦ ಟೆನಮೆಂಟ್ಸ್ ಕಟ್ಟಿಸಿದ್ದೀರಿ. ಇದು ಮೊದಲಿಗಿಂತ ಕಡಿಮೆಯಾಗಿದೆ ಅದನ್ನು ಜಾಸ್ತಿ ಮಾಡಬೇಕು. ೩೫೨ ಲಕ್ಷ ರೂಪಾಯಿ ಹಣವನ್ನು ಅದಕ್ಕಾಗಿ ಕೊಟ್ಟಿದ್ದೀರಿ. ಅದು ಕೂಡ ಬಹಳ ಕಡಿಮೆಯಾಯಿತು ಅದನ್ನು ಹೆಚ್ಚಿಗೆ ಮಾಡಲಿಕ್ಕೆ ಮಾನ್ಯ ಲಕ್ಷ್ಮೀಸಾಗರ್‌ರವರು ಗಮನ ಕೊಡಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ರಾಯಚೂರಿನಲ್ಲಿ ಒಂದು ಸಮ್ಮೇಳನ ನಡೆಯಿತು. ಕೊಳಚೆಪ್ರದೇಶಗಳು ರಾಜ್ಯದ ಎಲ್ಲ ಕಡೆ ಇವೆ. ಕೊಳಚೆಪ್ರದೇಶ ಕೋಲಾರದಲ್ಲಿದೆ, ಮುಳಬಾಗಿಲಿನಲ್ಲಿದೆ, ಶಿಡ್ಲಘಟ್ಟದಲ್ಲಿದೆ ಕೊಳಚೆಪ್ರದೇಶಗಳು ಎಲ್ಲ ಕಡೆ ಉಂಟು. ಕೊಳಚೆಪ್ರದೇಶಗಳ ಜ್ಞಾಪಕ ಯಾವಾಗ ಬರುತ್ತದೆಂದರೆ ಚುನಾವಣೆ ಬಂದಾಗ. ಆಗ ನಾವೂ ಅವರ ಹತ್ತಿರ ಹೋಗುತ್ತೇವೆ ನೀವೂ ಹೋಗುತ್ತೀರಿ. ಓಟು ಹಾಕಲಿಕ್ಕೆ ಅಲ್ಲಿರತಕ್ಕ ಜನಗಳ ಜ್ಞಾಪಕ ಚುನಾವಣೆ ಬಂದಾಗ ಎಲ್ಲರಿಗೂ ಬರುತ್ತದೆ. ಆಮೇಲೆ ಅಲ್ಲಿರತಕ್ಕ ಜನರು ಯಾರಿಗೂ ಬೇಕಾಗಿಲ್ಲ. ಚುನಾವಣೆ ಆದಮೇಲೆ ಕೊಳಚೆಪ್ರದೇಶಗಳಲ್ಲಿರತಕ್ಕ ಜನರನ್ನು ಯಾರೂ ಗಮನಿಸುವುದಿಲ್ಲ. ಅಂತಹ ಒಂದು ಪರಿಸ್ಥಿತಿ ಎಲ್ಲ ಕಡೆ ಇದೆ. ಯಾವ ಪಕ್ಷದವರೇ ಆಗಲಿ ಕೊಳಚೆಪ್ರದೇಶಗಳ ಬಗ್ಗೆ ಗಮನಕೊಡಬೇಕು, ಕೊಳಚೆಪ್ರದೇಶಗಳಿಗಾಗಿ ಕೊಟ್ಟಿರುವ ಹಣ ಬಹಳ ಕಡಿಮೆಯಾಯಿತು ಅದನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಂಸದೀಯ ವ್ಯವಹಾರಗಳ ಬಗ್ಗೆ ಜಾಸ್ತಿ ಹೇಳುವುದಿಲ್ಲ. ಶಾಸಕರುಗಳಿಗೆ ಶೀಘ್ರಲಿಪಿಗಾರರ ಸೌಲಭ್ಯವನ್ನು ಕಲ್ಪಿಸಿ ಕೊಡಬೇಕು. ನಾಲ್ಕೈದು ಜನ ಅಥವಾ ಹತ್ತು ಜನ ಶಾಸಕರಿಗೆ ಒಬ್ಬ ಶೀಘ್ರ

ಲಿಪಿಗಾರರನ್ನು ಒದಗಿಸಿ ಕೊಡಬೇಕು. ಎಲ್ಲ ಶಾಸಕರೂ ಶೀಘ್ರಲಿಪಿಗಾರರ ಸೇವೆಯನ್ನು ಪಡೆದು ಕೊಳುವುದಿಲ್ಲ. ಒಬ್ಬಿಬ್ಬರು ಉಪಯೋಗ ಮಾಡಿಕೊಳ್ಳುತ್ತಾರೆ. ತಮಗೆ ಪತ್ರ ಬರೆಯಬೇಕಾದರೂ ಬೇರೆಯವರನ್ನು ರಿಕ್ವೆಸ್ಟ್ ಮಾಡಿ ಕೊಳ್ಳಬೇಕು ಇಂತಹ ಪರಿಸ್ಥಿತಿಯಲ್ಲಿ ಶೀಘ್ರಲಿಪಿಗಾರರು ಇದ್ದರೆ ಅನುಕೂಲವಾಗುತ್ತದೆ.

ಇನ್ನು ವಿಧಾನಮಂಡಲ ಕಾರ್ಯಾಲಯದ ಬಗ್ಗೆ ಮಾತನಾಡಬಾರದೆಂದು ತಾವು ಹೇಳುತ್ತಾ ಇರು ತ್ತೀರಿ. ಇಲ್ಲಿ ಕೆಲಸ ಮಾಡತಕ್ಕ ಅಧಿಕೃತ ವರದಿಗಾರರು ಏನಿದ್ದಾರೆ ಅವರು ಜನವರಿ ೨೭, ೨೮ರಂದು ಅಧಿವೇಶನ ನಡೆಯುವಾಗ ತಮ್ಮ ಬೇಡಿಕೆಗಳನ್ನು ಇಟ್ಟು ಮುಷ್ಕರ ಹೂಡಿದ್ದರು ಅದು ದುರಾದೃಷ್ಟಕರ ಅವರ ಬೇಡಿಕೆಗಳು ಇತ್ಯರ್ಥವಾಗದೆ ಹಾಗೆಯೇ ಇವೆಯೆಂದು ತಿಳಿದುಬಂದಿದೆ. ತಾವು ಕೂಡ ಆ ಬಗ್ಗೆ ವಿರೋಧಪಕ್ಷಗಳ ನಾಯಕರುಗಳನ್ನು ಕರೆಸಿ ಅವರ ಬೇಡಿಕೆಗಳನ್ನು ಸೆಟಲ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೀರಿ. ಅವರು ಪುನಃ ಮುಷ್ಕರ ಮಾಡುವಂತಹ ಪರಿಸ್ಥಿತಿ ಬರಬಾರದು. ವಿಧಾನಮಂಡಲ ದಲ್ಲಿಯೇ ಡಿಸ್‌ಪ್ಯೂಟ್ ಇದೆ ಅಂದರೆ ಜನ ನಮ್ಮನ್ನು ನಂಬುವುದಿಲ್ಲ. ಅಧಿಕೃತ ವರದಿಗಾರರ ಬೇಡಿಕೆಗಳನ್ನು ಸೆಟಲ್‌ಮೆಂಟ್ ಮಾಡಿಯೆಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ವಿರೋಧ ಪಕ್ಷದ ನಾಯಕರಿಂದ ವೈಯಕ್ತಿಕ ಹೇಳಿಕೆ

ಕೆ.ಪಿ.ಸಿ.ಸಿ. (I) ನ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಎಚ್. ರಂಗನಾಥ್‌ರವರ ಮೇಲೆ ನಡೆದ ಹಲ್ಲೆಯ ಬಗ್ಗೆ ಮಂತ್ರಿಗಳವರು ಉತ್ತರ ನೀಡುವಾಗ ಶ್ರೀ ಎಸ್. ಬಂಗಾರಪ್ಪನವರ ಹೆಸರನ್ನು ಸೇರಿಸಿದ್ದುದರ ಬಗ್ಗೆ.

ಶ್ರೀ ಎಸ್. ಬಂಗಾರಪ್ಪ :— ಮಾನ್ಯ ಅಧ್ಯಕ್ಷರೆ...ಕೆ.ಪಿ.ಸಿ.ಸಿ. (I) ನ ಮಾಜಿ ಅಧ್ಯಕ್ಷರಾದ ಶ್ರೀ ಕೆ.ಎಚ್. ರಂಗನಾಥ್‌ರವರ ಮೇಲೆ ನಡೆದ ಹಲ್ಲೆಯ ಬಗ್ಗೆ ನನ್ನ ಹೆಸರನ್ನು ಸೇರಿಸಿರುವುದರಿಂದ ನಾನೊಂದು ಸ್ವಂತ ಹೇಳಿಕೆಯನ್ನು ನೀಡ ಬೇಕಾಗಿದೆ......

ಶ್ರೀ ರಾಜವರ್ಧನ:—ಮಾನ್ಯ ವಿರೋಧಪಕ್ಷದ ನಾಯಕರು ಯಾವ ನಿಯಮದ ಕೆಳಗಡೆ ಪ್ರಸ್ತಾಪ ಮಾಡುತ್ತಿದ್ದಾರೆಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ,

ಶ್ರೀ ರಮೇಶ್‌ಕುಮಾರ್.—ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾಲೋಪವನ್ನು ಎತ್ತುತ್ತಿದ್ದೇನೆ.

ಅಧ್ಯಕ್ಷರು.—ಮೊದಲು ಮಂತ್ರಿಗಳು ತಮ್ಮ ಕ್ರಿಯಾಲೋಪವನ್ನು ಹೇಳಲಿ ಆಮೇಲೆ ತಾವು ಹೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ನಮ್ಮ ನಿಯಮಗಳ ಪ್ರಕಾರ. . . . .

Sir, with regard to the Personal Explanation, I would like to quote Rule 317 of the Rules of Procedure and Conduct of Business here. It reads thus.—

> "A member with the permission of the Speaker may make a personal explanation although there is no question before the House. But, in this case, no debatable matter may be brought forward and no debate shall arise."

Sir, this rule presup poses that you should decide in the first instance, whether permission for giving personal explanation should be given or not. Secondly, it is also necessary that you should decide, when and how it should be made. These two points are involved here. Sir, if you go back to the procedure that is laid